questioning the validity of the 'no-confidence' motion.

ಆದರೆ ತಾವಿದನ್ನು ಹೆಚ್ಚುಕಾಲ ವಿಳಂಬವಾದಮೇಲೆ ಚರ್ಚೆಗೆ ಅವಕಾಶ ಕೊಡುತ್ತಿದ್ದೀರಿ. 21ನೆಯ ತಾರೀಖು ಈ motion ನ್ನು ಸಭೆಯಲ್ಲಿಡಲಾಗಿತ್ತು. 153ನೆಯ ರೂಲ್ ಪ್ರಕಾರ "The Speaker shall intimate that leave is granted and the motion be taken up the next day or within three days thereafter" ಎಂದು ಹೇಳಿದೆ. ಇವೊತ್ತಿಗೆ ಈ ಸೂಚನೆ ಬಂದು ಆಗಲೇ 5 ದಿವಸಗಳಾಯಿತು. ಆದ್ದರಿಂದ ಈಗ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಸರಿಯೇ?

Mr. SPEAKER.—When was the leave granted?

Sri C. R. RANGE GOWDA.—21st.

Mr. SPEAKER.—Is it on Friday, the 21st? Sunday intervened.

ಶ್ರೀ ಸಿ. ಆರ್. ರಂಗೇಗೌಡ.—ತಾವು ಆ ಪಾಯಿಂಟ್‌ಆಫ್ ಆರ್ಡರನ್ನು ಗಮನಕ್ಕೆ ತೆಗೆದುಕೊಳ್ಳುವುದು ಸರಿಯೇ?

Mr. SPEAKER.—I am not upholding the point of order. The Member who wants to move the Motion might move.

Sri G. V. GOWDA.—You will have to clarify whether the particular rule is suspended or not.

Mr. SPEAKER.—The Hon'ble Members must kindly remember if they are serious about this motion or want to fritter away time. Today we have got only $3\frac{1}{2}$ hours, out of which $\frac{1}{2}$ hours is gone. Tomorrow I do not know if the House wants to sit in the morning. If it is to sit in the morning, it will be $2\frac{1}{2}$ hours. So, now we will have six hours and out of that we must see how many want to participate; what time will be required for the Leader of the Opposition to enunciate this and what time will be required for the Minister to reply. After that I have to apportion time for others. I do not know how many want to participate I would suggest that a consolidated list of those who support the motion may be given to me so that they may concentrate on the subject and participate properly and avoid repetition. That will maximise the utility of the time they have got. If the Members want, they may co-operate; otherwise I will allow it as it goes.

MOTION OF NO-CONFIDENCE IN THE COUNCIL OF MINISTERS

Motion to consider

†**Sri S. SHIVAPPA** (Sravanabelagola).—Mr. Speaker, Sir, I move:

"That this House has no confidence in the Council of Ministers for the following among other grounds:—

1. The concerned Minister has refused to institute a public enquiry into the affairs of the construction of the Sharavathi Power Project particularly about the recent arbitration award in favour of the Contractors, in view of rampant corruption cited in Resources and Economy Committee Report.
2. Indifferent attitude of the Education Minister towards the agitation by the students for getting their grievances redressed by way of reduction in the recent College Fee rise in various Government Colleges in the State.
3. The partisan attitude of the Government in recommending three persons to the State Legislative Council and thereby offending the provisions of the Constitution.
4. Failure to bring into force the Land Reforms as enacted by this House.
5. The failure of the Government in holding the soaring price line of the Essential Commodities like food grains."

Mr. SPEAKER.—Motion moved:

"That this House has no confidence in the Council of Ministers for the following among other grounds:—

1. The concerned Minister has refused to institute a public enquiry into the affairs of the construction of the Sharavathi power Project particularly about the recent arbitration

(MR. SPEAKER)

award in favour of the Contractors, in view of rampant corruption cited in Resources and Economy Committee Report.

2. Indifferent attitude of the Education Minister towards the agitation by the students for getting their grievances redressed by way of reduction in the recent College Fee rise in various Government Colleges in the State.

3. The partisan attitude of the Government in recommending three persons to the State Legislative Council and thereby offending the provisions of the Constitution.

4. Failure to bring into force the Land Reforms as enacted by this house.

5. The failure of the Government in holding the soaring price line of the Essential Commodities like food grains."

Now, before I call upon anybody to begin the debate, I would like to know what time the Hon'ble Leader of the Opposition will take.

Sri S. SHIVAPPA.—I may take an hour or an hour and a half.

Mr. SPEAKER.—What time the Government requires?

Sri S. NIJALINGAPPA.—An hour and fifteen minutes.

Mr. SPEAKER.—Does the Leader of the Opposition want one hour or 1½ hours?

Sri S. SHIVAPPA.—I will take one hour now and half an hour for reply.

Mr. SPEAKER.—It is an important occasion. What can we do within that short time?

Would you kindly tell your other friends? They are saying that 2 days ought not to have been given.

Sri S. SHIVAPPA.—Their contention is that non-official days should not be taken away.

Sri G. V. GOWDA.—It is not as per rules. That rule should have been suspended and business carried on.

Mr. SPEAKER.—How to reconcile it?

Sri B. HUTCHE GOWDA (Turuvekere).—This should have priority over all other business. It is not possible to get over it within five hours. When two persons take 2½ hours, what about other people?

Mr. SPEAKER.— If the Hon'ble Leader of the Opposition takes so much time, the Hon'ble Member says it will not be possible. I will give more time so long as it is in my hands.

Sri S. SHIVAPPA.—If the other Party is serious we do not want a holiday. Even on the 28th we are prepared to sit. Even if you give three or four days we are ready to sit.

Mr. SPEAKER.—You have time till tea break. We will see what we can do.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ನೂತನವಾಗಿ ಮಹಾಚುನಾವಣೆಗಳಾದ ನಂತರ ರಚಿಸಿದಂತಹ ಈ ಶಾಸನ ಸಭೆಗೆ ಜವಾಬ್ದಾರರಾಗಿರತಕ್ಕ ಈ ಮಂತ್ರಿಮಂಡಲದಮೇಲೆ ಮೊದಲನೆಯದಾಗಿ ಅವಿಶ್ವಾಸ ನಿರ್ಣಯವನ್ನು ಮನ್ನಣೆಮಾಡತಕ್ಕ ಪವಿತ್ರ ಕಾರ್ಯ ನನ್ನಮೇಲೆ ಬಿದ್ದಿದೆ. ಈ ಅವಿಶ್ವಾಸ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುವ ಕಾಲದಲ್ಲಿ ಐದು ಅಂಶಗಳನ್ನೊಳಗೊಂಡಂಥ ಒಂದು ನಿರ್ಣಯವನ್ನು ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ. ಈ ಸಭೆ ಷುರುವಾದಾಗಿನಿಂದ ಅಂದರೆ ಸಾಮಾನ್ಯವಾಗಿ 6 ತಿಂಗಳುಗಳಿಂದಲೂ ಬಡ್ಜೆಟ್ ಭಾಷಣ, ರಾಜ್ಯಪಾಲರ ಭಾಷಣ-ಇತ್ಯಾದಿ ಅಂಶಗಳಮೇಲೆಲ್ಲಾ ಚರ್ಚೆಯಾದಗಲೂ ಕೂಡ ಅನೇಕ ಅಂಶಗಳನ್ನು ಈ ಶಾಸನ ಸಭೆಯ ಮಾನ್ಯ ಸದಸ್ಯರು ನಾನು ಮೇಲೆ ಕಾಣಿಸಿರತಕ್ಕ ಐದು ವಿಚಾರಗಳಮೇಲೆ ಅನೇಕ ತರಹದಲ್ಲಿ ತಮ್ಮತಮ್ಮ ಸಲಹೆಗಳನ್ನು ಸರ್ಕಾರದ ಅವಗಾಹನೆಗೆ ತಂದಿದ್ದಾರೆ. ನಾನು ಮೊದಲನೆಯದಾಗಿ ಶರಾವತಿ ಪ್ರಾಜೆಕ್ಟ್ ವಿಷಯವಾಗಿ ಮಾತನಾಡುತ್ತೇನೆ. ಈ ಶರಾವತಿ ಯೋಜನೆ ಕಾರ್ಯ ನಮ್ಮ ಮೈಸೂರು ದೇಶದಲ್ಲಿರತಕ್ಕ ಒಂದು ದೊಡ್ಡ ಕಾಮಗಾರಿ. ಈ ಯೋಜನೆಯು ಅಂದಾಜು ಪ್ರಕಾರವಾಗಿ ಸುಮಾರು 80 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಒಂದು ಅಣೆಕಟ್ಟು ಯೋಜನೆಯಾಗಿದೆ. ಈ ಶರಾವತಿ ಪ್ರಾಜೆಕ್ಟ್ ಕಥೆ ಒಂದು ದೊಡ್ಡ ಕಥೆಯಾಗಿದೆ. ಮಹಾಭಾರತದ ಕಥೆಗಿಂತಲೂ ಒಂದು ದೊಡ್ಡ ಕಥೆಯಾಗಿದೆ ಎಂದು ನಾನು ಹೇಳಬಹುದು. ಬಹುಶಃ 1954ನೇ ಇಸವಿಯಲ್ಲಿ ಈ ಶರಾವತಿ ಪ್ರಾಜೆಕ್ಟ್ ಬಗ್ಗೆ ಪ್ರಪ್ರಥಮವಾಗಿ ಈ ದೇಶದಲ್ಲಿ ಅಂದಾಜು ತಯಾರು ಮಾಡಿ ಈ ಸಭೆಯಲ್ಲಿ ಮಂಡಿಸಿಲಾಯಿತೆಂದು ನಾನು ತಿಳಿಸುತ್ತೇನೆ. ನಂತರ 1954ನೇ ಇಸವಿಯಿಂದ ಇದನ್ನು ತೆಗೆದು

ಕೊಳ್ಳುತ್ತಿದ್ದಾರೆ. ಮೂಲ ಅಂದಾಜನ್ನು ಆವತ್ತಿನ ದಿವಸವೇ ಈ ಸಭೆಯ ಮುಂದೆ ಇಟ್ಟು ತಯಾರು ಮಾಡಲಾಗಿದೆ.

ಮೊದಲು ಈ ಶರಾವತಿಯ ಪ್ರಾಜೆಕ್ಟನ್ನು 27 ಕೋಟಿ ರೂಪಾಯಿಗಳಲ್ಲಿ ಕಟ್ಟಬೇಕೆಂದು ಒಂದು ಅಂದಾಜು ತಯಾರಾಯಿತು. ಆ ಮೇಲೆ 27 ಕೋಟಿಯಿಂದ 39 ಕೋಟಿಗೆ ಏರಿತು. ಆ ಮೇಲೆ 39 ಕೋಟಿಯಿಂದ 55 ಕೋಟಿಗೆ ಏರಿತು. 55 ಕೋಟಿಯಿಂದ ಈಗ 80 ಕೋಟಿ ಎಂದು ಹೇಳುತ್ತಿದ್ದಾರೆ. ಇಷ್ಟಕ್ಕೆ ಇದು ಮುಗಿಯುವ ಹಾಗಿಲ್ಲ. 100 ಕೋಟಿಯ ವರೆಗೂ ಇದು ಹೋಗಬಹುದು. ನಮ್ಮ ದೇಶದಲ್ಲಿ ಅನೇಕ ದೊಡ್ಡ ಧೊಡ್ಡ ಕಾಮಗಾರಿಗಳನ್ನು ಮಾಡಿದ್ದಾರೆ. ಹೆಸರಾಂತ ಮತ್ತು ಪ್ರಖ್ಯಾತ ಇಂಜಿನಿಯರ್ ಆದ ಸರ್. ಎಂ. ವಿಶ್ವೇಶ್ವರಯ್ಯನವರು ಇದ್ದಂಥ ದೇಶ ಇದು. ಕನ್ನಂಬಾಡಿ ಮುಂತಾದ ಅನೇಕ ದೊಡ್ಡ ದೊಡ್ಡ ಕಾಮಗಾರಿಗಳನ್ನು ಸರ್ಕಾರದ ನೇತೃತ್ವದಲ್ಲಿ ಭದ್ರತೆಯಿಂದ, ಸುರಕ್ಷಿತವಾಗಿ ಕಟ್ಟಿ ಇಡೀ ಇಂಡಿಯಾಧೇಶಕ್ಕೆ ಒಂದು ಒಳ್ಳೆಯ ಹೆಸರನ್ನು ಕೊಟ್ಟಿರುವ ದೇಶ ಈ ಮೈಸೂರು ದೇಶ. ಈ ದೇಶದಲ್ಲಿ ಶರಾವತಿಯ ಪ್ರಾಜೆಕ್ಟನ್ನು ಕಟ್ಟಿ ಎಲೆಕ್ಟ್ರಿಸಿಟಿಯನ್ನು ಉತ್ಪತ್ತಿಮಾಡಿ ಅನೇಕ ಕೈಗಾರಿಕೆಗಳಿಗೂ ವ್ಯವಸಾಯಕ್ಕೂ ಮತ್ತು ನಮ್ಮ ಧೇಶದಲ್ಲಿರತಕ್ಕ ಅನೇಕ ಉದ್ಯಮಗಳಿಗೂ ವಿದ್ಯುಚ್ಛಕ್ತಿಯನ್ನು ಬಹಳ ಶೀಘ್ರವಾಗಿ ಕೊಡಬೇಕೆಂಬ ಉದ್ದೇಶದಿಂದ ಈ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದರು. ಆ ಮೇಲೆ 1959ನೇ ಇಸವಿಯಲ್ಲಿ ಅಗಿನ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಾಗಿದ್ದ ಶ್ರೀ ಚೆನ್ನಬಸಪ್ಪನವರು ಈ ಸಭೆಯಲ್ಲಿ ಒಂದು ದೀರ್ಘವಾದ ಹೇಳಿಕೆಯನ್ನು ಕೊಟ್ಟು ಸಮರ್ಥನೆ ಮಾಡಿದ್ದಾರೆ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯ ಅಗತ್ಯ ಬಹಳ ಇದೆ. ಇದು ಬಹಳ ಶೀಘ್ರವಾಗಿ ನಮಗೆ ದೊರೆಯಬೇಕು. ಇದನ್ನು ಜಾಗ್ರತೆಯಾಗಿ ಬರಿಸಬೇಕಾದರೆ ಈ ಕೆಲಸವನ್ನು ಸರ್ಕಾರದ ಇಲಾಖೆಯ ಮೇಲ್ವಿಚಾರಣೆಯಲ್ಲಿ ಮಾಡುವುದಕ್ಕೆ ಕೆಲವು ಸೌಕರ್ಯಗಳಿಲ್ಲ. ಅದಕ್ಕೋಸ್ಕರವಾಗಿ ನಮ್ಮ ದೇಶದಲ್ಲಿ ಹಿಂದಿನಿಂದ ಅನೂಚಾನವಾಗಿ ನಡೆದುಕೊಂಡು ಬಂದಂಥ ಪದ್ಧತಿಯನ್ನು ತಪ್ಪಿಸಿ ಬೇರೆ ದೇಶದಲ್ಲಿದ್ದ ಹಾಗೆ ದೊಡ್ಡ ದೊಡ್ಡ ಕೆಲಸಗಳನ್ನು ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಂದ ಮಾಡಿಸಬೇಕೆಂದು ಒತ್ತಿ ಒತ್ತಿ ಹೇಳಿದ್ದಾರೆ. ಅದು ಈರೀತಿ ಇದೆ :

"......execution of the work by contractors at predetermined rates would give a ready and reliable estimate of final costs. Also, with the rising trend in prices of materials and wage rates, the rates for departmental working are bound to rise year after year, whereas fixed rates will have been determined beforehand in the case of entrustment of the work to the contractors."

ಅವರು ಹೇಳಿರತಕ್ಕಂಥ ಪ್ರಬಲವಾದ ಉದ್ದೇಶ ಏನೆಂದರೆ ಟೆಂಡರ್ ಮುಖಾಂತರ ಕಂಟ್ರಾಕ್ಟ್ ಕೊಟ್ಟರೆ, ಸಾಮಾನುಗಳ ರೇಟ್ಸ್ ಏರುತ್ತಾ ಇರುವ ಕಾಲದಲ್ಲಿ ಆ ರೇಟಿಗೆ ಒಳಗಾಗುವುದಿಲ್ಲ. ಒಂದು ಆಖೈರು ತೀರ್ಮಾನದಮೇಲೆ ಕಂಟ್ರಾಕ್ಟು ಕೊಟ್ಟರೆ ಒಂದು ತರಹ ರೇಟು ಸಿಕ್ಕುತ್ತದೆ ಮತ್ತು ಕಂಟ್ರಾಕ್ಟರಿಗೆ ರೇಟನ್ನು ಏರಿಸುವ ಪ್ರಮೇಯ ಬರುವುದಿಲ್ಲ. ಅವನು ಯಾವ ರೀತಿ ಒಪ್ಪಂದವನ್ನು ಮಾಡಿಕೊಂಡಿರುತ್ತಾನೆಯೋ ಅದರ ಪ್ರಕಾರ ಆ ಕೆಲಸವನ್ನು ಮಾಡಲು ಅವನು ಬದ್ಧನಾಗಿರುತ್ತಾನೆ, ಎಂದು ಒತ್ತಿ ಒತ್ತಿ ಹೇಳಿದ್ದಾರೆ. ಆ ಮೇಲೆ ಶ್ರೀಮಾನ್ ಚನ್ನಬಸಪ್ಪನವರು ಇನ್ನೂ ಮುಂದೆ ಈರೀತಿ ಹೇಳುತ್ತಾರೆ.

"Thus, two important elements involved in departmental working are the need for adequate technical personnel, machinery and equipment and the uncertainty of rates and ultimate costs. With regard to personnel, it has been found very difficult to get personnel of adequate experience in sufficient number for securing the kind of intensive and extensive supervision that is required in the case of departmental working......"

ಡಿಪಾರ್ಟ್‌ಮೆಂಟಿನವರೇ ಆ ಕೆಲಸವನ್ನು ಮಾಡುವುದಾದರೆ ಅದಕ್ಕೆ ಹೆಚ್ಚಿಗೆ ಸಿಬ್ಬಂದಿ ಬೇಕಾಗುತ್ತದೆ ಹೆಚ್ಚಿಗೆ ದರಗಳನ್ನು ಕೊಡಬೇಕಾಗುತ್ತದೆ ಕೆಲಸ ನಿಧಾನವಾಗುತ್ತದೆ ಎಂದು ಅವರು ನಿವೇದನೆಮಾಡಿಕೊಂಡಿದ್ದಾರೆ. ನಮಗೆ ಪ್ರಾಮುಖ್ಯ ಯಾವುದು ಎಂದರೆ ಟೈಮ್‌ಫ್ಯಾಕ್ಟರು. ಈ ಯೋಜನೆಯ ಕೆಲಸ ಬಹಳ ತ್ವರಿತವಾಗಿ ಆಗಬೇಕಾಗಿದೆ. ಆದ್ದರಿಂದ ಈ ಕೆಲಸವನ್ನು ಬಹಳ ಶೀಘ್ರವಾಗಿ ಮುಗಿಸಿ 1962ನೇ ಇಸವಿ ಡಿಸೆಂಬರ್ ತಿಂಗಳು 31ನೇ ತಾರೀಖು 12 ಗಂಟೆಗೆ ಈ ದೇಶಕ್ಕೆ ಶರಾವತಿಯಿಂದ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಸಂಕಲ್ಪ ಮಾಡಿದ್ದೇವೆ. ಅದರಂತೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಅವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟಿನಲ್ಲಿ ಈ ರೀತಿ ಹೇಳಿದ್ದಾರೆ.

"Above all, the most important consideration in the execution of a work like Sharavathi Hydro-Electric Project would be the need for its completion with in the prescribed target date, so that the present acute scarcity of power which has impeded progress on industrial, agricultural and other fronts in the State to a considerable extent should be overcome at the earliest possible date."

ಶ್ರೀಮಾನ್ ಚನ್ನಬಸಪ್ಪನವರು ಈ ಯೋಜನೆಗೆ ಎಷ್ಟೇ ಖರ್ಚಾಗಲಿ, ಏನೇ ಆಗಲಿ ಈ ಕೆಲಸವನ್ನು 1962ನೇ ಇಸವಿ ಡಿಸೆಂಬರ್ 31ನೇ ತಾರೀಖಿನ ವೇಳೆಗೆ ಪೂರೈಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದರು. ಅದಕ್ಕೋಸ್ಕರ ನಮ್ಮ ದೇಶದಲ್ಲಿ ಹಿಂದಿನಿಂದ ನಡೆದುಕೊಂಡು ಬಂದಂಥ ಪದ್ಧತಿಯ ಪ್ರಕಾರ ದೊಡ್ಡ ದೊಡ್ಡ ಕಾಮಗಾರಿಗಳೆಲ್ಲವನ್ನೂ ಸರ್ಕಾರದ ನೇತೃತ್ವದಲ್ಲಿ ಮಾಡಬೇಕಾಗಿದ್ದ ಪದ್ಧತಿಯನ್ನು ಬಿಟ್ಟು ಬೊಂಬಾಯಿ ಮುಂತಾದ ಬೇರೆ

(ಶ್ರೀ ಎಸ್. ಶಿವಪ್ಪ)

ದೇಶದ ಭಾರಿ ಭಾರಿ ಕಂಟ್ರಾಕ್ಟರುಗಳನ್ನು ಕರೆದು ಅವರಿಗೆ ಈ ಯೋಜನೆಯ ಕೆಲಸವನ್ನು ಒಪ್ಪಿಸಿದರು. ಅನಂತರ ಅವರ ಸ್ಟೇಟ್‌ಮೆಂಟಿನಲ್ಲಿ ಈರೀತಿ ಹೇಳಿದ್ದಾರೆ.

"When the need is for quick execution and prompt realisation of the work, it has to be completed in less than three years from now."

1962ನೇ ಇಸವಿ ಡಿಸೆಂಬರ್ ತಿಂಗಳು 31ನೇ ತಾರೀಖಿಗೆ ಈ ಯೋಜನೆಯ ಕೆಲಸವನ್ನು ಮುಗಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಈ ಕೆಲಸವನ್ನು ಕಂಟ್ರಾಕ್ಟ್ ಕೊಟ್ಟರು. ಈರೀತಿ ಕಂಟ್ರಾಕ್ಟ್ ಕೊಡುವುದರಿಂದ ನಮಗೆ ಸಿಬ್ಬಂದಿ ಖರ್ಚು ಕಡಮೆಯಾಗುತ್ತದೆ ಹಣ ಉಳಿಯುತ್ತದೆ ಮತ್ತು ಕಾಲ ಉಳಿಯುತ್ತದೆ ಎಂದು ಶ್ರೀಮಾನ್ ಚನ್ನಬಸಪ್ಪನವರು ಹೇಳಿದ್ದರು. ಇವೊತ್ತಿನ ದಿವಸ ಶರಾವತಿ ಪ್ರಾಜೆಕ್ಟಿನಲ್ಲಿ ತಾವು ದಯವಿಟ್ಟು ನೋಡುವುದಾದರೆ ಅಲ್ಲಿ ಎಷ್ಟು ಜನ ಇಂಜಿನಿಯರುಗಳನ್ನು ನೇಮಕ ಮಾಡಿಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ಶರಾವತಿ ಒಂದು ಯೋಜನೆಗೋಸ್ಕರವಾಗಿ ಅಲ್ಲಿ ಒಬ್ಬ ಚೀಫ್ ಇಂಜಿನಿಯರನ್ನು ಇಟ್ಟಿಕೊಂಡಿದ್ದಾರೆ. 3 ಜನ ಸೂಪರಿಂಟೆಂಡಿಂಗ್ ಇಂಜಿನಿಯರುಗಳಿದ್ದಾರೆ. 7 ಸಿವಿಲ್ ಡಿವಿಜನ್‌ಗಳನ್ನೂ ಎರಡು ಎಲೆಕ್ಟ್ರಿಕಲ್ ಡಿವಿಜನ್‌ಗಳನ್ನೂ ನಿರ್ಮಿಸಿಕೊಂಡಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಈ ಕೆಲಸವನ್ನು ಕಂಟ್ರಾಕ್ಟ್ ಮುಖಾಂತರ ಮಾಡಿಸುವುದರಿಂದ ಸಿಬ್ಬಂದಿಯ ಅವಶ್ಯಕತೆ ಕಡಿಮೆಯಾಗುತ್ತದೆ ಎಂದು ಹೇಳಿದ್ದರು. ಈ ಒಂದು ಸರ್ಕಾರದ ನೀತಿಯಿಂದ ಸಿಬ್ಬಂದಿಯನ್ನು ಕಡಿಮೆ ಮಾಡಲಿಲ್ಲ. ಇಂಜನಿಯರುಗಳು ಹೇರಳವಾಗಿ ನೂರಾರು ಸಂಖ್ಯೆಯಲ್ಲಿ ಇವೊತ್ತು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರಿಗೂ ನಮ್ಮ ಸರ್ಕಾರದ ಖಜಾನೆಯಿಂದ ಹಣವನ್ನು ಕೊಡುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಸಿಬ್ಬಂದಿ ಉಳಿತಾಯ ಏನೂ ಕೂಡ ಆಗಿಲ್ಲವೆಂದು ಹೇಳಬಹುದು. ಈ ವಿಚಾರವಾಗಿ ಶ್ರೀಮಾನ್ ಎ. ಜಿ. ರಾಮಚಂದ್ರ ರಾಯರ ಕಮಿಟಿಯ ರಿಪೋರ್ಟಿನಲ್ಲಿ ಈರೀತಿ ಹೇಳುತ್ತಾರೆ.

"So far as the Sharavathi Valley Project is concerned, the vicissitudes of its execution are due to several changes in designs and scope of the project during the execution. When the project was taken up the estimated cost was Rs. 55 crores. The estimate now stands revised to Rs. 80 crores. The cost per K. W. as per original estimate was Rs. 550, the lowest for a Hydro Electric Project in India. The speedy execution of this most economical project would have been a national gain, but delay in execution has now put up the construction cost by more than 50 per cent. Even on the basis of the revised estimate of Rs. 80 crores, the cost per K.W. will be Rs. 800 which is still the cheapest of any Hydro-project in India."

ಇದು ಪರಿಣತರ ಕಮಿಟಿಯವರು ಹೇಳಿರತಕ್ಕ ಮಾತು. ಈ ಶರಾವತಿಯ ಪ್ರಾಜೆಕ್ಟನ್ನು ಕಟ್ಟತಕ್ಕ ಕಾಲದಲ್ಲಿ ಆದರ ಅಂದಾಜುಗಳು ಬದಲಾವಣೆಯಾಗುತ್ತಾ ಹೋಗುತ್ತಿವೆ. ಅದರ ಅಂದಾಜುಗಳು ಮತ್ತು ಡಿಜೈನ್‌ಗಳು ವರ್ಷ ವರ್ಷಕ್ಕೂ ಬದಲಾವಣೆಯಾಗಿರತಕ್ಕ ವಿಚಾರದಲ್ಲಿ ಆ ಕಮಿಟಿಯವರು ಹೇಳಿದ್ದಾರೆ.

'It is to be earnestly hoped that the second and final stages of the Sharavathi Valley Project would go through according to the schedule without any large changes in designs and in execution. Some part at least of the delay in the excution of the first stage of this project is attributed to the scrutiny and technical clearance of the project by the Central Water Power Commission..... "

ಇದಕ್ಕಿಂತ ಮುಂಚೆ ನ್ಯಾಪತಿ ಮಾಧವರಾಯರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಫೈನಾನ್ಸ್ ಇಕ್ವೈರಿ ಕಮಿಷನವರು ನಮ್ಮ ದೇಶದಲ್ಲಿ ಈ ಪ್ರಾಜೆಕ್ಟುಗಳನ್ನು ಯಾವ ರೀತಿ ಕಟ್ಟುತ್ತಾರೆ ಎಂಬ ಬಗ್ಗೆ ಬಹಳ ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ.

"The preparation of works estimates has become notoriously perfunctory. This is particularly so because estimates are called for without reference to the possibility of the work being seriously taken up in the near future. When the relative scheme after years of incubation comes within the range of being taken up, the oldest estimates are dished out and sanction is accorded in hurry."

2-30 P.M.

ಇದು ಶರಾವತಿ ಪ್ರಾಜೆಕ್ಟ್ ವಿಷಯದಲ್ಲಿ ಅಕ್ಷರಶಃ ನಿಜವಾಗಿದೆ. ಶರಾವತಿ ಪ್ರಾಜೆಕ್ಟಿಗೆ ಹೋಗಿ ಮಹಮುದಾಲಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಬಹಳ ಗಹನವಾದ ವರದಿಯನ್ನು ಕೊಟ್ಟಿದ್ದಾರೆ. ಅವರು ಅಲ್ಲಿದ್ದ ಇಂಜನಿಯರುಗಳನ್ನು ಭೇಟಿ ಮಾಡಿ ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಶರಾವತಿ ಪ್ರಾಜೆಕ್ಟ್‌ಗೆ ಸುಮಾರು 27 ಕೋಟಿ ರೂಪಾಯಿ ಎಸ್ಟಿಮೇಟ್ ಇದ್ದದ್ದು ಇವತ್ತಿನ ದಿವಸ 65 ಕೋಟಿ ರೂಪಾಯಿ ಹೇಗೆ ಆಯಿತು ಎಂದು ಅವರು ಕೇಳಿದ್ದಾರೆ. ಅದಕ್ಕೆ ಉತ್ತರ ಬಂದದ್ದು ಏನೆಂದರೆ ಮೊದಲು ಉದ್ದೇಶ

ಏನಿತ್ತೋ ಅದು ನೆರವೇರಲಿಲ್ಲ ಭೂಮಿಯು ಒಂದು ಪೊರ್ಯಾಸಿಟಿ ಜಾಸ್ತಿಯಾಗಿದೆ ಮತ್ತು ಇತ್ಯಾದಿ ಇತ್ಯಾದಿ ಅನೇಕ ಟೆಕ್ನಿಕಲ್ ಕಾರಣಗಳನ್ನು ಕೊಟ್ಟು ಡಿಸೈನೇ ಬೇರೆಯಾಗಿ ಮಾಡಬೇಕಾಗಿ ಬಂದುದರಿಂದ ಈ ಒಂದು ಪರಿಸ್ಥಿತಿ ಬಂತು ಎಂದು ಹೇಳಿದ್ದಾರೆ. ನಾನಾದರೂ ಕೇಳುತ್ತೇನೆ ಯಾವ ಒಂದು ಪ್ರಾಜೆಕ್ಟೇ ಆಗಲಿ, 27 ಕೋಟಿ ರೂಪಾಯಿ ಇದ್ದುದು ಇವತ್ತಿನ ದಿವಸ ಸುಮಾರು 80 ಕೋಟಿ ರೂಪಾಯಿಗೆ ಬರಬೇಕಾದರೆ, ಏನೊಂದು ಪ್ರಬಲವಾದ ಕಾರಣವಿದೆ ಅದನ್ನು ಸರ್ಕಾರದವರು ಯೋಚನೆಮಾಡಬೇಕಾಗಿದೆ. ಶರಾವತಿಯಲ್ಲಿ ಸರ್ಕಾರದವರು ಮೊದಲು ಮನಸ್ಸು ಮಾಡಿದ್ದಂತೆ ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ಕರೆದುಕೊಂಡು ಬಂದು ಒಬ್ಬೊಬ್ಬರಿಗೆ 30–40 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಕೊಟ್ಟಿದ್ದಾರೆ. ಅದಕ್ಕೆ ಬಡ್ಡಿ ಇಲ್ಲ. Interest free loan. ಆದು ಭಾರಿ ಸಾಲ್ವೆನ್ಸಿ ಇದೆ, ದೊಡ್ಡ ಕಂಟ್ರಾಕ್ಟರು, (a) ಕ್ಲಾಸ್ (b) ಕ್ಲಾಸ್ ಅಂತ ಹೇಳಿ ಒಬ್ಬೊಬ್ಬ ಕಂಟ್ರಾಕ್ಟರಿಗೆ 45 ಲಕ್ಷ ರೂಪಾಯಿ ಬಡ್ಡಿ ಇಲ್ಲದ ರೀತಿಯಲ್ಲಿ ಸಾಲ ಕೊಟ್ಟು ಕೆಲಸ ಮಾಡಿ ಎಂದು ಹೇಳಿದ್ದೀರಿ. ಇವತ್ತಿನ ದಿನ ಕೆಲವು ಕಡೆ ಇರುವ ರೇಟ್ ಹೇಳುವುದಾದರೆ ಬಹಳ ಆಶ್ಚರ್ಯ ಪಡಬಹುದು. ಶರಾವತಿ ಕೆಳಗೆ ಇರತಕ್ಕದ್ದು ಎರಡು ಕೆಲಸಗಳು ಒಂದು ಲಿಂಗನ ಮಕ್ಕಿ ಇನ್ನೊಂದು ತಲಕಳಲೆ ಡ್ಯಾಂ. ಇದಕ್ಕೆ 3 ಚಾನಲ್ಸ್ ಇವೆ. ಲಿಂಗನ ಮಕ್ಕಿಗೆ ಮೇಸನರಿ ಡ್ಯಾಂ ಹಾಕಬೇಕೆಂದು ಮೊದಲು ಯೋಚನೆ ಮಾಡಿದ್ದರು. ಬಹುಶಃ ಇಂಜನಿಯರುಗಳು ಕಂಟ್ರಾಕ್ಟ್‌ದಾರರಿಗೆ ಸಹಾಯ ಮಾಡಬೇಕೆಂದು ಮಾಡಿದರೋ ಅಥವಾ ಇನ್ನೇನಾದರೂ ಪ್ರಬಲವಾದ ಕಾರಣಗಳಿಗಾಗಿ ಮಾಡಿದ್ದಾರೋ ಅದನ್ನು ಸರ್ಕಾರದವರು ಪರಿಶೀಲನೆಮಾಡಬೇಕಾಗಿತ್ತು. ಮೊದಲು ಮೇಸನರಿ ಡ್ಯಾಂ ಅಂತ ಇದ್ದುದನ್ನು ಕ್ರಮೇಣವಾಗಿ ಆದು ಮೇಸನರಿ ಆಗುವುದಿಲ್ಲ ಮಣ್ಣಿನ ಕಟ್ಟೆ ಕಟ್ಟುತ್ತಾರೆ ಎಂದು ಹೇಳಿದರು. ಮತ್ತೊಂದು ವಿಚಾರವೇನೆಂದರೆ ಮೇಸನರಿ ಕಟ್ಟಡ ಕಟ್ಟಲು 80 ಅಡಿ ಆಳ ತೆಗೆದ ಮೇಲೆ ಆಗ ಒಬ್ಬ ಇಂಜನಿಯರು ಮೇಸನರಿ ಡ್ಯಾಂ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಮಣ್ಣಿನ ಕಟ್ಟೆ ಕಟ್ಟಿದರೆ ಸಾಕು ಎಂದು ಅಭಿಪ್ರಾಯ ಬರೆದರು. 80 ಅಡಿ ಆಳ ತೆಗೆಯುವುದಕ್ಕೆ ಒಂದು ಕೋಟಿ ರೂಪಾಯಿ ವ್ಯರ್ಥವಾಯಿತು. ಮತ್ತೆ ಮಣ್ಣಿನ ಕಟ್ಟೆ ಕಟ್ಟಬೇಕಾದರೆ ಅದೇ ಕಂಟ್ರಾಕ್ಟರಿಗೆ ಕೊಡಬೇಕೇ, ಹೊಸ ಕಂಟ್ರಾಕ್ಟರಿಗೆ ಕೊಡಬೇಕೇ ಎಂಬುದನ್ನು ವಿಚಾರ ಮಾಡಲಿಲ್ಲ. ಅದೇ ಕಂಟ್ರಾಕ್ಟರಿಗೆ ಕೊಟ್ಟರು. ಅರ್ದನ್ ಡ್ಯಾಂ ಎನ್ನುವುದು ಹೊಸ ಕೆಲಸವಲ್ಲ ಮೇಸನರಿ ಡ್ಯಾಂ ಇದ್ದೇ ಇದೆ ಅದಕ್ಕೆ substitute ಮಣ್ಣಿನ ಕಟ್ಟೆ ಆದ್ದರಿಂದ ಅವನಿಗೇ ಕೊಡೋಣ ಎಂದು ತೀರ್ಮಾನಕ್ಕೆ ಬಂದರು. ಇದು ಯಾವುದೇ ಆಗಲೀ ರೇಟ್ ಏನು ಎಂಬ ಪ್ರಶ್ನೆ ಬಂದಾಗ ಅದನ್ನು ನಿಷ್ಕರ್ಷೆ ಮಾಡಲೇ ಇಲ್ಲ. ಹೌದಪ್ಪನ ಸರ್ಕಾರ ಯಾವುದಾದರೂ ರೇಟ್ ಆಗಲೀ ಕಟ್ಟಿರಿ ನೋಡೋಣ ಅಂದರು. ಶ್ರೀಮಾನ್ ಚನ್ನಬಸಪ್ಪನವರು ಒಂದು ಒಳ್ಳೆಯ ವಾಕ್ಯ ಹೇಳಿದ್ದಾರೆ. ಕಂಟ್ರಾಕ್ಟ್ ಕೊಡತಕ್ಕ ನೀತಿ ಏನೆಂದರೆ, ನಮಗೂ ಅವರಿಗೂ ಪೂರ್ವ ಭಾವಿಯಾಗಿ ಒಪ್ಪಂದ ಆಗಿರತಕ್ಕ ರೇಟ್ ಇರುತ್ತದೆ ಕೆಲವಕ್ಕೆ ಅಳತೆ ಸಿಕ್ಕುವುದಿಲ್ಲ. ಆದರಿಂದ ಕೆಲವಕ್ಕೆ ಅನುಕೂಲವಾಗುತ್ತದೆ ಎಂದು ಕಲ್ಪನೆ ಮಾಡಿ ಅವತ್ತಿನ ದಿವಸ ಯಾವ ಕಂಟ್ರಾಕ್ಟ್‌ದಾರರು ಇದ್ದರೋ ಅವರಿಗೇ ಕೊಡಿ ಎಂದು ಹೇಳಿದ್ದಾರೆ. ಅರ್ದನ್ ಡ್ಯಾಂ ಅಂತ ಹೊಸದಾಗಿ ನಿರ್ಮಾಣ ಮಾಡಲು ಕಂಟ್ರಾಕ್ಟ್ ಕೊಟ್ಟರು. ಆ ಮೇಲೆ ಏನಾಯಿತು? 1000 ಘನ್ ಅಡಿಗಳ ಒಂದು ಯೂನಿಟ್ ಅದಕ್ಕೆ 60—70 ರೂಪಾಯಿ ಆ ಕಾಲದಲ್ಲಿ ಇತ್ತು. ಹೆಚ್ಚೆಂದರೆ 100 ರೂಪಾಯಿ ಕೊಟ್ಟಿದ್ದಾರೆ. ಮಣ್ಣಿನ ರೇಟ್ ಬೇರೆ ಕಡೆ ದೊಡ್ಡ ದೊಡ್ಡ ಕಾಂಗಾರಿಗಳನ್ನು ಮಾಡುವ ಕಡೆ ಏನಿದೆ ಎಂಬುದನ್ನು ತಿಳಿದುಕೊಂಡು ಬರುವುದಕ್ಕೆ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರನ್ನು ಕಳುಹಿಸಿದರು. ಅವರು ನಾಗಾರ್ಜುನ ಸಾಗರದಲ್ಲಿ ಏನು ರೇಟ್ ಇದೆ ಎಂಬುದನ್ನು ಸರ್ಕಾರದವರಿಗೆ ಹೇಳಿದ್ದಾರೆ. ಒಂದು ಯೂನಿಟ್‌ಗೆ ಸುಮಾರು 160 ರೂಪಾಯಿ ಕೊಡಬಹುದು ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಆ ದಿವಸ ಅವರು ಹೇಳಿ ಸರ್ಕಾರದ ಮುಂದೆ ಇಟ್ಟಿದ್ದಾರೆ. ಹಾಗಿದ್ದರೂ ಕಂಟ್ರಾಕ್ಟರೊಡನೆ ಒಪ್ಪಂದ ಮಾಡಿಕೊಳ್ಳದೆ 160 ರೂಪಾಯಿ ಕೊಡುವ ಕಡೆ 245 ರೂಪಾಯಿ ಕೊಟ್ಟಿದ್ದಾರೆ. ಅದು ಇವತ್ತಿನ ದಿವಸ ಆರ್ಬಿಟ್ರೇಷನ್ ಕಮಿಟಿಯ ಮುಂದೆ ಇದೆ. ಈ ಒಂದು ಬಾಬಿಗೆ, ಅರ್ದನ್ ಡ್ಯಾಂಗೆ 1½ ಕೋಟಿ ರೂಪಾಯಿ ಶರಾವತಿ ಪ್ರಾಜೆಕ್ಟಿನಲ್ಲಿ ಹೋಗಿದೆ. ಇದೇ ರೀತಿ ಯಾವ ಬಾಬನ್ನಾದರೂ ತೆಗೆದುಕೊಳ್ಳಿ. ಪ್ರತಿಯೊಂದು ಬಾಬಿಗೂ ಕೂಡ ಮೊದಲು ರೇಟ್ ಏನಿತ್ತೋ ಅದಕ್ಕೆ 100 ರಷ್ಟು ಜಾಸ್ತಿ ಎಂದರೆ ಎಷ್ಟು ಕೋಟಿ ರೂಪಾಯಿ ಇದ್ದರೆ ತಾನೆ ಇಂಥಾ ಪ್ರಾಜೆಕ್ಟನ್ನು ಮುಗಿಸುವುದಕ್ಕೆ ಸಾಧ್ಯ ಎಂಬುದನ್ನು ಇವತ್ತು ದೀರ್ಘವಾಗಿ, ಆಳವಾಗಿ ಯೋಚನೆ ಮಾಡಬೇಕಾಗಿದೆ.

ಇನ್ನು ತಲಕಳಲೆ ಡ್ಯಾಂ ಮತ್ತು ಟನಲ್ ಚಾನಲ್ಸ್ ಇವೆ. ಮೂರು ಚಾನಲ್‌ಗಳು ಇವೆ ಮೊದಲು ಅದು ಹೇಗಿತ್ತು ಎಂದರೆ 1954ನೇ ಇಸವಿಯಲ್ಲಿ ಒರಿಜಿನಲ್ ಎಸ್ಟಿಮೇಟ್ 73ಲಕ್ಷರೂಪಾಯಿ ಇತ್ತು. 73 ಲಕ್ಷ ರೂಪಾಯಿ ಇದ್ದದ್ದು 195 ಲಕ್ಷರೂಪಾಯಿಗೆ ಏರಿತು. ಹೊಸದಾಗಿ ಮಾಡಬೇಕು. ವಿದ್ಯುಚ್ಛಕ್ತಿ ಜಾಸ್ತಿ ಕೊಡುತ್ತೇವೆ ಇನ್ನು ಹೆಚ್ಚು ಕಿಲೋ ವಾಟ್ ಪವರ್ ಬೇಕು ಎಂದು ಹೇಳಿ 195 ಲಕ್ಷ ರೂಪಾಯಿಗಳಿಗೆ ಏರಿಸಿದರು. ಆ 195 ಲಕ್ಷ ರೂಪಾಯಿಗಳೇ ಆಖೈರು ಆಗಲಿಲ್ಲ. ಇವತ್ತಿನ ದಿವಸ ಆ ಪ್ಲಾನು, ಡಿಸೈನು ಎಲ್ಲಾ ಬದಲಾವಣೆಯಾಗಿ 319 ಲಕ್ಷ ರೂಪಾಯಿಗಳಿಗೆ ಏರಿದೆ. ಎಷ್ಟು ಪರ್ಸೆಂಟ್ ಏರಿದೆ ಎಂಬುದನ್ನು ತಾವು ದಯವಿಟ್ಟು ಯೋಚನೆಮಾಡಬೇಕು. ಲಿಂಗನ ಮಕ್ಕಿ, ತಲಕಳಲೆ ಮತ್ತು ಇತರ ಚಾನಲ್ಸ್ ಎಲ್ಲಾ ಲೆಕ್ಕ ಹಾಕಿದರೆ over all ಶರಾವತಿಯಲ್ಲಿ ಎಷ್ಟು ಮಟ್ಟಿಗೆ ಧಾರಣೆ ಏರಿದೆ ಮೊದಲಿನ ಎಸ್ಟಿಮೇಟಿಗೂ ಇವತ್ತಿಗೂ ಎಂದರೆ ಶೇಕಡ 100 ಏರಿದೆ. ಮೊದಲು 27 ಕೋಟಿ ರೂಪಾಯಿ ಇದ್ದದ್ದು, ಆಖೈರು 39 ಕೋಟಿ ರೂಪಾಯಿ ಚನ್ನಬಸಪ್ಪನವರು ಹೇಳಿದ್ದು, ಇವತ್ತು ಬಹುಶಃ 80 ಕೋಟಿ ರೂಪಾಯಿಗೆ ಏರಿದೆ. ನೂರಕ್ಕೆ ನೂರರಷ್ಟು ಏರಿ ಅಲ್ಲಿ ಕೆಲಸಗಳು ಬಹಳ ಅನುಮಾನಾಸ್ಪದವಾದ ರೀತಿಯಲ್ಲಿ ನಡೆಯುತ್ತಾ ಇದೆ. ಅಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ ಎಂದು ಕಾಣುತ್ತದೆ. ಈ ಶರಾವತಿ ಪ್ರಾಜೆಕ್ಟ್ ಕೆಲಸವನ್ನು ಕಂಟ್ರಾಕ್ಟುದಾರರಿಗೆ ಕೊಟ್ಟು ಬಹಳ ಶೀಘ್ರವಾಗಿ ಮಾಡಬೇಕೆಂದು ತೀರ್ಮಾನಮಾಡಿದ ಮೇಲೆ ಇಂಡಿಯಾ ಸರ್ಕಾರದಲ್ಲಿ ಬಹಳ ಪ್ರವೀಣರು ದೊಡ್ಡ ದೊಡ್ಡ ಪ್ರಾಜೆಕ್ಟುಗಳಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಿ ಒಬ್ಬರನ್ನು ಸ್ಪೆಷಲ್ ಅಡ್ಮಿನಿಸ್ಟ್ರೇಟರ್ ಆಗಿ ನೇಮಕ ಮಾಡಿದರು. ಹಿರಾಕುಡ್ ಡ್ಯಾಂನಲ್ಲಿ ಕೆಲಸ ಮಾಡುತ್ತಿದ್ದ ಅವರು ಸೂಪರ್ ವಿಷನ್ ಮಾಡಿದರು. ಅವರ

(ಶ್ರೀ ಎಸ್. ಶಿವಪ್ಪ)

ನೇತೃತ್ವದಲ್ಲಿ ಒಂದು ಲಕ್ಷ ರೂಪಾಯಿಗಳವರೆಗೂ ಕೆಲಸ ನಡೆದಿದೆ. ಆ ವ್ಯಕ್ತಿಗೆ ಕಣ್ಣೇ ಇಲ್ಲ. ಕುರುಡರು, ಅಂತಹ ಕುರುಡರನ್ನು ಸ್ಪೆಷಲ್ ಆಫೀಸರಾಗಿ ನೇಮಕ ಮಾಡಿ ಶರಾವತಿ ಪ್ರಾಜೆಕ್ಟನ್ನು ಮಾಡಿಸಬೇಕೆಂದು ಹೇಳುತ್ತಿದ್ದೀರಲ್ಲಾ ! ಆ ಕುರುಡರಿಂದ ಏನು ಸಾಧ್ಯವಾಗುತ್ತದೆ ಎಂದು ಇವತ್ತು ಕೇಳುತ್ತೇನೆ. ಅದನ್ನು ಆಳವಾಗಿ ಯೋಚನೆ ಮಾಡಬೇಕು. ಎಷ್ಟು ಮಟ್ಟಿಗೆ ಅವರು ಕೆಲಸ ಮಾಡಿರಬಹುದು ತಾವೇ ನೋಡಿ.

ಈ ಹಿನ್ನೆಲೆಯಲ್ಲಿ ಶರಾವತಿ ಪ್ರಾಜೆಕ್ಟ್‌ಗಾಗಿ ಯಾವ ರೀತಿ ಪ್ಲಾನು, ಅಂದಾಜು, ಡಿಸೈನ್ ಆಗುತ್ತಿದೆ ಎಂಬುದನ್ನು ತಿಳಿಯುವುದು ಅವಶ್ಯಕ. ಮೊನ್ನೆ ಈ ಸಂಬಂಧದಲ್ಲಿ ಆರ್ಬಿಟ್ರೇಷನ್ ವಿಚಾರ ಈ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಶರಾವತಿ ಕಣಿವೆ ಯೋಜನೆಯ ಮೂರು ಕಂಟ್ರಾಕ್ಟರುಗಳು ಅನೇಕ ರೀತಿಯಲ್ಲಿ ತಮಗೆ ನಷ್ಟವಾಗಿದೆ ಎಂಬ ಕಾರಣದಿಂದ ಹೆಚ್ಚು ಹಣ ಕೊಡಬೇಕು, ಇದಕ್ಕಾಗಿ ಆರ್ಬಿಟ್ರೇಷನ್ ಬೋರ್ಡನ್ನು ರಚಿಸಿ ಎಂದು ಸರ್ಕಾರಕ್ಕೆ ತಿಳಿಸಿದರು. ಅದರಂತೆ ಬೋರ್ಡನ್ನು ರಚಿಸಿ ಸರ್ಕಾರದ ಕಡೆಯಿಂದ ಒಬ್ಬ ಇಂಜನಿಯರನ್ನು ಮತ್ತು ಕಂಟ್ರಾಕ್ಟರಿಗೆ ಬೇಕಾದ ಇಂಜನಿಯರನ್ನು ಆ ಬೋರ್ಡಿಗೆ ಹಾಕಿದರು. ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ತಿಳಿದುಕೊಳ್ಳಬೇಕು. ಸರ್ಕಾರದವರು ಯಾವ ಒಬ್ಬ ಇಂಜನಿಯರನ್ನು ನೇಮಕ ಮಾಡಿ ಆರ್ಬಿಟ್ರೇಷನ್ ಬೋರ್ಡ್‌ಗೆ ಹಾಕಿದ್ದರೋ ಅದೇ ಇಂಜನಿಯರನ್ನು ಖದೀಮ ಕಂಟ್ರಾಕ್ಟರು ತನ್ನ ಪರವಾಗಿ ನೇಮಕಮಾಡಿದ್ದಾನೆ. ಆರ್ಬಿಟ್ರೇಷನ್ ವಿಚಾರದಲ್ಲಿ ಸರ್ಕಾರದವರು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಬಹುದು. ಅರ್ಥನ್ ಡ್ಯಾಂ ಸಂಬಂಧದಲ್ಲಿ Ganapathi Rao was appointed by the contractors and the Government Engineer is K. S. Gangadhar. ಇನ್ನೊಂದು ಆರ್ಬಿಟ್ರೇಷನ್‌ನಲ್ಲಿ Ganapathi Rao represented Government, ಜೋಗರಾವ್ ಕಂಟ್ರಾಕ್ಟರ ಪರವಾಗಿದ್ದಾರೆ. ಕಂಟ್ರಾಕ್ಟರ ಪರವಾಗಿರುವವರನ್ನೇ ಇನ್ನೊಂದು ಆರ್ಬಿಟ್ರೇಷನ್‌ನಲ್ಲಿ ಸರ್ಕಾರದ ಪರವಾಗಿ ನೇಮಕ ಮಾಡಿದ್ದೀರಿ. ಇದೆಂಥ ನೇಮಕ ? ಇದರಿಂದೇನು ನ್ಯಾಯ ದೊರೆಯುತ್ತದೆ. What is the plot between the engineers and the contractors ? Is this the way how our money has to be spent by the contractors and the engineers ? How did they work ? How did the Government tolerate ? ಶರಾವತಿ ವಿಚಾರದಲ್ಲಿ ಒಬ್ಬ ಇಂಜನಿಯರನ್ನೇ ಸರ್ಕಾರದ ಪರವಾಗಿಯೂ, ಕಂಟ್ರಾಕ್ಟರ ಪರವಾಗಿಯೂ ಆರ್ಬಿಟ್ರೇಷನ್ನಿಗೆ ನೇಮಿಸಿಕೊಂಡರೆ ನ್ಯಾಯದೊರೆಯುತ್ತದೆಯೆ ಎಂದು ಯೋಚನೆ ಮಾಡಬೇಕಾಗಿದೆ. ಈ ದಿವಸ ಆರ್ಬಿಟ್ರೇಷನ್ ಕೇಸನ್ನು ದೇಶ ಸೂಕ್ಷ್ಮವಾಗಿ ನೋಡುತ್ತಿದೆ. In the case of earthen dam the rate offered by the department per unit of one thousand cubic feet for hauling and placing in position was Rs. 150. But the rate awarded by the Arbitrators is Rs. 245 for leads of 2 and 2½ miles. ಅಂದರೆ ಸುಮಾರು 100 ರೂಪಾಯಿಗಳನ್ನು ಒಂದು ಯೂನಿಟ್ಟಿಗೆ ಜಾಸ್ತಿಯಾಗಿ ಕೊಟ್ಟಿದ್ದಾರೆ. ಇದರಿಂದ ಸುಮಾರು 2–3 ಕೋಟಿ ರೂಪಾಯಿಗಳು ಖರ್ಚಾಗುವುದಕ್ಕೆ ನಮ್ಮ ಬೊಕ್ಕಸದಿಂದ 40 ಲಕ್ಷ ರೂಪಾಯಿ ಜಾಸ್ತಿ ಖರ್ಚಾಗಲು ಅವಕಾಶವಾಯಿತು. ತಲಕಳಲೆ ಡ್ಯಾಂ ಕೆಲಸಕ್ಕೆ ಬೊಂಬಾಯಿನಿಂದ ತಾರಾಪೂರ್ ಎಂಬುವರು ಬಂದಿದ್ದರು. ಅವರಿಗೆ 6 ಸಾವಿರ ರೂಪಾಯಿಗಳ ಸಂಬಳ. ಅದೇ ನಮ್ಮ ಮೈಸೂರು ಇಂಜನಿಯರುಗಳಿಗೆ 2 ಸಾವಿರದೊಳಗೆ ಸಂಬಳ. ಹಾಗಿರುವಾಗ ನಮ್ಮ ಇಂಜನಿಯರು ಬೊಂಬಾಯಿನಿಂದ ಬಂದಿರುವವರ ಇಂಟರ್‌ವ್ಯೂಗೆ ಕೈಕಟ್ಟಿಕೊಂಡು ಕಾಯಬೇಕು. ಆ ಮೇಲೆ ಎಂ. ಎಸ್. ರಾಮಯ್ಯ ಎಂಬುವರು ತಲಕಳಲೆ ಡ್ಯಾಂ ಕೆಲಸದಲ್ಲಿ for procuring sand for other Kargal deposits extra cost 6 ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಕೇಳಿದ್ದಾರೆ, extra lead charges for quarries 7 ಲಕ್ಷ ಕೊಡಿ ಎಂದು ಕೇಳಿದ್ದಾರೆ. ಇನ್ನೊಂದು ಬಹಳ ಸ್ವಾರಸ್ಯವಾಗಿದೆ, higher cost caused by impact at Talakalale dam to acceptance of higher rates for Linganamakki dam ಲಿಂಗನಮಕ್ಕಿ ಡ್ಯಾಂನ ಒಂದು ಐಟಂಗೆ 22.2 ಲಕ್ಷ ಕೊಡಿ ಎಂದು ಕೇಳಿದ್ದಾರೆ. ಇದನ್ನು ನೋಡಿದರೆ ಕಳ್ಳರ ಸಂತೆ ಇದ್ದಹಾಗಿದೆ. cost of idle labour due to inadequate supply of surki mortar 5 lakhs. ಸುರ್ಕಿ ಮಾರ್ಟರ್ ಕಾಲಕ್ಕೆ ಸರಿಯಾಗಿ ಒದಗಿಸಿಲ್ಲ. ಇದರಿಂದ ನಷ್ಟವಾಯಿತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—On a point of order, Sir. ಕಳ್ಳರ ಸಂತೆ ಎಂದು ಹೇಳಿದ್ದು ಯಾರಿಗೆ ಅನ್ವಯಿಸುತ್ತದೆ ಎಂದು ಅವರು ಸ್ಪಷ್ಟಪಡಿಸಬೇಕು.

ಶ್ರೀ ಎಸ್. ಶಿವಪ್ಪ.—ಮಾನ್ಯ ಸದಸ್ಯರು ನನ್ನ ಸೂಚನೆಯನ್ನು ಅರ್ಥ ಮಾಡಿಕೊಂಡಿಲ್ಲ. ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ತಂದಿರುವುದರಿಂದ ಏನು ಹೇಳಿದರೂ ಮಂತ್ರಿಮಂಡಲದ ಮೇಲೆ ಹೇಳುವುದು.

Mr. SPEAKER.—Asking for explanation is not a point of order.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕಳ್ಳರ ಸಂತೆ ಎಂಬುದು ಅನ್‌ಪಾರ್ಲಿಮೆಂಟರಿ.

ಶ್ರೀ ಎಸ್. ಶಿವಪ್ಪ.—ಹುಚ್ಚ ಮಾಸ್ತಿಗೌಡರು ಕೂಡ ನಮ್ಮ ದೇಶದ ಪ್ರಜೆಯಾಗಿದ್ದರೆ ಅವರೂ ಕೂಡ ಯಾವ ರೀತಿ ಆರ್ಬಿಟ್ರೇಷನ್‌ಗೆ ಕಳುಹಿಸಿದರು ಎಂಬುದನ್ನು ತಿಳಿದುಕೊಳ್ಳಬೇಕು. ಯಾವ ರೀತಿ ದೇಶದ ಹಣ ಅಪವ್ಯಯವಾಗುತ್ತಿದೆ ಎಂಬುದನ್ನು ಈ ಸಭೆಯ ಗಮನಕ್ಕೆ ತರುವ ಉದ್ದೇಶದಿಂದ ಇದನ್ನು ಹೇಳುತ್ತಿದ್ದೆನೆಯೇ ಹೊರತು ಹೊಸದಾಗಿ ಏನನ್ನೂ ಹೇಳುತ್ತಿಲ್ಲ. ಈ ಸಭೆಗೆ ಕೊಟ್ಟಿರುವ ಉತ್ತರವನ್ನು ಕಾಪಿ ಮಾಡಿಕೊಂಡು ಹೇಳುತ್ತಿದ್ದೇನೆ. ಇದೇ ರೀತಿ ಮೂರನೆಯ ಆರ್ಬಿಟ್ರೇಷನ್ ಇದೆ. ಅದರಲ್ಲಿ damages to the loss of reputation and prestige ಇದೆ, ಅದಕ್ಕೆ ಹಣ ಕೊಡಿ ಎಂದು ಕೇಳಿದ್ದಾರೆ. ಆರ್ಬಿಟ್ರೇಷನ್ ಕಮಿಟಿ ಇದನ್ನು ಒಪ್ಪಿ 19 ಲಕ್ಷ ಇದಕ್ಕೆ ಕೊಟ್ಟಿದೆ. 3ನೇಯ ಆರ್ಬಿಟ್ರೇಷನ್ compensation in respect of stacking yards, selection of quarries 44 ಲಕ್ಷ ಕೊಡಬೇಕೆಂಬ ವಿಚಾರ

ಇತ್ಯರ್ಥ ಮಾಡಬೇಕಾಗಿದೆ. 10 ಕಲಮುಗಳು ಪೆಂಡಿಂಗ್ ಆಗಿವೆ. ಇನ್ನೂ ಇತ್ಯರ್ಥವಾಗಿಲ್ಲ. 59 ಲಕ್ಷ ರೂಪಾಯಿಗಳನ್ನು ಇಬ್ಬರು ಕಂಟ್ರಾಕ್ಟರುಗಳಿಗೆ ಕೊಡಬೇಕೆಂದು ಅರ್ಬಿಟ್ರೇಷನ್ ಕೊಟ್ಟಿರುವ ತೀರ್ಪನ್ನು ಸರ್ಕಾರ ಸರಿಯೇ, ತಪ್ಪೇ ಎಂದು ವಿಮರ್ಶೆಮಾಡಬೇಕು. ಆರ್ಬಿಟ್ರೇಷನ್, ಕಂಟ್ರಾಕ್ಟರು ಹೇಳುವುದು ಸ್ವಾಭಾವಿಕ ಎಷ್ಟು ಬಂದರೆ ಅಷ್ಟೇ ಸಾಕು ಎಂದು, ನಷ್ಟವಾಗಿದೆ ಎಂದು ಕೇಳಬಹುದು. ಶರಾವತಿ ಅಂದಾಜು 30 ಕೋಟಿ ಇದ್ದುದು ಎರಡರಷ್ಟಾಯಿತು, ಮತ್ತೆ ಹೆಚ್ಚಿತು. ಇದೂ ಸಾಲದೆಂದು ಹೇಳುತ್ತಿದಾರೆ. 59 ಲಕ್ಷ ರೂಪಾಯಿಗಳನ್ನು ಕೊಡಬಹುದೆಂದು ಆರ್ಬಿಟ್ರೇಷನ್ ತೀರ್ಮಾನ ಮಾಡಿದರೆ, ಆದಾದ ಮೇಲೆ ಸರ್ಕಾರ, ಮಂತ್ರಿಮಂಡಲ ಈ ವಿಚಾರ ಸರಿಯೇ, ತಪ್ಪೇ ಎಂದು ನ್ಯಾಯಾಂಗ ಶಾಖೆಗೆ ವಿಮರ್ಶೆ ಮಾಡುವಂತೆ ತಿಳಿಸಿ, ಲೀಗಲ್ ಇಂಪ್ಲಿಕೇಷನ್ಸ್ ಏನಿದೆ ಎಂದು ತಿಳಿದುಕೊಳ್ಳಬೇಕಾಗಿತ್ತು.

59 ಲಕ್ಷ ರೂಪಾಯಿಗಳನ್ನು ಒಂದೇ ದಿವಸ ಕೊಟ್ಟರು ! ಈ ಉದಾರತೆ ಎಲ್ಲಿಂದ ಬಂತು ? ಹೀಗೆ ಒಂದು ದಿವಸ ರುಜು ಮಾಡಿ ಇಷ್ಟು ಹಣವನ್ನು ಕೊಟ್ಟಿರಿ, ಜನರಿಗೆ ಏನು ಉತ್ತರ ಹೇಳುತ್ತೀರಿ ಎಂದು ಕೇಳುತ್ತೇನೆ. ನಮ್ಮನ್ನು ಇಲ್ಲಿಗೆ ಮೂರು ಸಾರಿ ಕರೆಸಿ ತೆರಿಗೆಗಳ ಮೇಲೆ ತೆರಿಗೆಗಳನ್ನು ಹಾಕಿದ್ದೀರಿ ; ಎರಡು ಕೋಟಿ ನಲವತ್ತು ಲಕ್ಷ ರೂಪಾಯಿನಷ್ಟು ತೆರಿಗೆ ಜನರ ಮೇಲೆ ಹಾಕಿ ಒಂದು ಗಂಟೆಯಲ್ಲಿ 59 ಲಕ್ಷ ರೂಪಾಯಿ ಕಂಟ್ರಾಕ್ಟರಿಗೆ ಕೊಟ್ಟಿದ್ದೀರಿ, ನಿಮ್ಮ ಎದೆಗಾರಿಕೆ ಎಷ್ಟು ಎಂದು ಕೇಳುತ್ತೇನೆ. ಸಭಾಪತಿಯವರೇ, ತಮ್ಮ ಮೂಲಕ ಇದನ್ನು ಕೇಳುತ್ತೇನೆ.

(Interruptions)

ಒಂದು ಬಾಬಿನಲ್ಲಿ 59 ಲಕ್ಷ ರೂಪಾಯಿ ಹೀಗೆ ಹೋದರೆ, ಎಂಬತ್ತು ಕೋಟಿ ರೂಪಾಯಿನ ಈ ಯೋಜನೆಯಲ್ಲಿ ಎಷ್ಟು ಕೋಟಿ ರೂಪಾಯಿ ಅಪವ್ಯಯವಾಗಿದೆ ಎನ್ನುವುದನ್ನು ಊಹಿಸಬಹುದು. ಈ ಸಭೆಯನ್ನು ನಂಬಿಕೆಗೆ ತೆಗೆದುಕೊಳ್ಳುವುದಾಗಿದ್ದರೆ, ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ, ಮೊದಲ ಎಷ್ಟೆಷ್ಟಕ್ಕೆ ಅಂದಾಜಾಗಿತ್ತು, ಈಗ ಎಷ್ಟೆಷ್ಟು ಖರ್ಚಾಗಿದೆ ಎನ್ನುವ ವಿಚಾರದಲ್ಲಿ ಈ ಸಭೆಗೆ ಅಂಕಿ ಅಂಶಗಳನ್ನು ಕೊಡುವುದು ಅವರ ಧರ್ಮವಾಗಿತ್ತು. ಆದರೆ ಆರೀತಿ ಮಾಡಲಿಲ್ಲ. ಇತ್ತೀಚೆಗೆ ಬದಲಾವಣೆ ಮಾಡಿ rockfill ಎಂದು ಕರೆದರು, masonry ತಪ್ಪಿಸಿ earthen dam ಎಂದರು, ಇದರಿಂದ 59 ಲಕ್ಷ ರೂಪಾಯಿ ಹೆಚ್ಚಾಯಿತು. ಈಗ rockfill dam ಕಟ್ಟಬೇಕೆಂದು, ಸುಮಾರು ಎರಡೂವರೆ ಕೋಟಿ ರೂಪಾಯಿಗೆ ಕಂಟ್ರಾಕ್ಟು ಕೊಟ್ಟಿದ್ದಾರೆ. ಇದಕ್ಕೆ ಕಲ್ಲು ಬೇಕಾಗಿದೆ. ಇದಕ್ಕೆ ನಮ್ಮ ದೇಶದ ಬೇರೆಕಡೆ ಒಂದು ಯೂನಿಟ್‌ಗೆ 40-50 ರೂಪಾಯಿ ಇದೆ. ಇದಕ್ಕೆ ಟೆಂಡರ್ ತೆಗೆದುಕೊಂಡಿದ್ದಾರೆ. ಇದೊಂದು ಕಳ್ಳರ ಸಂತೆ. ಅದರಲ್ಲಿ 100 ರಿಂದ 125 ರೂಪಾಯಿ ಹಾಕಿದ್ದಾರೆ. ಆಮೇಲೆ negotiate ಮಾಡಿ 116-120 ರೂಪಾಯಿ ದರದಲ್ಲಿ ಈ ದಿವಸ ಕೊಟ್ಟಿದ್ದಾರೆ. ಇದರಿಂದ ಈ ಒಂದು ಕೆಲಸಕ್ಕೆ ಸುಮಾರು 75 ಲಕ್ಷ ರೂಪಾಯಿ ಮೊದಲ ಅಂದಾಜಿಗಿಂತ ಹೆಚ್ಚಾಗುತ್ತದೆ. ಈ ಕೆಲಸಕ್ಕೆ ಬೇರೆ ಕಂಟ್ರಾಕ್ಟರು ಕಡಮೆದರ ಕೇಳಿ ಅರ್ಜಿ ಹಾಕಿದ್ದರು ತಮಗೆ ಕೊಡಬೇಕೆಂದು ; ಆದರೆ ನಿಮ್ಮಲ್ಲಿ ದಕ್ಷತೆಯಿಲ್ಲ, ಶಕ್ತಿಯಿಲ್ಲ, ಶಕ್ತಿಯುಳ್ಳವರು ಬೇಕು ಎಂದು ಹೇಳುತ್ತಾರೆ. ಹೀಗೆ ಬೇರೆ ಕಂಟ್ರಾಕ್ಟರುಗಳನ್ನು ಅವರು ನಾಲಾಯಕ್ಕು ಎಂದು ಯಾರನ್ನು ಕಳುಹಿಸಿಬಿಟ್ಟರೋ ಅವರಿಗೂ ಇವರಿಗೂ 70 ಲಕ್ಷ ರೂಪಾಯಿ ವ್ಯತ್ಯಾಸವಿದೆ. ಈ ಹೊತ್ತು ಅದನ್ನು 2ಕೋಟಿ 67ಲಕ್ಷ ರೂಪಾಯಿಗೆ ಬೇರೆಯವರಿಗೆ ಹಂಚಿಕೊಟ್ಟಿದ್ದಾರೆ. ಶರಾವತಿ ಯೋಜನೆಯಲ್ಲಿ ಒಂದು ದೊಡ್ಡ ಲೋಪ ನಡೆದಿದೆ. ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಮಂತ್ರಿಮಂಡಲದಲ್ಲಿ ಅನೇಕರು ದೊಡ್ಡವರು ಸೇರಿ ಹಣವನ್ನು ನುಂಗುತ್ತಿದ್ದಾರೆ, ಏನು ಲೋಪ ನಡೆದಿದೆ ಎಂಬುದನ್ನು ತಿಳಿಯಬೇಕು ಎಂದು ಕೊಡಗಿನಲ್ಲಿ ವ್ಯಕ್ತಪಡಿಸಿದ್ದಾರೆ. ನಾನು ಅವರಿಗೆ ಹೇಳುತ್ತೇನೆ ; ಅನೇಕರು ಹಣವನ್ನು ಲಪಟಾಯಿಸುತ್ತಿದ್ದಾರೆಂಬ ಯಾವಒಂದು ಭಾವನೆ ಇತ್ತೋ ಈ ಹೊತ್ತೂ ಕೂಡ ಅದೇಭಾವನೆಯಿದ್ದರೆ, ಯಾರು ಇದಕ್ಕೆ ಜವಾಬ್ದಾರರೋ ಅವರನ್ನು ನಿಮ್ಮ ಮಂತ್ರಿಮಂಡಲದಿಂದ ವಿಸರ್ಜಿಸಿಬೇಕು, ಇಲ್ಲದಿದ್ದರೆ ಇದಕ್ಕೆ ನೀವೂ ಜವಾಬ್ದಾರರಾಗುತ್ತೀರಿ, ನೀವೂ ಅಧಿಕಾರದಿಂದ ಕೆಳಗಿಳಿಯಬೇಕಾಗುತ್ತದೆ. ಆಗ ಏನು ನಿಲುವಿನಿಂದ ಕೊಡಗಿನಲ್ಲಿ ಭಾಷಣಮಾಡಿದಿರೋ ಅದನ್ನು ಸಮರ್ಥನೆ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಧಾನ ಸೌಧವನ್ನು ಕಟ್ಟಲು ಸುಮಾರು 1ಕೋಟಿ 80ಲಕ್ಷ ರೂಪಾಯಿ ಖರ್ಚಾಯಿತು. ಲಂಗು ಲಗಾಮಿಲ್ಲದೆ ಹಣ ಹೋಗುತ್ತಿದೆ ; ವಿಧಾನಸೌಧವನ್ನು ಸರಿಯಾಗಿ ಕಟ್ಟಿಲ್ಲ ಎಂದು ಒಂದು ವಿಚಾರಣಾ ಸಮಿತಿಯನ್ನು ಮಾಡಿದಿರಿ ; ಆದರೆ ಈ ಹೊತ್ತು ವಿಧಾನಸೌಧಕ್ಕಿಂತ ಎಷ್ಟೋ ಹೆಚ್ಚಾಗಿ, ಎಂಭತ್ತುಕೋಟಿ ರೂಪಾಯಿ ಶರಾವತಿಯೋಜನೆಗೆ ಖರ್ಚಾಗುತ್ತಿರುವಾಗ, ಇದಕ್ಕೆ ಒಂದು ವಿಚಾರಣಾ ಸಮಿತಿಮಾಡಿ ಎಂದು ಹೇಳಿದರೆ ತಾತ್ಸಾರ ಮಾಡಲು ಕಾರಣನೇನು ? ವಿಧಾನಸೌಧವನ್ನು ವಿಷಾದಸೌಧವೆಂದು ಕರೆದು ಅದಕ್ಕೆ ವಿಚಾರಣಾ ಸಮಿತಿ ಮಾಡಿದಿರಿ, ಆದರೆ ವಿನೋದದಿಂದ ಈ ವಿಷಾದಸೌಧದಲ್ಲಿ ಕುಳಿತುಕೊಳ್ಳುತ್ತೀರಿ !

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ವಿನೋದದಿಂದ ಕುಳಿತಿಲ್ಲ.

ಶ್ರೀ ಎಸ್. ಶಿವಪ್ಪ.—ವಿಷಾದಸೌಧ ವಿನೋದಸೌಧವಾಗಬಾರದೆಂದು ಹೇಳುತ್ತಿದ್ದೇನೆ. ತಾವು ವಿಧಾನಸೌಧಕ್ಕೆ ವಿಚಾರಣಾ ಸಮಿತಿಯನ್ನು ಎದೆಗಾರಿಕೆಯಿಂದ ಮಾಡಿದಿರಿ, ಅದೇ ಎದೆಗಾರಿಕೆಯಿಂದ 80ಕೋಟಿ ರೂಪಾಯಿ ಖರ್ಚಾಗುವ ಶರಾವತಿಗೆ ಒಂದು ವಿಚಾರಣಾ ಸಮಿತಿಯನ್ನು ಮಾಡಿ ಅಪವ್ಯಯಕ್ಕೆ ಯಾರು ಜವಾಬ್ದಾರರೋ ಅವರನ್ನು ಜೈಲಿಗೆ ಕಳುಹಿಸಿ, ಈ ಶಕ್ತಿ ಮತ್ತು ಎದೆಗಾರಿಕೆ ನಿಮಗೆ ಬರಲಿ ಎಂದು ಹೇಳುತ್ತೇನೆ.

Sri S. NIJALINGAPPA.—There must be a limit for insinuation !

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೆ, ಈ ಶರಾವತಿ ಯೋಜನೆಯ ವಿಚಾರವನ್ನು ದೀರ್ಘವಾಗಿ ಹೇಳಬೇಕಾಯಿತು. ಏಕೆಂದರೆ, ಮೈಸೂರು ದೇಶಕ್ಕೆ ಹೆಮ್ಮೆ, ಇಡೀ ಭಾರತಕ್ಕೇ ಖ್ಯಾತಿ ತರತಕ್ಕ ಯೋಜನೆ ಇದು. ತುಂಬಾ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸುವ ಅನ್ನದಾತ ಈ ಶರಾವತಿ ; ಇದಕ್ಕೆ ಹೆಚ್ಚು ಹಣವನ್ನು ಖರ್ಚುಮಾಡಿ, ಇದರ ಬೆಲೆಯನ್ನೇರಿಸಿದರೆ ಏನಾಗುತ್ತದೆಂಬುದನ್ನು ಯೋಚಿಸಿದರೆ ಶಂಕೆಯಾಗುತ್ತದೆ. ಆರ್ಬಿಟ್ರೇಷನ್ ಪ್ರಕಾರ ಕೊಟ್ಟಿರತಕ್ಕ ಹಣ, ಶರಾವತಿಯೋಜನೆಯಲ್ಲಿ ಹತ್ತಾರು ಕೋಟಿ ರೂಪಾಯಿ ದುರ್ವಿನಿಯೋಗವಾಗಿರುವುದಕ್ಕೆ ಹೊಣೆ

(ಶ್ರೀ ಎಸ್. ಶಿವಪ್ಪ)

ಗಾರರಾಗುತ್ತೀರಿ, ಇದಕ್ಕಾಗಿ ಬಹಿರಂಗವಾದ ವಿಚಾರಣಾ ಸಮಿತಿಯನ್ನು ಮಾಡಿ ಎಂದರೆ ಮಾಡದೇಯಿರುವುದರಿಂದ ಇದೊಂದು ಅವಿಶ್ವಾಸದ ವಿಚಾರವಾಗಿದೆ. ಇಂಥ ಒಂದು ವಿಚಾರಣಾ ಸಮಿತಿಯನ್ನು ಮಾಡಿ, ದೇಶದಲ್ಲಿ ಹಣವನ್ನು ಸರಿಯಾಗಿ ಖರ್ಚುಮಾಡುತ್ತಿದ್ದೇವೆ, ತಪ್ಪು ಮಾಡುತ್ತಿರುವವರಿಗೆ ಶಿಕ್ಷೆ ಕೊಡಿಸುತ್ತಿದ್ದೇವೆ ಎಂದು ಸರ್ಕಾರ ಸಭೆಗೆ ಮನದಟ್ಟುಮಾಡಿದ್ದರೆ ಈ ಅವಿಶ್ವಾಸವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಹಾಗೆಮಾಡದೆ, ತಾವು ಮಾಡಿದುದೇ ಸರಿ ಎಂಬ ಮೊಂಡುತನವನ್ನು, ಉದ್ಧಟತನವನ್ನು ಪ್ರದರ್ಶಿಸುತ್ತಿರುವಾಗ ಇದನ್ನು ಎದುರಿಸಬೇಕಾಗಿದೆ. ಈ ಮಂತ್ರಿಮಂಡಲ ನ್ಯಾಯಮೂರ್ತಿಗಳಿಂದ ಕೂಡಿದ ಸಮಿತಿಯಿಂದ ತನಿಖೆಮಾಡಿಸದಿದ್ದರೆ ಇದು ಈ ಸ್ಥಾನದಲ್ಲಿರುವುದಕ್ಕೆ ಅರ್ಹವಲ್ಲ. ಈ ದುರ್ವ್ಯಯಕ್ಕೆ ನೀವೇ ಜವಾಬ್ದಾರರು, ನಿಮ್ಮ ಸ್ಥಾನದಿಂದಿಳಿಯಿರಿ ಎಂದು ಮಂತ್ರಿಗಳಿಗೆ ಹೇಳುತ್ತೇವೆ. ನಾವು ಹೇಳಿರುವುದನ್ನು ಶೀಘ್ರವಾಗಿ ಮಾಡದೇಯಿದ್ದರೆ ಇಡೀ ದೇಶವೇ ನಿಮ್ಮಮೇಲೆ ದಂಗೆ ಏಳುವ ಪ್ರಸಂಗ ಬರಬಹುದೆಂದು ಅವರಿಗೆ ಎಚ್ಚರಿಕೆ ಕೊಡುತ್ತೇನೆ.

ಎರಡನೆಯದಾಗಿ, ಕಾಲೇಜು ಶುಲ್ಕವನ್ನು ಏರಿಸಿರುವುದು. ವಿಧ್ಯಾರ್ಥಿಗಳು ಕೊಡಬೇಕಾದ ಫೀಜನ್ನು ಹೆಚ್ಚಿಸಿರುವವಿಷಯ. ಈ ವಿಚಾರವನ್ನು ಅನೇಕಸಾರಿ ಈ ಸಭೆಯಲ್ಲಿಯೂ, ಹೊರಗೆ ವಿದ್ಯಾರ್ಥಿಗಳ ಪ್ರತಿಭಟನೆಯ ರೂಪವಾಗಿಯೂ ವ್ಯಕ್ತಪಡಿಸಲಾಗಿದೆ. ಕಾಲೇಜುಗಳಲ್ಲಿ ಫೀ ಏರಿಕೆಯಿಂದ ಜನರಿಗೆ ಎಷ್ಟು ಕಷ್ಟವಾಗಿದೆ ಎನ್ನುವುದನ್ನು ಪ್ರತಿಭಟನೆ ಹಾಗೂ ಮನವಿಗಳಮೂಲಕ ಸರ್ಕಾರಕ್ಕೆ ಹೇಳಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಚರ್ಚೆಯಾಗುವಾಗ ವಿದ್ಯಾಖಾತೆಯನ್ನು ಹೊತ್ತಿರುವ ಮಂತ್ರಿಗಳು ಸಭೆಯಲ್ಲಿಲ್ಲ, ಅವರಿಗೇನು ಭಯವೋಏನೊ! ಈ ಪ್ರಶ್ನೆಯಿರುವ ಕಾಲದಲ್ಲಿ ಈ ಸಭೆಯಲ್ಲಿ ಅವರಿಲ್ಲದೇಯಿರುವುದನ್ನು ನೋಡಿದರೆ......

Sri S. NIJALINGAPPA.—He is in the Council. Why should the Hon'ble member make such an allegation ?

ಶ್ರೀ ಎಸ್. ಶಿವಪ್ಪ.—ಅವರು ಈ ಸಭೆಯಲ್ಲಿಯೂ ಹೊರಗೂ ಹೇಳಿಕೆಕೊಟ್ಟಿದ್ದಾರೆ. ಅವರಲ್ಲೇನು ದೌರ್ಬಲ್ಯವಿದೆಯೋ ಏನೋ ಗೊತ್ತಿಲ್ಲ; ಒಂದೊಂದು ಕಡೆ ಒಂದೊಂದು ಹೇಳಿಕೆಯನ್ನು ಕೊಡುತ್ತಾರೆ. ಅವರ ಮಾತನಾಡುವ ಚಟ. ಪ್ರೈಮರಿ ಸ್ಕೂಲಿಗೆ ಹೋದರೆ ಅಲ್ಲಿ ಕಾಲೇಜಿನ ವಿಚಾರ ಮಾತನಾಡುತ್ತಾರೆ, ಕಾಲೇಜಿಗೆ ಹೋದರೆ ಪ್ರೈಮರಿಸ್ಕೂಲಿನ ವಿಚಾರ ಮಾತನಾಡುತ್ತಾರೆ. ಒಂದೊಂದು ಕಡೆ ಒಂದೊಂದು ವ್ಯಾಖ್ಯಾನ ಕೊಡುತ್ತಾರೆ.

ಅವರು ಕಾಲೇಜು ಫೀಜಿನ ಏರಿಕೆಯ ಬಗ್ಗೆ ಈ ಸಭೆಯಮುಂದೆ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಈ ಸಭೆಯಲ್ಲಿ ಕೊಟ್ಟಿದ್ದ ಹೇಳಿಕೆ ಸತ್ಯಾಂಶಕ್ಕೆ ಎಷ್ಟು ದೂರವಾಗಿದೆ ಯೆಂಬದನ್ನು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ. ಅವರು ಹೇಳಿದ್ದಾರೆ, "ಈ ಫೀ" ಏರಿಕೆಯ ಪ್ರಶ್ನೆಯನ್ನು ತೆಗೆದುಕೊಂಡರೆ ...... ಉತ್ತರ ಕರ್ನಾಟಕದ ಕಾಲೇಜುಗಳಲ್ಲಿ......

Mr. SPEAKER.—Now it is 3 o'clock. We will now rise to meet after half an hour.

The House adjourned for recess at Five Minutes past Three of the Clock and re-assembled at Thirty Minutes past Three of the Clock.

(MR. SPEAKER in the Chair)

Mr. SPEAKER.—Before Sri Sivappa begins, could he kindly tell me what more time he requires, because I have to apportion time. My suggestion is that if Hon'ble Members who are supporting this motion try to accommodate among themselves and give me an agreed list giving the first speaker more time so as to enable him to speak at great length covering all the points perhaps debate will be slightly better conducted. By the time the Hon'ble member finishes some of the members may meet among themselves and give me a list.

Business of the House

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ನಾಳೆ ಪ್ರಶ್ನೋತ್ತರಗಳ ಕಾಲವನ್ನು Suspend ಮಾಡಿದರೆ ಒಳ್ಳೆಯದು.

Mr. SPEAKER.—I do not want to counter the decision of the House. Is it the desire of the House that question hour should be dropped tomorrow ?

HON'BLE MEMBERS.—Yes.

ಶ್ರೀ ಬಿ. ಹುಚ್ಚೇಗೌಡ.—ಒಂದು ಗಂಟೆಯೊಳಗೆ ಏನಾಗುತ್ತದೆ ? ಇನ್ನೊಂದು ದಿವಸ ಬೇಕೇಬೇಕು. ಇಲ್ಲದಿದ್ದರೆ ಇರುವ ಕಾಲವನ್ನು ಹೇಗೆ ಹಂಚಿಕೆ ಮಾಡುತ್ತೀರಿ ?

Mr. SPEAKER.—Hon'ble Members must have an informal assessment. If they know that they are going to be opposed, they will be spending time for nothing.

ಶ್ರೀ ಬಿ. ಹುಚ್ಚೇಗೌಡ.—ಈ ಸಭೆಯ ಪೂರ್ಣ ಅಭಿಪ್ರಾಯ ಬಂತೆಂದು ದೃಢಪಡಿಸಿಕೊಳ್ಳಬೇಡವೇ ?

ಅಧ್ಯಕ್ಷರು.—ಇಷ್ಟವಿದ್ದರೆ ಹೊರಗೆ ಮಾತಾಡಿಕೊಂಡು ಹೇಳಿ.

ಶ್ರೀ ಬಿ. ಹುಚ್ಚೇಗೌಡ.—ತಾವು Repetition ಇಲ್ಲದಿರುವಹಾಗೆ ನೋಡಿಕೊಳ್ಳಿ. ಆ ರೀತಿ ಮಾತನಾಡಿದರೆ Pull us up......

Mr. SPEAKER.—I will not pull you up unless it is necessary.

ಶ್ರೀ ಬಿ. ಹುಚ್ಚೇಗೌಡ.—ಅವರೇ ಈಗ ಎರಡು ಗಂಟೆ ಅವಕಾಶ ತೆಗೆದುಕೊಂಡಿದ್ದಾರೆ. ಇನ್ನು ಮಿಕ್ಕ ಕಾಲದಲ್ಲ ನಾವೇನು ಮಾತನಾಡುವುದಕ್ಕೆ ಸಾಧ್ಯ ?

Mr. SPEAKER.—Even the little time available, do you want to take it away ?

ಶ್ರೀ ಬಿ. ಹುಚ್ಚೇಗೌಡ.—'No Confidence Motion' ಸಭೆಯ ಮುಂಥೆ ಬಂದಿರುವಾಗ ನಾವು ಸರಿಯಾಗಿ ನಮ್ಮ ಅಭಿಪ್ರಾಯವನ್ನು ಇಡದೆ ಇದ್ದರೆ, ನಾವು ನಮ್ಮ ಚುನಾವಣಾ ಕ್ಷೇತ್ರಕ್ಕೆ ನ್ಯಾಯವಾಗಿ ನಡೆದುಕೊಂಡಂತಾಗುತ್ತದೆಯೋ ? We are responsible to our Constitueney. ಈ ಮಂತ್ರಿಗಳಲ್ಲಿ Short comings (ಲೋಪಗಳು) ಏನಿವೆಯೆಂಬುದನ್ನು ವಿಶದವಾಗಿ ಹೇಳದೆ ಇದ್ದರೆ ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗವುದಿಲ್ಲ.

Mr. SPEAKER.—That is why I have allotted two days.

ಶ್ರೀ ಬಿ. ಹುಚ್ಚೇಗೌಡ.—ಇನ್ನೂ ಎರಡು ದಿವಸ ಅವಕಾಶಕೊಡಿ ! ಇಂಥಾ ಮುಖ್ಯವಿಷಯಕ್ಕೆ ಕಾಲಾವಕಾಶ ಕೊಡದಿದ್ದರೆ ಇನ್ನಾವುದಕ್ಕೆ ಕೊಡುತ್ತೀರಿ ? ಎರಡುಕೋಟಿ ರೂಪಾಯಿಗಳ ನಷ್ಟ ಹೇಗಾಯಿತೆಂಬುದನ್ನು ನಾವು ಹೇಳಬೇಡವೆ !

ಅಧ್ಯಕ್ಷರು.—ಸದಸ್ಯರಿಗಿರುವ ಎಲ್ಲಾ ಕಿರುಕುಳಗಳನ್ನೂ ಈ ಸಂದರ್ಭದಲ್ಲ ಹೇಳುವುದಕ್ಕೆ ಅವಕಾಶ ವಿಲ್ಲ. You have to confine to five points mentioned there.

ಶ್ರೀ ಬಿ. ಹುಚ್ಚೇಗೌಡ.—ಇಲ್ಲ ; ಹೇಳುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಎರಡು ಘಂಟೆ ಮುಂಚಿತವಾಗಿ ಸಭೆಯನ್ನು ಷುರುಮಾಡಿ ಆಮೇಲೆ ಸಭೆಯನ್ನು wind up ಮಾಡುವುದಕ್ಕೆ ರಾತ್ರಿ 9 ಘಂಟೆಯುವರೆಗೂ ಹೋಗಬಹುದು.

ಶ್ರೀ ಜಿ. ಮರುಳಪ್ಪ (ಕಡೂರು).—ಅವಿಶ್ವಾಸ ನಿರ್ಣಯದ ಅವಕಾಶ ಸಿಕ್ಕುವುದೇ ಅಪರೂಪ ! ಈಗ ಬಂದಿರುವಾಗ ಎಲ್ಲವನ್ನೂ ಹೇಳಬೇಕಾಗುತ್ತದೆ. ಆದ್ದರಿಂದ ಇದಕ್ಕೆ ತಾವು Time limit ಮಾಡಕೂಡದು. ಬೇಕಾದರೆ ಜಾಸ್ತಿ ದಿವಸ ತೆಗೆದುಕೊಳ್ಳಿ, ನಾಳೆಯೇ ಕೊನೆಯ ದಿವಸವೆಂದು ಹೇಳಬೇಡಿ.

Sri S. SIVAPPA.—The position is this: many members are very anxious to participate in this vital debate. So they are asking the Chair to extend this debate by a day or two. I am prepared to sit any day.

ಇಂಥದಕ್ಕೆಲ್ಲಾ ಹಬ್ಬ ಏನು ! Feast is not a great matter.

Mr. SPEAKER.—It is not an individual matter. You must take the House with you. I am unable to accept Sri Marulappa's request that every member should be given time as much as he likes.

ಶ್ರೀ ಜಿ. ಮರುಳಪ್ಪ.—ಒಂದು ಘಂಟೆಯಾದರೂ ಕೊಡಬೇಕು ?

ಅಧ್ಯಕ್ಷರು.—ಒಬ್ಬೊಬ್ಬರಿಗೆ ಒಂದೊಂದು ಗಂಟೆಯೇ ! !

Motion of No-Confidence in the Council of Ministers

ಶ್ರೀ ಎಸ್. ಶಿವಪ್ಪ.—ಸಭಾಧ್ಯಕ್ಷರೇ, ನಾನು ಕಾಲೇಜು ಶಿಕ್ಷಣದ ಶುಲ್ಕದ ಬಗ್ಗೆ ಸರ್ಕಾರದವರು ಏನು ತಪ್ಪು ಮಾಡಿದ್ದಾರೆಂಬುದನ್ನು ಎರಡನೆಯ ವಿಷಯವಾಗಿ ಮಾತನಾಡುತ್ತಿದ್ದಾಗ ಹೇಳುತ್ತಿದ್ದೆ. ಈ ವಿದ್ಯಾಖಾತೆಯ ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಬೇಜವಾಬ್ದಾರಿಯಿಂದ ನಿರ್ವಹಿಸತಕ್ಕವರಾಗಿರುವುದರಿಂದ ಅವರು ವಿದ್ಯಾಖಾತೆಯನ್ನು ನಡೆಸಿಕೊಂಡು ಹೋಗತಕ್ಕ ಶಕ್ತಿಯನ್ನು ಹೊಂದಿಲ್ಲ. ಆದ್ದರಿಂದ ಅವರು ಕೆಳಕ್ಕೆ ಇಳಿಯಲೇಬೇಕು ಎಂದು ಹೇಳುವ ಸಂದರ್ಭದಲ್ಲಿ ಅವರು ಈ ಕಾಲೇಜು ಶಿಕ್ಷಣದ ಶುಲ್ಕದ ಬಗ್ಗೆ ಈ ಸಭೆಯಲ್ಲಿ ಏನು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೋ ಆ ಹೇಳಿಕೆ ಅಸಂಬದ್ಧ ಪ್ರಲಾಪವಾಗಿದೆ. ಅವರ ಹೇಳಿಕೆಯಲ್ಲಿ ಯಾವ ಒಂದು ಸಕಾರಣವೂ ಇಲ್ಲ ತರ್ಕಬದ್ಧವಾಗಿಯೂ ಇಲ್ಲವೆಂಬುದಾಗಿ ನಾನು ಅಧ್ಯಕ್ಷರ ಮೂಲಕ ಅವರಿಗೆ ತಿಳಿಸ ಬಯಸುತ್ತೇನೆ. ಅವರು ಹೇಳಿದ್ದಾರೆ ಮೈಸೂರು ದೇಶದ ಸರ್ಕಾರೀ ಕಾಲೇಜುಗಳಲ್ಲಿ ಫಿ ಏರಿಕೆ ಮಾಡಿರುವಂಥಾದ್ದು ಹೊಸ ಪದ್ಧತಿ. ಮೈಸೂರಿನಲ್ಲಿ ಅಂದರೆ ಬೊಂಬಾಯಿ ಕರ್ಣಾಟಕ ಮತ್ತು ಹೈದರಾಬಾದ್ ಕರ್ಣಾಟಕ ಪ್ರದೇಶಗಳಲ್ಲಿರುವ ಹಾಗೆ ಫೀ ಏರಿಕೆಯಾಗಬೇಕು ಇಲ್ಲಿ ಆ ಫೀ ದರವನ್ನು ನಾವು ಕೆಳಗೆ ಇಳಿಸಿದರೆ ಆ ಪ್ರದೇಶಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಅವರು ಚಳುವಳಿಯನ್ನು ಹೂಡಿಯಾರು ಎಂಬ ಒಂದು ತರ್ಕವನ್ನು ಮಾಡಿದ್ದಾರೆ. ಅದೇನು ತರ್ಕವೆಂದರೆ ಚೌಕಾಸಿ ವ್ಯಾಪಾರ, ಕಡಲೆಪುರಿಯನ್ನು ಬೀದಿಯಲ್ಲಿ ವ್ಯಾಪಾರ ಮಾಡುವ ರೀತಿಯ ಒಂದು ತರ್ಕವನ್ನು ಮಾಡುತ್ತಿದ್ದಾರೆ. ಕಾಲೇಜು ವಿದ್ಯಾರ್ಥಿಗಳ ಶುಲ್ಕದ ಬಗ್ಗೆ ಇವರು ಹೇಳಿರುವುದು ಬಹಳ ವಿಷಾದನೀಯವಾಗಿದೆ ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಶಿಕ್ಷಣ ಸಚಿವರ ಹೇಳಿಕೆಯನ್ನು ಅದರಲ್ಲೂ ಮೈಸೂರಿನಲ್ಲಿ ಕಾಲೇಜು ಫೀ ಏರಿಕೆಯನ್ನು ಸಮರ್ಥಿಸಿರುವುದರಿಂದ ಅವರ ಒಂದು ಹೇಳಿಕೆಯನ್ನೂ ಸಹ ನಾನು ವಿರೋಧಿಸಿ ಟೀಕೆ ಮಾಡುತ್ತೇನೆ. ಇಲ್ಲಿನ ಫೀ ಏರಿಕೆಯನ್ನು ಕಡಮೆ ಮಾಡಿದ ಪಕ್ಷದಲ್ಲಿ ಕರ್ಣಾಟಕ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಳುವಳಿಯನ್ನು ಹೂಡಿಯಾರು ಎಂಬುದಾಗಿ ಹಂಬಲಿಸುತ್ತಿದ್ದಾರೆ, ಅಂತಹ ಒಂದು ಬೆದರಿಕೆ ಮಾತಿಗೆ ನಾವು ಹೆದರುವುದಿಲ್ಲ. ವಿದ್ಯಾಶಾಖೆಯ ಮಂತ್ರಿಗಳು ಈ ದೇಶದಲ್ಲ ವಿದ್ಯಾರ್ಥಿಗಳನ್ನು ಬಹಳ ತುಚ್ಛವಾಗಿ ಕಾಣುತ್ತಿದ್ದಾರೆಂಬುದು ಇದರಿಂದ ಚೆನ್ನಾಗಿ ಗೊತ್ತಾಗುತ್ತದೆ. ಅವರನ್ನು ಬೀದಿಯಲ್ಲಿ ತಿರುಗಾಡುವಂತೆ ಮಾಡುತ್ತಿದ್ದಾರೆ. ಹಳೆಯ ಮೈಸೂರು ಪ್ರದೇಶ ಮತ್ತು ಹೊಸ ಮೈಸೂರು ಪ್ರದೇಶವೆಂಬ ಭೇದ ಭಾವವನ್ನು ಹುಟ್ಟಿಸುತ್ತಿದ್ದಾರೆಂದು ನಾನು ಟೀಕಿಸುತ್ತೇನೆ. ಇಂತಹ ಒಂದು ತಾರತಮ್ಯದ ವಿಷ ಬೀಜವನ್ನು ಬಿತ್ತಿ ಒಂದು ಕೆಟ್ಟ ವಾತಾವರಣವನ್ನುಂಟುಮಾಡಿದ್ದಾರೆ. ಇವತ್ತು ನಾವು ದೇಶದಲ್ಲಿ ಒಂದು ಭಾವೈಕ್ಯತೆಯನ್ನು ಸಾಧನೆ ಮಾಡಬೇಕು ಎನ್ನುವ ಕಾಲದಲ್ಲಿ ಈ ವಿದ್ಯಾ ಮಂತ್ರಿಗಳು ಈ ರೀತಿ ಭೇದ ಭಾವವನ್ನು ಕಲ್ಪನೆ

(ಶ್ರೀ ಎಸ್. ಶಿವಪ್ಪ)

ಮಾಡುವುದು ತುಂಬಾ ತಪ್ಪು. ಇದು ಕ್ಷಮೆಗೆ ಅನರ್ಹವಾದುದು. ಇಂತಹ ಮಂತ್ರಿಗಳು ನಮ್ಮ ದೇಶದಲ್ಲಿದ್ದಾರಲ್ಲ ಇದು ಒಂದು ನಮ್ಮ ದುರ್ದೈವವೆಂದೇ ನಾನು ಹೇಳಬೇಕಾಗಿದೆ. ಇವರು ಒಂದೇ ಸಾರಿ ಶೇ. 50ರಷ್ಟು ಕಾಲೇಜು ಫೀಯನ್ನು ಏರಿಸಿದ್ದಾರೆ. ಇವರಿಗೆ ಏನು ದಯವಿದೆ, ಇನ್ನೆಂಥ ಹೃದಯ ಇವರದು ಎಂಬುದಾಗಿ ನಾನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅದನ್ನೇನೋ ಬೇರೆ ತರಹ ಮಾಡುವುದಕ್ಕೆ ಹೋಗುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಸರ್ಕಾರೀ ಕಾಲೇಜುಗಳಲ್ಲಿ ಪ್ರಿ—ಯೂನಿವರ್ಸಿಟಿಗೆ 90 ರೂಪಾಯಿಗಳು ಇದ್ದುದನ್ನು 144 ರೂಪಾಯಿಗಳಿಗೆ ಏರಿಸಿದ್ದಾರೆ ಬಿ. ಎ. ಡಿಗ್ರಿಗೆ 126 ರೂಪಾಯಿಗಳಿಂದ 183 ರೂಪಾಯಿಗಳಿಗೂ, ಬಿ. ಎಸ್. ಡಿಗ್ರೀಗೆ 120 ರಿಂದ, ಲ್ಯಾಬೋರೇಟರಿ ಫೀಜ್ 36 ಸೇರಿಸಿ 300 ರೂಪಾಯಿಗಳಿಗೂ, ಎಂ. ಎ. ಡಿಗ್ರಿಗೆ 144ರಿಂದ 256ರವರೆಗೂ, ಎಂ. ಎಸ್. ಸಿ. ಡಿಗ್ರಿಗೆ 190 ರೂಪಾಯಿಗಳಿಂದ 270 ರೂಪಾಯಿಗಳವರೆಗೂ ಏರಿಸಿದ್ದಾರೆ. ಅದೇ ರೀತಿ ಡಾಕ್ಟರು ಡಿಗ್ರಿಗೆ 80 ರೂಪಾಯಿಗಳಿಂದ 200 ರೂಪಾಯಿಗಳಿಗೂ ಏರಿಸಿದ್ದಾರೆ. ಕನಿಷ್ಠ ಪಕ್ಷ ಶೇಕಡ 50ರಷ್ಟು ಹೆಚ್ಚು ಅಂದರೆ ಒಂದಕ್ಕೆ ಮೂರರಷ್ಟು ಇದೆ. ಒಟ್ಟಿನಲ್ಲಿ ಶೇ. 30 ರಿಂದ 300 ರಷ್ಟರವರೆಗೆ ಈ ಕಾಲೇಜುಗಳ ಫೀಯನ್ನು ಏರಿಸಿದ್ದಾರೆಂದು ಹೇಳಬಹುದು. ವಿದ್ಯಾ ಮಂತ್ರಿಗಳು ಹೋದ ಕಡೆಗಳಲ್ಲಿ ನಮ್ಮ ದೇಶದಲ್ಲಿ ಸುಖೀ ರಾಜ್ಯವನ್ನು ಕಟ್ಟುತ್ತೇವೆ, ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುತ್ತೇವೆಂಬುದಾಗಿ ಎಲ್ಲಾ ಮಕ್ಕಳಿಗೂ ಸಾರಿ ಸಾರಿ ಹೇಳುತ್ತಿದ್ದಾರೆ. ಈ ದೇಶದಲ್ಲಿ ಸಮಾಜವಾದ ಮಾದರಿ ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಸಮಾಜ ವಾದವೆಂದು ಪುಸ್ತಕದಲ್ಲಿ ಮಾತ್ರ ಬರೆದಿದ್ದಾರೆ. ಪುಸ್ತಕದ ಕಟ್ಟಿನಲ್ಲಿ ಬರೆಯುವುದಕ್ಕೆ ಹೊರಟಿದ್ದಾರೆಯೇ ಹೊರತು ಮತ್ತೇನೂ ಬೇರೆ ಇಲ್ಲ. ಸಮಾಜವಾದ ಅಡಿಗಲ್ಲು ಎಂಬುದಾಗಿ ಮಾಡಿ, ನಮ್ಮ ಮಕ್ಕಳಿಗೆ ಈ ಸುಖೀರಾಜ್ಯದಲ್ಲಿ ಉಚಿತ ವಿದ್ಯಾಭ್ಯಾಸ ಕೊಡುತ್ತೇವೆಂದು ಹೇಳಿರುವಾಗ, ಈಗಿರತಕ್ಕ ಫೀ ದರವನ್ನು ವಿದ್ಯಾಮಂತ್ರಿಗಳು ಹೆಚ್ಚಿಸುವುದು ಏನು ಹುಚ್ಚುತನವೆಂದು ನಾನು ಈ ಸಭೆಯಲ್ಲಿ ಪ್ರಶ್ನೆ ಮಾಡಿ ಕೇಳಬೇಕಾಗಿದೆ. ವಿದ್ಯಾ ಮಂತ್ರಿಗಳು ತಮ್ಮ ಸ್ಥಾನವನ್ನು ಕಾಂಗ್ರೆಸ್ ಸರ್ಕಾರದಿಂದ ಬಿಟ್ಟು ಕೆಳಗೆ ಇಳಿಯಬೇಕು ಎಂಬುದಾಗಿ ನಿಮ್ಮ ವಿದ್ಯಾರ್ಥಿಗಳೇ ಮೆರವಣಿಗೆ ಮುಖಾಂತರ ಪ್ರತಿಭಟನೆ ಮಾಡಿ ಹೇಳಿದ್ದಾರೆ. ಫೀಸ್ ದರದಲ್ಲಿ ಇವರ ಒಂದು ತರ್ಕದಲ್ಲಿ ತಿರುಳಿಲ್ಲವೆಂಬುದಾಗಿ ಅನೇಕರು ಹೇಳುತ್ತಿದ್ದಾರೆ. ನಾನೂ ಸಹ ಈ ಸಭೆಯ ವೇದಿಕೆಯಲ್ಲಿ ಸಾವಿರ ಸಾರಿ ಹೇಳಿದ್ದೇನೆ. ಹೇಳಿದ್ದ ಕಥೆಯನ್ನೇ ಹೇಳುತ್ತಿರುತ್ತಾರೆ. ಆದ್ದರಿಂದ ಅಂತಹವರಿಗೆ ಇಲ್ಲಿ ವಿಶೇಷವಾಗಿ ಅವಕಾಶ ಕೊಡುವುದು, ಈ ಸ್ಥಾನದಲ್ಲಿರಿಸುವುದು ಏನೂ ಪ್ರಯೋಜನವಿಲ್ಲ. ಕಾಲೇಜು ಫೀಸನ್ನು ಏರಿಸಿರುವ ಬಗ್ಗೆ ಮೊನ್ನೆ ಒಂದು ಹೇಳಿಕೆಯನ್ನು ಕೊಟ್ಟು ಈಗಿರತಕ್ಕ ಪ್ರಶ್ನೆಯನ್ನು ಇನ್ನೂ ತೊಡಕು ತರುವಂತಹ ರೀತಿಯಲ್ಲಿ ಗಡಿಬಿಡಿ ಮಾಡಿಬಿಟ್ಟಿದ್ದಾರೆ. ಆದ್ದರಿಂದ ಇವರು ಗಡಿಬಿಡಿ ಮಂತ್ರಿಗಳಾಗಬೇಕಾಗಿತ್ತು (ನಗು) ಆದರೆ ವಿದ್ಯಾಮಂತ್ರಿಗಳಾಗಿ ಬಿಟ್ಟಿದ್ದಾರೆ. 3600 ರೂಪಾಯಿಗಳ ವಾರ್ಷಿಕ ಆದಾಯ ಬರುವ ಪೋಷಕರ ಮಕ್ಕಳಿಗೆ ಶುಲ್ಕದ ಏರಿಕೆಯಲ್ಲಿ ಅರ್ಧ ರಿಯಾಯಿತಿಯನ್ನು ತೋರಿಸುತ್ತೇವೆ. ಮುಂದಿನ ವರ್ಷದಿಂದ ಎಲ್ಲರೂ ಪೂರ್ತಿ ಕೊಡಬೇಕಾಗುತ್ತದೆಂದು ಹೇಳಿದ್ದಾರೆ. ವರ್ಷಾದಾಯ 2400 ರೂಪಾಯಿಗಳಿರತಕ್ಕವರ ಮಕ್ಕಳೆಲ್ಲರಿಗೂ ಈ ಫೀ ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದಾರೆ. ಇದು ಯಾವ ಆರ್ಡರೋ ಗೊತ್ತಿಲ್ಲ. ಶ್ರೀಮಾನ್ ಕಂಠಿಯವರು ಈಗಿರತಕ್ಕ ಕಾನೂನು ಪ್ರಕಾರ 2400 ರೂಪಾಯಿಗಳ ವಾರ್ಷಿಕ ಆದಾಯ ಇರುವವರ ಮಕ್ಕಳೆಲ್ಲ ಫ್ರೀಷಿಪ್‌ಗೆ ಅರ್ಹರಾಗಿದ್ದಾರೆಂದು ಹೇಳಿದ್ದಾರೆ. ಆದರೆ ಆ ರೀತಿ ವಾರ್ಷಿಕ ಆದಾಯವಿರುವವರೆಲ್ಲರಿಗೂ ಫ್ರೀಷಿಪ್ ಕೊಡುತ್ತೇವೆಂದು ಅವರೇನೂ ಹೇಳಲಿಲ್ಲ. ಶೇ. 25 ರಷ್ಟು ಮಾತ್ರ ಫೀಸ್ ರಿಯಾಯಿತಿ ಕೊಡುತ್ತೇವೆಂದು ಹೇಳುತ್ತಾರೆ. 2400 ರೂಪಾಯಿಗಳ ವಾರ್ಷಿಕ ಆದಾಯ ಇರುವವರು ಇದಕ್ಕೆ ಅರ್ಹರು ಎಂಬುದಾಗಿ ಸಾರ್ವಜನಿಕ ವೇದಿಕೆಯ ಮೇಲೆ ನಿಂತು ಜನರಿಗೆ ಗೊತ್ತಾಗದೆ ಇರುವ ರೀತಿಯಲ್ಲಿ ಮರೆಮಾಚಿಕೊಂಡು ಹೇಳುತ್ತಿದ್ದಾರೆ. ಈ ರೀತಿ ದೊಡ್ಡ ಅಪರಾಧವನ್ನು ಮಾಡಿದ್ದಾರೆ. ಈ ವಿದ್ಯಾಮಂತ್ರಿಗಳು ಹೋದ ಕಡೆಗಳಲ್ಲೆಲ್ಲಾ ಬಾಯಿಗೆ ಬಂದ ಹಾಗೆ, ಮನಸ್ಸಿಗೆಬಂದಂತೆಲ್ಲಾ ಹೇಳಿಕೊಂಡು ಹೋಗುತ್ತಿದ್ದಾರೆ. ನನಗೆ ಅಧಿಕಾರ ಕೊಟ್ಟಿದ್ದಾರೆಂದು ಹೇಳಿಕೊಂಡು ಇವರು ಇಷ್ಟಬಂದಂತೆ ಮಾಡಲು ಹೀಗೆ ಬಿಡಬಹುದೇ ಎಂದು ನಾನು ಮಂತ್ರಿ ಮಂಡಲವನ್ನು ಕೇಳಬೇಕಾಗಿದೆ. ವಿದ್ಯಾಮಂತ್ರಿಗಳು ಕಾಲೇಜಿನ ವ್ಯವಹಾರದಲ್ಲಿ ಎಷ್ಟರ ಮಟ್ಟಿಗೆ ಅನುಭವ ಹೊಂದಿದ್ದಾರೆಂಬುದು ಗೊತ್ತು. ಕಾಲೇಜಿನ ಫೀಜನ್ನು ಏರಿಕೆ ಮಾಡಿ ಹೆಚ್ಚಿಗೆ ಉಪಾಧ್ಯಾಯರನ್ನು ನೇಮಕ ಮಾಡುತ್ತೇವೆ, ಅವರ ಒಂದು ಅಂತಸ್ತನ್ನು ಜಾಸ್ತಿ ಮಾಡುತ್ತೇವೆ, ಅದಕೋಸ್ಕರ ಫೀಸ್ ಏರಿಕೆ ಮಾಡಬೇಕಾಗಿದೆಯೆಂದು ಬಾಯಲ್ಲಿ ಹೇಳುತ್ತಾ ನಮ್ಮ ಮೈಸೂರು ದೇಶದ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿದ್ದ III ಲೆಕ್ಚರುಗಳನ್ನು ಮನೆಗೆ ಕಳುಹಿಸಿದ್ದಾರೆ. ಹೊಸ ತರಹ ಹುದ್ದೆಗಳನ್ನು ರಚಿಸಬೇಕೆಂದು ಹೇಳಿ ಈಗ ಡೆಮಾನ್ ಸ್ಟ್ರೇಟರ್ಸ್ ಮತ್ತು ಟ್ಯೂಟರ್ಸ್ ಎಂದು ಹುದ್ದೆಗಳನ್ನು ಮಾಡಿದ್ದಾರೆ. ಇದು ಹೇಗೆ ಬಂತು ಎಂಬುದನ್ನು ಹೇಳುತ್ತೇನೆ. ಕರ್ಣಾಟಕ ವಿಶ್ವವಿದ್ಯಾನಿಲಯದಲ್ಲಿ ಟ್ಯೂಟರ್ಸ್ ಮತ್ತು ಡೆಮಾನ್‌ಸ್ಟ್ರೇಟರ್ಸ್ ಎಂಬ ಹುದ್ದೆಗಳಿವೆ. ಅದೇ ಮಾದರಿ ಇಲ್ಲಿ ಮಾಡುತ್ತೇನೆಂದು ಹೊಸದಾಗಿ ಈಗ ಮಾಡುತ್ತಿದ್ದಾರೆ. ಇದು ಗುರುವಿಗೆ ತಿರುಮಂತ್ರ ಹೇಳಿದ ಹಾಗಾಗಿದೆ.

Sri S. R. KANTHI (Minister for Education).-On a point of order. He is trying to misquote me. What I have said is that there are such posts in Karnatak University. I have said that only such posts exist in South Canara and Karnatak University.

ಶ್ರೀ ಎಸ್. ಶಿವಪ್ಪ.—ಈ ವಿದ್ಯಾಮಂತ್ರಿಗಳಿಗೆ ವಿಶ್ವವಿದ್ಯಾನಿಲಯದ ಕಾನೂನುಗಳು ಬೇರೆ ಇವೆ, ಆಕ್ಟ್ ಬೇರೆ ಇದೆ ಎಂಬುದೇ ಗೊತ್ತಿಲ್ಲವೆಂದು ಕಾಣುತ್ತದೆ. ಅವರೆಲ್ಲೋ ಅದನ್ನು ಮರೆತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮಗೆ ಒಂದು ಭಯವಿದೆ. ನಾನು ಇನ್ನೊಬ್ಬರ ಭಾಷಣವನ್ನು

ಮಿಸ್‌ಕೋಟ್ ಮಾಡಿದರಲ್ಲಾ ಎಂದು ಹೇಳಿದಾಗ ನನಗೆ ತಾವು ಅವಕಾಶ ಕೊಡದೆ ತಮ್ಮನ್ನು ನಾನು ಒಬೆ ಮಾಡಬೇಕು ಎಂದು ಹೇಳಿದಿರಿ. ಆ ರೀತಿಯೇ ನಾದರೂ ಪರ್ಸಿಸ್ಟ್ ಮಾಡಿದರೆ ಅದರ ಕಾನ್ಸಿಕ್ವೆನ್ಸಸ್ಸಿಗೆ ಬದ್ಧನಾಗಬೇಕು ಎಂಬುದಾಗಿ ಹೇಳಿದಿರಿ. ಅವರಿಗೇನೋ ಅಧಿಕಾರವಿದೆ ಪ್ರಿವಿಲೇಜ್ ಇದೆ ಅವರು ಹೇಳಿದ್ದು ಸರಿಯೋ ತಪ್ಪೋ ಆದರೂ ಅವರಿಗೆ ಮಾತ್ರ ಆ ರೀತಿ ಹೇಳಲು ಅವಕಾಶ ಕೊಟ್ಟದ್ದು ಸರಿಯೇ ಎಂದು ನಾನು ಕೇಳುತ್ತೇನೆ? ಆ ವಿಷಯದಲ್ಲಿ ತಾವು ರೂಲಿಂಗ್ ಕೊಡುವುದಾದರೆ ನಾನು ಸಮಾಧಾನವಾಗಿ ಕುಳಿತುಕೊಳ್ಳುತ್ತೇನೆ.

Mr. SPEAKER.–I have reserved my ruling.

ಶ್ರೀ ಎಸ್. ಶಿವಪ್ಪ.—ಶ್ರೀಮಾನ್ ಕಂಠಿಯವರಿಗೆ ಅವರು ಯಾವ ಯಾವ ಸಭೆಯಲ್ಲಿ ಏನೇನು ಭಾಷಣ ಮಾಡಿದ್ದಾರೆ ಎಂಬುದು ಅವರಿಗೆ ಗೊತ್ತಾಗುವುದಿಲ್ಲ. ಅವರ ಭಾಷಣವನ್ನು ನಾನು ಮಿಸ್‌ಕೋಟ್ ಮಾಡುವುದಿಲ್ಲ. ಅವರು ಸ್ವಲ್ಪಮಟ್ಟಿಗೆ ತಮ್ಮ ಭುಜಗಳನ್ನು ತಟ್ಟಿಕೊಂಡಿದ್ದಾರೆ. "ನಾನು ಈ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟರೂ ಪರವಾಯಿಲ್ಲ ಆದರೆ ಈ ಕಾಲೇಜು ಫೀಜುಗಳನ್ನು ಇಳಿಸುವುದಿಲ್ಲ." I am like the rock of gibralter ಎಂದು ಹೇಳಿದ್ದಾರೆ. ಇದೇ ಶಾಸನ ಸಭೆಯಲ್ಲಿ ನಾವುಗಳೆಲ್ಲರೂ ಕಾಲೇಜಿನ ಫೀಜನ್ನು ಕಡಮೆ ಮಾಡಬೇಕೆಂದು ಹೇಳಿದೆವು. ಆದರೆ ಆಗ ಅವರು ಅದಕ್ಕೆ ಒಪ್ಪಲಿಲ್ಲ. ಅನಂತರ He compromised with the motive. If he had any democratic sence Mr Speaker, I ask through you, why he did not resign and get out ?

[Sri S. R. Kanthi rose]

Mr. SPEAKER.—I cannot allow two Members to speak simultaneously.

Sri S. SIVAPPA.–I am not prepared to yield. Let him have his chance at the time of reply. ಇವರಲ್ಲಿ ಒಂದು ಆತ್ಮನಂಬಿಕೆ ಇಲ್ಲ. ವಿದ್ಯಾ ಖಾತೆಯನ್ನು ಹೊರಲು ಇವರು ಅನರ್ಹರು. ಇವರು ಏಕದಂ ಕಾಲೇಜು ಮಕ್ಕಳ ಮೇಲೆ 50 ಪರ್ಸೆಂಟ್ ಫೀಜನ್ನೂ ಜಾಸ್ತಿ ಮಾಡಿ ಈಗ ಪುನಃ ಸ್ವಲ್ಪ ಇಳಿಸಿದ್ದಾರೆ. ಆ ರೀತಿ ಇಳಿಸುವುದರಲ್ಲಿಯೂ ಒಂದು ವೈಶಿಷ್ಟ್ಯತೆಯನ್ನು ತೋರಿಸಿದ್ದಾರೆ. 3600 ರೂಪಾಯಿಗಳಿಗಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಶೇಕಡಾ 50 ರಷ್ಟು ರಿಯಾಯಿತಿ ತೋರಿಸಿದ್ದಾರೆ. 3600 ರೂಪಾಯಿ ಆದಾಯ ಇರುವವರು ಇಷ್ಟು ಫೀಜು ಕೊಡಬೇಕು, 2400 ರೂಪಾಯಿ ಆದಾಯ ಬರುವವರು ಇಷ್ಟು ಕೊಡಬೇಕು ಎಂದು ಹೇಳಿದ್ದಾರೆ. ಇದು ಕಡ್ಲೆಪುರಿ ವ್ಯಾಪಾರವನ್ನು ಮಾಡಿದ ಹಾಗೆ ಆಯಿತು. ವಿದ್ಯಾಮಂತ್ರಿಗಳು ಹೇಳುವ ಮಾತಿನಲ್ಲಿ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂದು ಹೇಳಿದ ಹಾಗಾಯಿತು. ಎಷ್ಟರಮಟ್ಟಿಗೆ ಇವರು ಕಾಲೇಜಿನಲ್ಲಿ ಓದತಕ್ಕ ಮಕ್ಕಳಿಗೆ ವಿದ್ಯಾಸೌಕರ್ಯವನ್ನು ಒದಗಿಸುತ್ತಾರೆಂದು ನಾನು ವಿದ್ಯಾಸಚಿವರನ್ನು ಕೇಳುತ್ತೇನೆ. ವಿದ್ಯಾಖಾತೆಯ ಮಂತ್ರಿಗಳು ತಮ್ಮ ಕರ್ತವ್ಯವನ್ನು ಬೇಜವಾಬ್ದಾರಿಯಿಂದ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಇವರು ಅಧಿಕಾರದಿಂದ ಕೆಳಗೆ ಇಳಿಯಲೇಬೇಕೆಂದು ನಾನು ಹೇಳುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಹೊಸದಾಗಿ ಟ್ಯೂಟರ್ ಮತ್ತು ಡೆಮಾನ್‌ಸ್ಟ್ರೇಟರ್ಸ್ ಎಂಬ ಹುದ್ದೆಗಳನ್ನು ನಿರ್ಮಾಣ ಮಾಡಿದ್ದಾರೆ. ವಿಶ್ವವಿದ್ಯಾನಿಲಯದ ಶಾಸನದಲ್ಲಿ ಡೆಮಾನ್‌ಸ್ಟ್ರೇಟರ್ಸ್ ಮತ್ತು ಟ್ಯೂಟರುಗಳ ನೇಮಕಕ್ಕೆ ಅವಕಾಶವಿಲ್ಲದೆ ಇದ್ದಾಗ್ಯೂ ಇವರು ವಿಶ್ವವಿದ್ಯಾನಿಲಯದ ಪ್ರೋಛಾನ್ಸಲರ್ ಆಗಿರುವುದಕ್ಕೆ ಅರ್ಹರೇ ಎಂದು ನಾನು ಕೇಳುತ್ತೇನೆ. ಟ್ಯೂಟರ್ಸ್ ಮತ್ತು ಡೆಮಾನ್‌ಸ್ಟ್ರೇಟರು ಎನ್ನುವ ಹುದ್ದೆಗಳನ್ನು ನಿರ್ಮಾಣ ಮಾಡಬೇಕಾಗಿದ್ದರೆ ಕಾನೂನು ಬದ್ಧವಾಗಿ ಒಂದು ಆರ್ಡರನ್ನು ಮಾಡತಕ್ಕ ಒಂದು ಶಕ್ತಿ ಇರತಕ್ಕದ್ದು ಆ ಅಕೆಡಮಿಕ್ ಕೌನ್ಸಿಲ್‌ನವರಿಗೆ. ಅವರು ಏನು ಒಂದು ಕಾನೂನು, ಒಂದು ಆರ್ಡರು ಮಾಡುತ್ತಾರೆಯೋ ಅದರ ಪ್ರಕಾರ ಇಡೀ ವಿಶ್ವವಿದ್ಯಾನಿಲಯವು ನಡೆಯುತ್ತಿದೆ. ಈ ಹೊಸ ಹುದ್ದೆಗಳ ನಿರ್ಮಾಣಕ್ಕೆ ಅಕೆಡಮಿಕ್ ಕೌನ್ಸಿಲ್‌ನವರು ಒಪೀನಿಯನ್ ಕೊಟ್ಟಿಲ್ಲ. ಡೈರೆಕ್ಟರ್ ಆಫ್ ಕೊಲೆಜಿಯೇಟ್ ಎಜ್ಯುಕೇಷನ್ ಅವರು ಹೇಳಿದ ವಿದ್ಯಾಭ್ಯಾಸ ಕ್ರಮವೇ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದೆ. ಈ ವಿಶ್ವವಿದ್ಯಾನಿಲಯದಲ್ಲಿ ಮತ್ತು ವಿದ್ಯಾಖಾತೆಯಲ್ಲಿ ಒಂದು ಹುಚ್ಚು ದರ್ಬಾರು ನಡೆಯುತ್ತಿವೆ. ವಿಶ್ವವಿದ್ಯಾನಿಲಯದಲ್ಲಿ ಮತ್ತು ವಿದ್ಯಾಖಾತೆಯಲ್ಲಿ ಎಷ್ಟರಮಟ್ಟಿಗೆ ಜನತೆಗೆ ನ್ಯಾಯ ದೊರಕುತ್ತಿದೆ ಎನ್ನತಕ್ಕ ವಿಚಾರ ಈ ದೇಶದಲ್ಲಿ ಎಲ್ಲೆಲ್ಲೂ ಬೀದಿಯ ಮಾತಾಗಿದೆ. ಇತ್ತೀಚೆಗೆ ಕಾಲೇಜುಗಳಲ್ಲಿ ಜಾತೀಯತೆಯ ಸೋಂಕು ಪ್ರವೇಶಿಸಿದೆ. ಸ್ವತಂತ್ರ ದೇಶವಾದ ಈ ದೇಶದಲ್ಲಿ ಯಾವ ಕೋಮುವಾರು ಭಾವನೆಯೂ ಇಲ್ಲದೆ ಸರ್ವ ಸ್ವತಂತ್ರವಾಗಿ ಬಾಳಬೇಕು. ಇವೊತ್ತಿನ ದಿವಸ ನಮ್ಮ ಮಾನ್ಯ ಮಹಿಳಾ ಮಿತ್ರರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದರು ಈ ಖಾತೆಯನ್ನು ಸ್ವಾಮಿಗಳು ನಡೆಸುತ್ತಿದ್ದಾರೋ ಅಥವಾ ವಿದ್ಯಾಮಂತ್ರಿಗಳು ನಡೆಸುತ್ತಿದ್ದಾರೋ ಎಂದು. ಅವರು ಹೇಳಿದ ಮಾತನ್ನು ನಾನು ನೂರಕ್ಕೆ ನೂರು ಸಮರ್ಥಿಸುತ್ತೇನೆ. ಶ್ರೀಮಾನ್ ಕಂಠಿಯವರು ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರಿನಲ್ಲಿ ಒಬ್ಬರು ಸ್ವಾಮಿಗಳಿಗೆ ಅಡ್ಡ ಸಲಾಮು ಹಾಕಿದರು (ನಮಸ್ಕಾರ ಮಾಡಿದರು) ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕು, ಸಮಾಜವಾದೀ ಸಮಾಜವನ್ನು ಕಟ್ಟಬೇಕು ಎಂದು ಹೇಳುತ್ತಾ ಇರುವಾಗ...

Mr. SPEAKER.—Have you ascertained when he went to him and made obeisance to Swamiji as Chief Minister ?

Sri S. SIVAPPA.—He did it when he was Chief Minister.

Mr. SPEAKER.—Has he no individuality when he is Chief Minister ?

Sri S. SIVAPPA.—He went and got the blessing of the Swamiji.

Sri S. R. KANTHI.—I am a believer in God and in Guru as a person. He may not believe in God. I will prostrate before all those persons who have merit in them. I consider that it is my privilege and right. I have not gone and prostrated before anybody as Education Minister or as Chief Minister.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ವಿದ್ಯಾ ಮಂತ್ರಿಗಳು ಈಗತಾನೆ ಹೇಳಿದರು ನನಗೆ ಗುರುಗಳಲ್ಲಿ ನಂಬಿಕೆ ಇದೆಯೆಂದು. ಅವರು ತಮ್ಮ ಗುರುಗಳಿಗೆ ನಮಸ್ಕಾರ ಮಾಡುವುದಕ್ಕೆ ಹೋದಾಗ ಅವರಿಗೆ ಏನು ಆಶ್ವಾಸನೆಯನ್ನು ಕೊಟ್ಟರು ಎಂಬುದನ್ನು ತಿಳಿಸುತ್ತಾರೆಯೇ ?

Mr. SPEAKER.—I shall deal with it later.

I am not allowing any interruption unless it is a point of order.

[*Sri Gopala Gowda rose.*]

Mr. SPEAKER.—The Hon'ble Member will resume his seat. Unless it is a point of order I do not want anybody to disturb the member speaking.

Sri C. J. MUCKANNAPPA.—Let there not be heat in the proceedings. Let the debate go on peacefully.

Sri S. R. KANTHI.—I protest strongly against any reflection on my personal character Personal matters should not be discussed here I appeal to the hon'ble member that he should see that only my action as Education Minister or as Chief Minister is discussed in the House. I cannot allow him to bring in any personal matters and say that I prostrated before any Swamiji.

Sri C. J. MUCKANNAPPA.—I rise to a point of order.

Mr. SPEAKER.—The Education Minister is already on a point of order. Are you on a point of order ?

Sri C. J. MUCKANNAPPA.--Yes, Sir.

Sri S.R. KANTHI.—I am at the disposal of the House only as an individual and whatever I do as an individual cannot be discussed or questioned here.

Sri K. LAKKAPPA (Hebbur).—I oppose the point of order. When the debate has been going on the Education Minister is bringing in irrelevant things which have no relevance to the debate. My friend the Leader of the Opposition has not made an allegation, but the concerned Minister is bringing in something which is irrelevant and which has no substance.

4-00 P.M.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಶ್ರೀಮಾನ್ ಕಂಠಿಯವರು ನನ್ನ ವೈಯಕ್ತಿಕ capacityಯಲ್ಲಿ ಹೋಗಿ—ಗುರುಗಳಲ್ಲಿ ನಂಬಿಕೆ ಇರುವವನು ಅವರಿಗೆ ನಮಸ್ಕಾರ ಮಾಡಿದೆ ಎಂದು ಸಭೆಯಲ್ಲಿ ಒಪ್ಪಿಕೊಂಡರು. ಆ ಗುರುಗಳಿಗೆ ಅವರು ಎರಡು ಮಾತುಗಳನ್ನು ನಡೆಸಿಕೊಡುತ್ತೇನೆ ಎಂದು ವಾಗ್ದಾನ ಕೊಟ್ಟು, ಮುಖ್ಯಮಂತ್ರಿಯಾಗಿ ಆ ವಾಗ್ದಾನವನ್ನು ನಡೆಸಿದ್ದಾರೆ ಎಂದು ನನಗೆ ಗೊತ್ತಾಗಿದೆ.

Mr. SPEAKER.—You are raising a new point. You can speak on it if you get a chance in the debate.

What is Sri Muckannappa's point of order ?

Sri C. J. MUCKANNAPPA.—It is over, Sir. The time is lost. What is the good of my raising the point of order...

Mr. SPEAKER.—You must say, 'I have no point of order'.

Sri C. J. MUCKANNAPPA.—There was a point of order, when I rose from my seat. It has lost weight now.

Mr. SPEAKER.—You are entirely wrong in thinking that points of order have a charm.

ಶ್ರೀ ಎಸ್. ಶಿವಪ್ಪ.–ಸಭಾಪತಿಯವರೇ, ಶ್ರೀಮಾನ್ ಕಂಠಿಯವರು ಮೈಸೂರು ದೇಶದ ಮುಖ್ಯಮಂತ್ರಿಗಳು ಅಥವಾ ವಿದ್ಯಾಖಾತೆಯ ಸಚಿವರಾಗಿ ಇಲ್ಲದೇ ಹೋದರೆ ಕಂಠಿಯವರಿಗೂ ನನಗೂ ಏನೂ ಸಂಬಂಧ ವಿಲ್ಲ. ಈ ಶಾಸನಸಭೆಯಲ್ಲಿ ಅವರ ವಿಷಯವನ್ನು ಪ್ರಸ್ತಾಪಿಸುವ ವಿಚಾರವೂ ಕೂಡ ಬರುವುದಿಲ್ಲ. ಕಂಠಿಯವರು ವೈಯಕ್ತಿಕವಾಗಿ ಅಲ್ಲದೇ ಇದ್ದರೂ ಯಃಕಶ್ಚಿತ್ ವ್ಯಕ್ತಿಗಳಾಗಿ ನನಗೂ ಅವರಿಗೂ ಸಂಬಂಧವಿಲ್ಲ. ಮೈಸೂರು ದೇಶದ ಮುಖ್ಯಮಂತ್ರಿಯಾಗಿ ಮೈಸೂರು ದೇಶದ ವಿದ್ಯಾಖಾತೆಯ ಮಂತ್ರಿಯಾಗಿರತಕ್ಕ ಕಾಲದಲ್ಲಿ ಅವರು ಈ ಸಭೆಗೆ ಜವಾಬ್ದಾರರು ಮತ್ತು ಈ ದೇಶದ ಜನತೆಗೆ ಜವಾಬ್ದಾರರು.

Mr. SPEAKER.—Is he responsible with regard to everything, the food that he eats, the amount of sleep that he gets? Such personal things should be avoided.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದ ಮುಖ್ಯಮಂತ್ರಿಗಳಾಗಿ ಏನೇನು ಕೆಲಸ ಮಾಡಿದ್ದಾರೆಯೋ ಅದಕ್ಕೆ ಅವರು ಈ ಸಭೆಗೂ ಮತ್ತು ಮೈಸೂರು ದೇಶದ ಜನತೆಗೂ ಕೂಡ ಜವಾಬ್ದಾರರು ಎಂದು ಅವರಿಗೆ ಸಾರಿ ಸಾರಿ ಹೇಳುತ್ತೇನೆ. ಇದನ್ನು ದಯವಿಟ್ಟು ಅವರು ಒಪ್ಪಿಕೊಳ್ಳಬೇಕು.

ಸ್ವಾಮಿ ಇವತ್ತಿನ ದಿವಸ ಮೈಸೂರು ದೇಶದಲ್ಲಿ ಕಾಲೇಜುಗಳ ಫೀಜು ಏರಿಕೆ ಸಂಬಂಧವಾಗಿ ವಿದ್ಯಾರ್ಥಿಗಳಿಗೆ ಇಲ್ಲಿಯವರೆಗೆ ಯಾವ ಸೌಲಭ್ಯ ಇತ್ತೋ ಅದನ್ನು ಒದಗಿಸಿಕೊಡುತ್ತೇನೆ ಎಂದು ದೇಶದ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪ ಅವರು ಅವರ ಹತ್ತಿರ ಬಂದು ಅವರನ್ನು ಭೇಟಿ ಮಾಡಿದಾಗ ವಿದ್ಯಾರ್ಥಿಗಳಿಗೆ ನೀವು ಈ ಪ್ರತಿಭಟನೆಯನ್ನು ನಿಲ್ಲಿಸಿ ನಿಮಗೆ ನಾನು ಅನುಕೂಲ ಮಾಡಿಕೊಡುತ್ತೇನೆ ಎಂದು ಭರವಸೆ ಕೊಟ್ಟರು. ಆ ನಮ್ಮ ಪುಟ್ಟ ಸಹೋದರರು, ವಿದ್ಯಾರ್ಥಿಗಳು ಅಂದಿನ ದಿವಸ ನಿಮ್ಮ ಮೇಲೆ ಬಹಳ ನಂಬಿಕೆ ಇಟ್ಟು ತಮ್ಮ ಶಾಂತತೆಯಿಂದ ನಡೆಸುತ್ತಾ ಇದ್ದ ಚಳುವಳಿಯನ್ನು ವಾಪಸು ತೆಗೆದುಕೊಂಡರು. ಆವತ್ತಿನ ದಿವಸ ಚಳುವಳಿಯನ್ನು ನಿಲ್ಲಿಸಿದ ಮೇಲೆ ವಿದ್ಯಾಖಾತೆಯ ಸಚಿವರು ಮೈಸೂರಿಗೆ ಹೋದ ಕಾಲದಲ್ಲಿ ಒಂದು ಹೇಳಿಕೆ ಕೊಟ್ಟರು. ನಾನು ವಿದ್ಯಾಖಾತೆಯ ಸಚಿವನಾಗಿ ಆ ಸ್ಥಾನದಲ್ಲಿರುವವರೆಗೂ ನಮ್ಮ ಸರ್ಕಾರ ಈ ಫೀಜು ಏರಿಕೆಯನ್ನು ಇಳಿಸು

ವುದಿಲ್ಲ, ಇದು ಬಡಾ ಖಂಡಿತವಾದ ಮಾತು ಎಂದು ದೇಶದ ಎಲ್ಲ ಮೂಲೆಯಲ್ಲೂ ಹೇಳಿಕೊಂಡು ಬಂದರು. ಅವರಿಂದ ಒಂದು ಪರಿಸ್ಥಿತಿ ಉದ್ಭವಿಸಿತು. ಇಲ್ಲಿ ಮುಖ್ಯಮಂತ್ರಿಗಳು ಕೊಟ್ಟಂಥ ಭರವಸೆಗೆ ವಿರುದ್ಧವಾಗಿ ಈ ಖಾತೆಯ ಸಚಿವರು ಒಂದೊಂದು ಕಡೆ ಒಂದೊಂದು ತರಹವಾದ ವಾದವನ್ನು ದೇಶದ ಮುಂದೆ ಇಡುತ್ತಾ ಹೋದರು. ನಾನು ಹೇಳುವುದು ಎರಡು ಅಂಶಗಳು ಇದರಲ್ಲಿ ಅಡಕವಾಗಿವೆ. ಒಂದು ಮುಖ್ಯಮಂತ್ರಿಗಳು ಹೇಳಿದ್ದನ್ನು ನಡೆಸದೇ ಹೋದರು ಅದಕ್ಕಾಗಿ ಇವರು ರಾಜೀನಾಮೆ ಕೊಡಬೇಕಾಗಿತ್ತು. ವಿದ್ಯಾಖಾತೆಯ ಸಚಿವರು ಮೊನ್ನೆಯ ದಿವಸ ಈ ಸಭೆಗೆ ಬಂದು ಅರ್ಧಂಭರ್ದ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರು ಹೇಳಿದ್ದಕ್ಕೂ ಅವರು ಮಾಡುವುದಕ್ಕೂ ಏನಾದರೂ ಸಂಬಂಧವಿದೆಯೇ? ಇದು ಯಾವ ತರಹದ ಪ್ರಜಾಪ್ರಭುತ್ವ? ಒಂದು ನಿಲುವನ್ನ ತೆಗೆದುಕೊಂಡ ಮೇಲೆ ಅದನ್ನು ಸಾಧನೆ ಮಾಡತಕ್ಕ ಶಕ್ತಿ ಇಲ್ಲದೇ ಹೋದಮೇಲೆ ಅದನ್ನು ದೇಶದ ಪ್ರಜೆಗಳ ಮುಂದೆ ಘಂಟೆಹೊಡೆದಹಾಗೆ ಹೇಳಬೇಕು. ಹೀಗೆ ಮಾಡುವ ತಪ್ಪುಗಳನ್ನು ಮನ್ನಿಸಿ ಮಂತ್ರಿಗಳಾಗಿರಲು ನಿಮಗೆ ಇಲ್ಲಿ ಹೇಗೆ ಅಧಿಕಾರ ಕೊಡಬೇಕು ಎನ್ನುವುದನ್ನು ಜನತೆ ನೋಡುತ್ತಾ ಇದೆ. ಮುಖ್ಯಮಂತ್ರಿಗಳು ತಮ್ಮ ಭರವಸೆಯನ್ನು ಈಡೇರಿಸಿಕೊಳ್ಳಬೇಕಾಗಿದ್ದರೆ ಅವರ ಮಾತನ್ನು ವಿದ್ಯಾಮಂತ್ರಿಗಳು ಕೇಳಬೇಕು, ಕೇಳದಿದ್ದ ಪಕ್ಷದಲ್ಲಿ ಮಂತ್ರಿಮಂಡಲದಿಂದ ಅವರನ್ನು ವಜಾ ಮಾಡಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ಇರುವುದು ಈ ಎರಡೇ ದಾರಿ. ಈ ಎರಡನ್ನೂ ಬಿಟ್ಟು ವಿದ್ಯಾಮಂತ್ರಿಗಳು ಅವರ ಮನಸ್ಸಿಗೆ ಬಂದಂತೆ ಹೇಳುತ್ತಾ ಇದ್ದಾರೆ. ಮೊನ್ನೆ ಈ ಸಭೆಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅದರಿಂದಾಗಿ ನಮ್ಮ ದೇಶದಲ್ಲಿ ವಾತಾವರಣ ಕಲಕಿಹೋಗಿದೆ. ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯದಲ್ಲಿ ಅಸಮಾಧಾನವುಂಟಾಗಿದೆ. ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೂ ಕೂಡ ತುಂಬಾ ಅಸಮಾಧಾನವುಂಟಾಗಿದೆ. ಒಂದು ಸುಭದ್ರವಾದ ವಾತಾವರಣ ದೇಶದಲ್ಲಿ ಇಲ್ಲ. ಇವತ್ತಿನ ದಿವಸ ಇದನ್ನು ಪರಿಶೀಲನೆ ಮಾಡಬೇಕು, ಸರ್ಕಾರಿ ಕಾಲೇಜುಗಳಲ್ಲಿ ಟೆಂಪೊರೆರಿ ಲೆಕ್ಚರರ್ಸ್ ಆಗಿ ಎಷ್ಟು ಜನರನ್ನು ನೇಮಕ ಮಾಡಿಕೊಂಡಿದ್ದೀರಿ? ಅವರ ಅವರ ದಾಮಷ ಏನಿದೆ; ಯಾವ ಆಧಾರದ ಮೇಲೆ ಎಂಬ ವಿವರಗಳನ್ನು ಕೊಡಿ. ಎಷ್ಟರಮಟ್ಟಿಗೆ ಸರ್ಕಾರಿ ಕಾಲೇಜುಗಳಲ್ಲಿರತಕ್ಕ ಅಧ್ಯಾಪಕರಲ್ಲಿ ಅಸಂತೋಷವುಂಟಾಗಿದೆ ಎಂದರೆ ಯಾರಿಗೂ ಕೂಡ ಅಲ್ಲಿ ಭದ್ರತೆ ಇಲ್ಲ. ಕಾಲೇಜಿನಲ್ಲಿರತಕ್ಕ ಒಬ್ಬ ಪ್ರಿನ್ಸಿಪಾಲರನ್ನು ತೆಗೆದುಹಾಕಿದ್ದೀರಿ. ಮಾಡಿದ ತಪ್ಪನ್ನು ಸಾಧಿಸುವುದಕ್ಕೆ ಸರ್ಕಾರ ಹೊರಟಿದೆ. ಆ ವಿಷಯ ಇವತ್ತು ಹೈಕೋರ್ಟಿನಲ್ಲಿದ್ದು ಅವರು ಮಾಡಿರತಕ್ಕದ್ದು ತಪ್ಪು ಎಂದು ಸ್ಟೇ ಮಾಡಿದ್ದಾರೆ. ಇವತ್ತಿನ ದಿವಸ ನ್ಯಾಯವಾದ ಹಕ್ಕು ಯಾವುದಿದೆ ಅದನ್ನು ಉಳಿಸಿಕೊಳ್ಳಬೇಕಾದರೆ ಕಾಲೇಜಿನ ಅಧ್ಯಾಪಕರು ಹೈಕೋರ್ಟಿಗೆ ಹೋಗಬೇಕಾಗಿದೆ. ಕಾಲೇಜಿನ ದಿನಚರಿಯ ಕಾರ್ಯಕ್ರಮಗಳಲ್ಲಿ ಒಂದು ನೆಮ್ಮದಿಯ ಪರಿಸ್ಥಿತಿ ಇಲ್ಲ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅವರು ಉತ್ತರ ಹೇಳುವಾಗ ಬಹಳ ದೀರ್ಘವಾಗಿ ಇಲ್ಲದ ಸಲ್ಲದ ವಿಚಾರಗಳನ್ನೆಲ್ಲಾ ಸೇರಿಸಿ ಫೀಜು ಏರಿಕೆ ವಿಷಯ ಹೇಳುತ್ತಾರೆ. ಅವರು ಈಗಾಗಲೇ ದೇಶದ ಮುಂದೆ ಇಟ್ಟಿರುವ ಉತ್ತರ ನ್ಯಾಯಬದ್ಧವಾಗಿದೆಯೇ ಎಂದರೆ ಖಂಡಿತವಾಗಿಯೂ ಅದು ನ್ಯಾಯಕ್ಕೆ ಬಹಳ ದೂರವಾಗಿದೆ, ಏಕೆಂದರೆ ಇವತ್ತು ಹಳೇ ಮೈಸೂರು ದೇಶದಲ್ಲಿರತಕ್ಕ ವಿದ್ಯಾರ್ಥಿಗಳು ನಿಮ್ಮನ್ನು ಕೇಳುತ್ತಾ ಇರುವುದು ನಮಗೆ ಇಲ್ಲಿನವರೆಗೂ ಇದ್ದ ಫೀಜಿನ ದರ ಏಕ್‌ದಂ ಏಕಾಏಕೀ ಜಾಸ್ತಿ ಮಾಡಿದ್ದು ಏಕೆ ಎಂದು ಕೇಳಿದರೇ ಹೊರತು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಏನಿದೆ; ಮರ್ಕೆರಾ ಕಾಲೇಜಿನಲ್ಲಿ ಏನಿದೆ, ಮಂಗಳೂರಿನಲ್ಲಿ ಎಷ್ಟಿದೆ ಎಂದು ಅಲ್ಲ. ಮರ್ಕೆರಾ ಕಾಲೇಜಿನಲ್ಲಿ 25 ರೂಪಾಯಿ ಇದೆ, ಕರ್ನಾಟಕ ಕಾಲೇಜಿನಲ್ಲಿ 26 ರೂಪಾಯಿ. ಆದ್ದರಿಂದ ನಿಮಗೂ ಕೂಡ ಅಷ್ಟೇ ಮಾಡಿದ್ದೇವೆ ಎಂದು ಹೇಳುವುದು ಎಂಥಾ ವಾದ? ಇದು ವಾದವೇ? ಇಂಥಾ ಅಸಂಬಂಧವಾದ ವಾದವನ್ನು ದೇಶದ ಮುಂದೆ ಇಟ್ಟಿದ್ದೀರಿ. ಹೀಗೆ ದೇಶದಲ್ಲಿ ಈ ರೀತಿ ಒಂದು ವಾತಾವರಣವನ್ನು ಹುಟ್ಟಿಸಿರುವುದು ವಿದ್ಯಾರ್ಥಿಗಳಿಗೂ ಅಧ್ಯಾಪಕರುಗಳಿಗೂ ಒಂದು ನೆಮ್ಮದಿಯನ್ನುಂಟುಮಾಡತಕ್ಕ ವಾತಾವರಣ ಎಂದು ಹೇಳಲು ಸಾಧ್ಯವಿಲ್ಲದಂತಾಗಿದೆ. ಈ ಒಂದು ನೆಮ್ಮದಿಯ ವಾತಾವರಣ ಕಲ್ಪನೆ ಮಾಡಲು ಶಕ್ತಿ ಇಲ್ಲದೇ ಇರತಕ್ಕ ವಿದ್ಯಾಮಂತ್ರಿಗಳು ದಯವಿಟ್ಟು ಕೂಡಲೇ ರಾಜೀನಾಮೆ ಕೊಡಬೇಕು. ಮಂತ್ರಿಗಳಾಗಿರತಕ್ಕ ಹಕ್ಕು ಅವರಿಗೆ ಇಲ್ಲ ಎಂದು ಹೇಳಬೇಕಾಗಿದೆ.

ಮೂರನೇ ವಿಷಯ Nomination to the Legislative Council. ಸಭಾಪತಿಯವರೇ ವಿಧಾನ ಪರಿಷತ್ತಿಗೆ ರಾಜ್ಯಾಂಗದ ಪ್ರಕಾರ ಸರ್ಕಾರದವರ ಶಿಫಾರಸಿನ ಮೇಲೆ ರಾಜ್ಯಪಾಲರು ನಾಮಕರಣ ಮಾಡುತ್ತಾರೆ. ನಾಮಕರಣ ಮಾಡತಕ್ಕ ಮುಖ್ಯ ಉದ್ದೇಶ ಸಾಹಿತ್ಯದಲ್ಲಿ, ಕಲೆಯಲ್ಲಿ ನಿಪುಣರಾಗಿರತಕ್ಕವರು ಮತ್ತು ವಿಶೇಷ ಜಾಣ್ಮೆಯನ್ನು ಹೊಂದಿರತಕ್ಕವರು ಯಾರಿದ್ದಾರೆ ಅವರ ಸೇವೆ ದೇಶಕ್ಕೆ ದೊರಕಲಿ ಎಂಬ ಕಾರಣದಿಂದ ರಾಜ್ಯಾಂಗದಲ್ಲಿ ಅಳವಡಿಸಿರುವ ಒಂದು ವಿಶೇಷ ಕಲಂಪ್ರಕಾರ ನಾಮಕರಣ ಮಾಡತಕ್ಕ ಹಕ್ಕನ್ನು ಗವರ್ನರ್ ಅವರಿಗೆ ಕೊಟ್ಟಿದೆ. ಅವರು ಸರ್ಕಾರದ ಸಲಹೆಯ ಮೇಲೆ ಮಾಡುತ್ತಾರೆ. ಮೈಸೂರು ದೇಶದ ವಿಧಾನಪರಿಷತ್ತಿಗೆ ಮೊನ್ನೆ ನಡೆದ ನಾಮಕರಣದ ಪ್ರಕಾರ ಮೂರು ಜನರನ್ನು ನಾಮಕರಣ ಮಾಡಿದ್ದಾರೆ. ಈ ಮೂರು ಜನರ, ವೈಯಕ್ತಿಕವಾಗಿ. ಅವರ ಚರಿತ್ರೆಗೆ ನಾನು ಹೋಗುವುದಿಲ್ಲ. ಆ ಮೂರು ಜನರ ಬಗ್ಗೆ ವೈಯಕ್ತಿಕವಾಗಿ ಅಪಾರವಾದ ಗೌರವ ಸರ್ಕಾರಕ್ಕೆ ಎಷ್ಟಿವೆಯೋ ಅದಕ್ಕಿಂತ ಹೆಚ್ಚಾಗಿ ನನಗಿದೆ; ಇಂದು ಸಭೆಯ ಮುಂದಿರುವುದು ಆ ಮೂರು ಜನ ವ್ಯಕ್ತಿಗಳನ್ನು ಆರಿಸಿರತಕ್ಕ ನೀತಿ ಏನಿದೆ ಅದನ್ನು ಸಭೆಯ ಮುಂದೆ ಇಡುತ್ತಾ ಇದ್ದೇನೆ.

ಈ ಮೂರು ಜನರೂ ಕೂಡ ಕೇವಲ ಕಾಂಗ್ರೆಸ್ ಪಕ್ಷದ ಹಿತವನ್ನು ಮುಂದುವರಿಸುವವರು. ಆದುದರಿಂದ ಅಥವರನ್ನೇ ಚುನಾಯಿಸಿದ್ದಾರೆ. ಅವರಲ್ಲಿ ಒಬ್ಬರು ಮೈಸೂರು ಕಾಂಗ್ರೆಸ್ಸಿನ ಚುನಾವಣೆ ಕಾರ್ಯದರ್ಶಿಯಾಗಿದ್ದರು. ಅಂಥವರನ್ನು ನಾಮಕರಣ ಮಾಡಿದ್ದಾರೆ. ಮತ್ತೊಬ್ಬರು ಮೊನ್ನೆ ಮೊನ್ನೆಯವರೆಗೆ ಕಾಂಗ್ರೆಸ್ಸಿಗೆ ವಿರೋಧವಾಗಿದ್ದು 3-4 ತಿಂಗಳು ಹಿಂದೆ ಕಾಂಗ್ರೆಸ್ ಸದಸ್ಯರಾದುದರಿಂದ ಅವರಿಗೆ ಬಹುಮಾನ ಕೊಟ್ಟು ಅವರನ್ನು ಶಾಸನ ಸಭೆಗೆ ನಾಮಕರಣ ಮಾಡಿದರು. ಮೂರನೆಯವರು ಈ ವಿಧಾನ ಸಭೆಗೆ ಸಾರ್ವತ್ರಿಕ ಚುನಾವಣೆಯಲ್ಲಿ ನಿಂತು ಗೆದ್ದವರು. ಅವರು ರಾಜೀನಾಮೆ ಕೊಟ್ಟು ಈ ದೇಶದ ಮುಖ್ಯ ಮಂತ್ರಿಗಳು ಈ ಸಭೆ ಬರಲು ಅವಕಾಶ ಕೊಟ್ಟಿದ್ದರು. ಯಾರು ವಿಧಾನ ಸಭೆಗೆ ಸಾರ್ವಜನಿಕ ಬೆಂಬಲದಿಂದ ಬಂದಿದ್ದರೋ ಅವರನ್ನು ಕೆಳಕ್ಕೆ ಇಳಿಸಿದ್ದಾರೆ. ಅವರನ್ನು ನಾಮಕರಣದಿಂದ ಹಿತ್ತಿಲ

(ಶ್ರೀ ಎಸ್. ಶಿವಪ್ಪ)

ಬಾಗಿಲಿನಿಂದ ವಿಧಾನ ಪರಿಷತ್ತಿಗೆ ಸದಸ್ಯರನ್ನಾಗಿ ಮಾಡಿ ಕಳುಹಿಸಿರುವುದು ರಾಜ್ಯಾಂಗಕ್ಕೆ ಅಪಮಾನ ವಲ್ಲವೆ ಎಂದು ಸರ್ಕಾರವನ್ನು ಈ ದಿವಸ ಕೇಳುತ್ತಿದ್ದೇನೆ. ಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದುವುಗಳಿಗೆ ಪ್ರೋತ್ಸಾಹ ಕೊಡಲು ನಿಮಗೆ ಮನಸ್ಸು ಬಾರದೆ ನಿಮ್ಮ ಬೆಂಬಲಿಗರನ್ನು ವಿಧಾನ ಪರಿಷತ್ತಿಗೆ ನಾಮಕರಣ ಮಾಡುವ ಧೋರಣೆ ತಾಳಿರುವುದು ರಾಜ್ಯಾಂಗಕ್ಕೆ ಮರ್ಯಾದೆ ತರುವುದೇ ಎಂದು ನ್ಯಾಯ ಖಾತೆಯ ಸಚಿವರಾದ ರಾಮರಾಯರನ್ನು ಕೇಳುತ್ತೇನೆ. ಅವರು ಆಳವಾಗಿ ಯೋಚಿಸಿ ಇದಕ್ಕೆ ಉತ್ತರವನ್ನು ನಿರ್ವಿವಾದವಾಗಿ ಹೇಳಬೇಕಾಗಿದೆ.

ಶ್ರೀ ಎಂ. ವಿ. ರಾಮರಾವ್ (ನ್ಯಾಯಾಂಗ ಶಾಖೆಯ ಮಂತ್ರಿಗಳು).—ಈ ವಿಚಾರ ಹಿಂದೆ ಪ್ರಸ್ತಾಪಿಸಲ್ಪಟ್ಟಾಗಲೇ ಜವಾಬು ಹೇಳಿದ್ದೇನೆ.

ಶ್ರೀ ಎಸ್. ಶಿವಪ್ಪ.—ಈ ದಿವಸ ನಿಮ್ಮ ಕೃತಿಯನ್ನು ನೋಡಿ ಜನರು ಒಂದು ನಿರ್ಧಾರಕ್ಕೆ ಬರುತ್ತಾರೆ. ನಿಮ್ಮ ಪಕ್ಷದವರನ್ನು, ಪಾರ್ಟಿ ಸದಸ್ಯರನ್ನು ನಾಮಕರಣ ಮಾಡಿ ರಾಜ್ಯಾಂಗಕ್ಕೆ ಬೆಲೆ ಕೊಡದಿರುವುದು ಸೂಕ್ತವೇ?

ಶ್ರೀ ಎಂ. ವಿ. ರಾಮರಾವ್.—ವಿರೋಧ ಪಕ್ಷದ ನಾಯಕರನ್ನು ಕೇಳಿ ಸರ್ಕಾರ ಯಾವಾಗಲೂ ನಾಮಕರಣ ಮಾಡುವುದಿಲ್ಲ.

ಶ್ರೀ ಎಸ್. ಶಿವಪ್ಪ.—ದೇಶ ಎಚ್ಚೆತ್ತಿದೆ. ಮುಂದಿನ ಭವಿಷ್ಯವನ್ನು ನಿರ್ಧರಿಸುವ ಕಾಲ ದೂರವಿಲ್ಲ. ವಿಧಾನ ಪರಿಷತ್ತಿನ ನಾಮಕರಣ ನಮ್ಮ ದೇಶದ ಕಲೆ ಮತ್ತು ಸಾಹಿತ್ಯಕ್ಕೆ ಅವಮಾನವನ್ನುಂಟು ಮಾಡಿದೆ. ಕಲೆಗಾರರು, ದೇಶದಲ್ಲಿದ್ದಾರೆ. ಮೈಸೂರಿನಲ್ಲಿ ಕಲೆಗೆ ಲೋಪವಿಲ್ಲ, ಸಾಹಿತ್ಯಕ್ಕೆ ಲೋಪವಿಲ್ಲ, ಅಮೋಘವಾದ ಸಾಹಿತಿಗಳಿದ್ದಾರೆ, ಒಳ್ಳೆಯ ಕಲೆಗಾರರಿದ್ದಾರೆ. ಅವರಿಗೆ ಅವಮಾನ ಮಾಡಿ ಸರ್ಕಾರ ತನ್ನ ಹಿಂಬಾಲಕರಿಗೆ ಸ್ಥಾನಗಳನ್ನು ಕೊಟ್ಟಿರುವುದಕ್ಕಿಂತ ದ್ರೋಹ ಬೇರೆ ಇಲ್ಲ. ಆ ಮಂತ್ರಿ ಮಂಡಲ ಇಂಥ ತಪ್ಪು ಮಾಡಿ ಅಧಿಕಾರದಲ್ಲಿರಲು ಯೋಗ್ಯವಲ್ಲ, ಕೆಳಗೆ ಇಳಿಯಬೇಕು ಎಂದು ಹೇಳುವುದಕ್ಕೆ ಇದು ಮೂರನೆಯ ಕಾರಣ.

ಭೂಸುಧಾರಣೆಯನ್ನು ಇದರ ಹಿಂದಿನ ಸಭೆ ಒಪ್ಪಿ ಶಾಸನವನ್ನು ಅಂಗೀಕರಿಸಿ ಆ ಮೂಲಕ ಅಧಿಕಾರ ಕೊಟ್ಟಿದೆ. ಹಾಗಿರುವಾಗ ಈ ಸರ್ಕಾರ ಭೂಸುಧಾರಣೆ ಜಾರಿಗೆ ತರಲು ಹಿಂದು ಮುಂದೆ ನೋಡುತ್ತಿರುವುದನ್ನು ನೋಡಿದರೆ ಇದಕ್ಕೆ ಎದೆಗಾರಿಕೆಯಿಲ್ಲ ಎಂದು ಹೇಳಬೇಕಾಗಿದೆ.

ಐದನೆಯದಾಗಿ ಬೆಲೆಗಳ ಏರಿಕೆಯಿಂದ ದೇಶದಲ್ಲಿ ಎಷ್ಟು ದುಷ್ಪರಿಣಾಮವಾಗಿದೆ ಎಂಬುದನ್ನು ಅನೇಕ ಬಾರಿ ವಿವರಿಸಿದ್ದೇನೆ. ಅದನ್ನು ನಮ್ಮ ಮಿತ್ರರು ವಿಶದೀಕರಿಸಿ ಹೇಳುತ್ತಾರೆ. ನಿಜಲಿಂಗಪ್ಪನವರ ಮಂತ್ರಿ ಮಂಡಲ ಅಧಿಕಾರ ವಹಿಸಿ ಕೆಲವು ತಿಂಗಳುಗಳಾಗಿವೆ. ಈ ದೇಶದಲ್ಲಿ ಮುಖ್ಯ ಮಂತ್ರಿಯಾಗಿ ನಿಜಲಿಂಗಪ್ಪನವರು ನಾಯಕತ್ವ ವಹಿಸಿಕೊಂಡ ಮೇಲೆ ಈ ದೇಶದಲ್ಲಿ ಆಗಿರುವ ಅನಾಹುತಗಳನ್ನು ಈ ಸಭೆಯಲ್ಲಿ ಚರ್ಚೆಯ ಮುಖಾಂತರ ತಿಳಿಸಿದ್ದೇವೆ. ಅವನ್ನು ತಪ್ಪಿಸುವುದಕ್ಕೆ ಮೊದಲನೆಯ ಅಂಗವಾಗಿ ವಿಚಾರಣಾ ಸಮಿತಿಯನ್ನು ಬಹಿರಂಗವಾಗಿ ಏರ್ಪಾಡು ಮಾಡಬೇಕೆಂದು ಹೇಳಿದ್ದೇವೆ, ಹಾಗೆ ಮಾಡುತ್ತೀರೆಂದು ನಂಬಿದ್ದೆ. ಆದರೆ ಇದುವರೆಗೂ ಬಹಿರಂಗ ವಿಚಾರಣೆ ಮಾಡಲಿಲ್ಲ. ಶರಾವತಿ ವಿಚಾರವನ್ನು ನಾನಾಗಲೇ ಸುದೀರ್ಘವಾಗಿ ಹೇಳಿದ್ದೇನೆ. ಈ ವಿಚಾರದ ಬಗ್ಗೆ ಹಿಂದೆ ಈ ಸರ್ಕಾರದಲ್ಲಿ ಸಚಿವರಾಗಿದ್ದ ಚನ್ನಬಸಪ್ಪನವರು ಈ ದಿವಸ ಒಂದು ಹೇಳಿಕೆ ಕೊಟ್ಟಿದ್ದಾರೆ. ಶರಾವತಿ ವಿಚಾರದಲ್ಲಿ ಆರ್ಬಿಟ್ರೇಷನ್ ಎಂಬುದು ಬಹಳ ಅಪಾಯಕಾರಿ ಸಂಸ್ಥೆ. ಹಿಂದಿನ ಸರ್ಕಾರ ಈ ಸಮಿತಿ ಮಾಡಿದ್ದನ್ನು ಒಪ್ಪಲಿಲ್ಲ. ಈ ಬಗ್ಗೆ ನ್ಯಾಯಾಂಗ ಖಾತೆ ಒಪ್ಪಿಗೆ ಕೊಟ್ಟಿಲ್ಲ. ಚನ್ನಬಸಪ್ಪನವರು ಶರಾವತಿ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರು ಬಹಿರಂಗವಾಗಿ ಹೇಳಿಕೆ ಕೊಟ್ಟಿರುವಾಗ ಈಗಿನ ಮಂತ್ರಿ ಮಂಡಲ ಹೇಗೆ ಈ ವಿಚಾರಕ್ಕೆ ಒಪ್ಪಿಗೆ ಕೊಟ್ಟಿತು? ಇದಕ್ಕೆ ಜವಾಬ್ದಾರರು ಯಾರು? 60 ಲಕ್ಷ ರೂಪಾಯಿಗಳನ್ನು ಕೊಡಲು ನ್ಯಾಯ ಖಾತೆಯಿಂದ ಒಪ್ಪಿಗೆ ಪಡೆದರೇ? ನನಗೆ ತಿಳಿದ ಹಾಗೆ ಒಪ್ಪಿಗೆ ಪಡೆದ ದಿವಸ ನ್ಯಾಯಾಂಗ ಖಾತೆಯ ಪ್ರಧಾನ ಕಾರ್ಯದರ್ಶಿಗಳಿರಲಿಲ್ಲ, ಉಪ ಕಾರ್ಯದರ್ಶಿಗಳಿಂದ ರುಜು ಹಾಕಿಸಿಕೊಂಡು ಮಂಜೂರು ಮಾಡಿದ್ದಾರೆ. ಇದು ನಿಜವಾದರೆ ಇದು ಘೋರವಾದ ಅಪರಾಧ. ಇದಕ್ಕೆ ಕಾರಣರಾದವರು ಶಿಕ್ಷಾರ್ಹರು. ಆದುದರಿಂದ ಈ ಮಂತ್ರಿ ಮಂಡಲ ಕೆಳಗಿಳಿಯಲೇಬೇಕು ಎಂದು ಹೇಳಿ ಈ ಅವಿಶ್ವಾಸ ನಿರ್ಣಯವನ್ನು ಸಭೆಯ ಮುಂದಿಡುತ್ತೇವೆ.

†ಶ್ರೀ ಅಣ್ಣಾರಾವ್ ಗಣಮುಖಿ [ಅಫ್ಜಲ್‌ಪುರ].—ಮಾನ್ಯ ಅಧ್ಯಕ್ಷರೇ, ಇದೀಗ ಮಾತನಾಡಿದ ವಿರೋಧ ಪಕ್ಷದ ಮುಖಂಡರು ಕೆಲವು ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಾನು ಶಿಕ್ಷಣ ಖಾತೆಯ ವಿಚಾರದಲ್ಲಿ ಅವರು ಹೇಳಿದುದನ್ನು ಬಹಳ ಮನಸ್ಸಿಟ್ಟು ಕೇಳಿದೆ. ಅವರು ಒಂದು ಸಣ್ಣ ವಿಷಯವನ್ನು ದೊಡ್ಡದು ಮಾಡಿ ತೋರಿಸಿದ್ದಾರೆಂದು ಕಾಣುತ್ತದೆ. ಹಾಗೆ ಮಾಡಿದರೆ ಹೇಗೆ ಒಪ್ಪುವುದು? ವಿದ್ಯಾ ಮಂತ್ರಿಗಳು ಫೀಜನ್ನು ಏರಿಸಿದರೆಂದು ಹೇಳಿದರು. ಆದರೆ ಆ ಪ್ರಶ್ನೆ ಮೊದಲಿನಿಂದ ಸರ್ಕಾರದ ಗಮನದಲ್ಲಿತ್ತು, ಈ ಸರ್ಕಾರ ಪರಿಶೀಲಿಸಿ ಫೀಜನ್ನು ಏರಿಸಿತು. ಯೂನಿವರ್ಸಿಟಿಯ ವಿದ್ಯಾಭ್ಯಾಸಕ್ಕೆ ಮಂಗಳೂರು, ಹೈದರಾಬಾದ್ ಮುಂತಾದ ಪ್ರದೇಶಗಳಲ್ಲಿ ಹೆಚ್ಚು ಫೀಜಿದೆ. ಆದುದರಿಂದ ಒಂದೇ ರೀತಿ ಇರುವಂತೆ ಮಾಡಲು ಇಲ್ಲೂ ಹೆಚ್ಚಿಸಿದರು. ಈಗ ಎಷ್ಟೋ ಮಸೂದೆಗಳು ಬರುತ್ತಿವೆ. ತೆರಿಗೆ ಒಂದು ಕಡೆ ಕಡಮೆ ಎರಡನೆಯ ಕಡೆ ಹೆಚ್ಚು ಇರುವಾಗ ಒಂದೇ ಇರುವಂತೆ ಮಾಡುತ್ತಿದ್ದಾರೆ. ಹಾಗೆ ಫೀಸನ್ನು ಏರಿಸಿದರೆ ಅದು ದೊಡ್ಡ ಅಪಾದನೆ ಎಂದು ತೋರಿಸುವುದು ಅರ್ಥವಾಗುವುದಿಲ್ಲ. ಫೀಜನ್ನು ಹೆಚ್ಚಿಸಿದರೂ ಕೂಡ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. 3,600 ರೂಪಾಯಿಗಳೊಳಗೆ ಉತ್ಪತ್ತಿ ಇರುವವರ ಮಕ್ಕಳಿಗೆ ಶೇಕಡ ಅರ್ಧದಷ್ಟು ರಿಯಾಯಿತಿ ಕೊಡುವಂತೆ ಗೊತ್ತುಮಾಡಿದ್ದಾರೆ.

Sri K. H. RANGANATH (Mudigere).—The very member also said on the floor of the House that he was opposed to the enhancement of fee. What is the reason now, so early, for him to revise his opinion to-day?

ಶ್ರೀ ಅಣ್ಣಾರಾವ್ ಗಣಮುಖಿ.—ಈಗ ಇದರ ಬಗ್ಗೆ ಹೇಳುತ್ತಿದ್ದೇನೆ; ಇದನ್ನು ಇನ್ನೂ ಸ್ಪಷ್ಟೀಕರಣ ಮಾಡುವುದು ನನ್ನ ಕರ್ತವ್ಯ. ಅವರಿಗೆ ಆಗಲೇ ಒಂದು ವಿಷಯವನ್ನು ವಿಜ್ಞಾಪನೆ ಮಾಡಿದ್ದೇನೆ. ಹೈದರಾಬಾದು ಕರ್ಣಾಟಕದಲ್ಲಿ ಗುಲ್ಬರ್ಗ ಮತ್ತು ರಾಯಚೂರಿನಲ್ಲಿ ಕರ್ಣಾಟಕ ವಿಶ್ವವಿದ್ಯಾನಿಲಯ

ದವರು ಕಾಲೇಜು ಫಿ ಹೆಚ್ಚು ಮಾಡಿದರು. ನಾನು ವಿದ್ಯಾಮಂತ್ರಿಯಾಗಿದ್ದಾಗ ಫೀಜು ಹೆಚ್ಚಾಗ ಬಾರದು ಎಂದೇನೂ ಹೇಳಲಿಲ್ಲ. ಆದರೆ ಒಂದು ರಿಯಾಯಿತಿ ಕೊಟ್ಟೆವು. ಅದೇನೆಂದರೆ, ನಾಲ್ಕೈದು ವರ್ಷಗಳಲ್ಲಿ ವರ್ಷ ವರ್ಷವೂ ಸ್ವಲ್ಪ ಸ್ವಲ್ಪ ಹೆಚ್ಚಿಸುತ್ತಾ ಬರಬೇಕೆಂದು ಹೇಳಿದ ಶಿಕ್ಷಣ ಮಂತ್ರಿಯಾಗಿ ನನ್ನ ಭಾಷಣದಲ್ಲಿ ಕೂಡ ಹಾಗೆಯೇ ಹೇಳಿದ್ದೇನೆ. ಆ ಸೂಚನೆಯನ್ನು ಈಗ ಒಪ್ಪಿಕೊಂಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ; ಆದರೆ 3,600 ರೂಪಾಯಿ ವಾರ್ಷಿಕ ವರಮಾನಕ್ಕಿಂತ ಕಡಮೆ ವರಮಾನವಿರುವವರಿಗೆ ರಿಯಾಯಿತಿ ಕೊಟ್ಟಿದ್ದಾರೆ. ಹೀಗಿರುವಾಗ ಈ ಪ್ರದೇಶದಲ್ಲಿ ಕಡಮೆಯಿದ್ದ ಫಿಯನ್ನು ಸ್ವಲ್ಪ ಏರಿಸಿದ್ದಾರೆಂದರೆ, ಇದೇನು ದೊಡ್ಡಮಾತು ? ಬೇರೆಕಡೆ ಕಡಮೆಯಿದ್ದು ಇಲ್ಲಿ ಹೆಚ್ಚಿಸಿದಿದ್ದರೆ ಅದು ತಪ್ಪಾಗುತ್ತಿತ್ತು. ಮಂಗಳೂರು, ಕೊಡಗು ಈ ಪ್ರದೇಶಗಳಲ್ಲಿರುವ ಮಟ್ಟಕ್ಕೆ ಈಗ ಹಳೇ ಮೈಸೂರನ್ನು ತಂದಿದ್ದರೆ, ಇದರ ಬಗ್ಗೆ ಯಾರು ಅಷ್ಟಾಗಿ ಅಪಾದನೆ ಮಾಡಬಾರದು. ಎಲ್ಲಿ ನಿಜವಾಗಿ ವಿದ್ಯಾರ್ಥಿಗಳು ಬಡವರಾಗಿದ್ದಾರೋ ಅಲ್ಲಿ ಅವರಿಗೆ ಹೆಚ್ಚು ರಿಯಾಯಿತಿ ಕೊಡಬೇಕು. ಯಾರಿಗೆ ಈ ಫೀ ಕೊಡಲು ಶಕ್ತಿಯಿದೆಯೋ ಅವರು ಕೊಡಲೆಂದು ಹೇಳಿದರೆ, ಅದು ಉತ್ತಮವಾದ ನಿಲುವು. ಇದನ್ನು ಸರಿಯಾಗಿ ವಿಚಾರ ಮಾಡದೆ ಸುಮ್ಮನೆ ಫೀಜು ಹೆಚ್ಚಿಸಿದರು ಎಂದು ಆಪಾದನೆ ಮಾಡುವುದು ಚೆನ್ನಾಗಿಲ್ಲ.

ವಿದ್ಯಾಮಂತ್ರಿಗಳು ಎಲ್ಲಿ ಹೋದರೂ ಪರಸ್ಪರ ವಿರುದ್ಧವಾದ ಹೇಳಿಕೆಗಳನ್ನು ಕೊಡುತ್ತಾರೆಂದೂ ಪ್ರೈಮರಿ ಸ್ಕೂಲಿಗೆ ಹೋಗಿ ಭಾಷಣ ಮಾಡಿದರೆ ಕಾಲೇಜಿನ ವಿಚಾರವನ್ನೂ ಕಾಲೇಜಿನಲ್ಲಿ ಹೋಗಿ ಪ್ರೈಮರಿ ಸ್ಕೂಲುಗಳ ವಿಚಾರವನ್ನೂ ಮಾತನಾಡುತ್ತಾರೆಂದು ಹೇಳಿದರು. ವಿದ್ಯಾಭ್ಯಾಸಕ್ರಮ, ಅದು ಪ್ರಾಥಮಿಕ ವಿದ್ಯಾಭ್ಯಾಸವಿರಲಿ, ಕಾಲೇಜು ವಿದ್ಯಾಭ್ಯಾಸವಿರಲಿ, ಎಲ್ಲಿಹೋದರೂ ಒಂದೇ. ಅದು ಶಿಕ್ಷಣಕ್ಕೆ ಸಂಬಂಧಪಟ್ಟದ್ದು. ಇದರಲ್ಲಿ ಒಂದೇ ವಿಷಯ ಮಾತನಾಡಬೇಕೆಂದೇನೂ ಇಲ್ಲ. ಶಿಕ್ಷಣ ನೀತಿಯ ವಿಚಾರ ಮಾತನಾಡುತ್ತಾರೆ. ಅದನ್ನು ಅರ್ಥಮಾಡಿಕೊಳ್ಳುವ ಜನ ಎಷ್ಟಿದ್ದಾರೆಂಬುದು ಬೇರೆ ವಿಷಯ. Policy statement ಕೊಡಬಹುದು. ಇದೇ ವಿಷಯ ಮಾತನಾಡಬೇಕೆಂಬ ನಿರ್ಬಂಧವೇನೂ ಇಲ್ಲ. ವಿದ್ಯಾಭ್ಯಾಸವೆಂದರೆ, ಪ್ರೈಮರಿಯಿಂದ ಪ್ರಾರಂಭವಾಗಿ ಕಾಲೇಜಿನವರೆವಿಗೂ ಹೋಗುತ್ತದೆ. ಆದುದರಿಂದ ಕಾಲೇಜಿಗೆ ಹೋದಾಗ ಕಾಲೇಜಿನ ವಿಚಾರ ಮಾತ್ರ ಮಾತನಾಡಬೇಕು. ಪ್ರೈಮರಿ ಶಿಕ್ಷಣದ ವಿಚಾರ ಮಾತನಾಡಬಾರದೆಂದು ಹೇಳುವುದು ಸರಿಯಲ್ಲ.

ಲೆಕ್ಚರರುಗಳ ಬಗ್ಗೆ ಮಾತನಾಡುತ್ತಾ, ಪ್ರೋಛಾನ್ಸೆಲರ್ ಅವರು ಏಕೆ? ಡೆಮಾನ್ಸ್ಟ್ರೇಟರು ಮತ್ತು ಟ್ಯೂಟರುಗಳ ಹುದ್ದೆಗಳನ್ನು ಹೊಸದಾಗಿ ಮಾಡಬಾರದೆಂದು ಹೇಳಿದ್ದಾರೆ. ಬೇರೆ ಕಡೆ ಎಲ್ಲಿಯಾದರೂ ಇರುವ ಪದ್ಧತಿ ಚೆನ್ನಾಗಿದ್ದರೆ ಅದನ್ನು ನಾವು ತೆಗೆದುಕೊಳ್ಳಬಹುದು. ಹಿಂದೆ ಮೈಸೂರಿನಲ್ಲಿಯೂ ಟ್ಯೂಟರ್‌ಗಳ ಮತ್ತು ಡೆಮಾನ್ಸ್ಟ್ರೇಟರುಗಳ ಹುದ್ದೆಗಳಿದ್ದುವೆಂದು ಕೇಳಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯದ ಖ್ಯಾತಿ ಹೆಚ್ಚಿತ್ತು. ಎಲ್ಲೇ ಆದರೂ ವಿಜ್ಞಾನದ ಶಾಖೆಗೆ ಡೆಮಾನ್ಸ್ಟ್ರೇಟರೂಗಳೂ ಇತರ ಆರ್ಟ್ಸ್ ಅಥವಾ humanity ಕೋರ್ಸ್‌ಗಳಿಗೆ ಟ್ಯೂಟರುಗಳೂ ಇರಬೇಕಾಗುತ್ತದೆ. ಯಾವುದೇ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿದರೆ ಅದನ್ನು ವಿರೋಧ ಮಾಡಬಾರದು. ಈಗಿರತಕ್ಕ ಲೆಕ್ಚರರುಗಳನ್ನು ಕೆಳಗಿಳಿಸಬಾರದಾಗಿತ್ತು ಎಂದು ಹೇಳಿದ್ದರೆ ಸ್ವಲ್ಪ ನಮ್ಮ ತಿಳಿವಳಿಕೆಗೆ ಬರುತ್ತಿತ್ತು; ಆದರೆ ಡೆಮಾನ್ಸ್ಟ್ರೇಟರುಗಳು ಮತ್ತು ಟ್ಯೂಟರುಗಳು ಎನ್ನುವ ಹುದ್ದೆಗಳೇ ಬೇಡ, ಬರೇ ಲೆಕ್ಚರರುಗಳೇ ಇರಬೇಕೆಂದು ಹೇಳುವವಾದ ಶಿಕ್ಷಣದ ವಿಚಾರದಲ್ಲಿ ಬರಬಾರದು.

ಶ್ರೀ ಕೆ. ಎಚ್. ರಂಗನಾಥ್.—ಲೆಕ್ಚರರುಗಳ ವೇಕೆನ್ಸಿಗಳಲ್ಲಿ ನೇಮಕ ಮಾಡಿದ್ದೇವೆಂದು ಮೊದಲು ಹೇಳಿದರು, ಆಮೇಲೆ ಲೆಕ್ಚರರುಗಳ ಸ್ಥಾನಗಳಿರಲಿಲ್ಲವಾದ್ದರಿಂದ ಡೆಮಾನ್ಸ್ಟ್ರೇಟರುಗಳು ಮತ್ತು ಟ್ಯೂಟರುಗಳನ್ನಾಗಿ ನೇಮಕ ಮಾಡಿದ್ದೇವೆಂದು ಹೇಳಿದರು; ಈಗ ಹೀಗೆ ಹೇಳಿದರೆ ಹೇಗೆ? ಈ ರೀತಿ ಮಾತನಾಡುವುದು ನ್ಯಾಯವಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಅದಕ್ಕೇ ಉತ್ತರ ಕೊಡುತ್ತಿದ್ದೇನೆ. ಮುಂದೆ ಏನು ಮಾತನಾಡಬಹುದು; ನನಗೆ ಗೊತ್ತಿಲ್ಲ. ಅವರು ಮೊಲ್ಮನೆಯಲ್ಲಿ ಏನು ಹೇಳಿದ್ದಾರೆಂಬುದು ನನಗೆ ಗೊತ್ತಿಲ್ಲ. ಅಕಾಡೆಮಿಕ್ ಕೌನ್ಸಿಲ್‌ನವರು ಡೆಮಾನ್ಸ್ಟ್ರೇಟರುಗಳು ಮತ್ತು ಟ್ಯೂಟರುಗಳನ್ನು ನೇಮಕ ಮಾಡಬಾರದೆಂದು ಹೇಳಿದುದು ನನಗೆ ಅರ್ಥವಾಗಿಲ್ಲ.

Sri S. SIVAPPA.—May I know who is the authority to fix academic qualifications of the lecturers and various teachers under the University? Is it the Academic Council or the Ministers ?

ಶ್ರೀ ಅಣ್ಣಾರಾವ್ ಗಣಮುಖಿ.—ತಮಗೆ ಅದನ್ನು ಸ್ಪಷ್ಟೀಕರಣ ಮಾಡಬೇಕೆಂದಿದ್ದೇನೆ. ಡೆಮಾನ್ಸ್ಟ್ರೇಟರುಗಳು ಮತ್ತು ಟ್ಯೂಟರುಗಳ ಪೋಸ್ಟ್‌ಗಳನ್ನು create ಮಾಡುವಹಾಗಿಲ್ಲ. Create ಮಾಡಿದರೆ qualification ಏನಿರಬೇಕೆಂದು ಅವರೇ ಹಾಕುತ್ತಾರೆ......

Sri S. SIVAPPA.—Has the Academic Council approved of the various qualifications of tutors and demonstrators ?

ಶ್ರೀ ಅಣ್ಣಾರಾವ್ ಗಣಮುಖಿ.—ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಟ್ಯೂಟರುಗಳು ಮತ್ತು ಡೆಮಾನ್ಸ್ಟ್ರೇಟರುಗಳಿಗೆ ಎಂ. ಎ. ಅಥವಾ ಎಂ. ಎಸ್. ಸಿ. ಸೆಕೆಂಡ್‌ಕ್ಲಾಸ್ ಆಗಿರಬೇಕು......

Sri S. SIVAPPA.—Do you know that the qualification prescribed for demonstrator and tutor is not Master's degree, but it is Bachelor's degree ?

ಶ್ರೀ ಅಣ್ಣಾರಾವ್ ಗಣಮುಖಿ.—ಅದು ತಪ್ಪು.

Sri S. R. KANTHI.—Let me make the position a bit clear. Sir, in the Mysore University, the posts of tutors and demonstrators have not been created afresh. They were there in some of the Colleges and it was neccssary for the Government to extend the system to other Colleges.

(Interruption)

If he wants me to walk out, I will walk out.

Mr. SPEAKER.—The House wants all Ministers to stay.

Sri S. R. KANTHI.—If there is something you have up against me, you can have it, I have no objection.

I have already said that these posts are not created anew. They have been already there in the Colleges in South Kanara and Coorg.

The Government thought that this system should be extended to other areas. Even in the Mysore University in old Mysore, there were such posts. So we felt that such posts should be revised. The qulifications and other matters were already there. It was not necessary to consult the Academic Council.

4-30 P.M.

ಶ್ರೀ ಅಣ್ಣಾರಾವ್ ಗಣಮುಖಿ.—ಯಾವುದಾದರೂ ಕಾಲೇಜಿನಲ್ಲಿ ಒಬ್ಬ ಟೀಚರಾಗಲಿ, ಲೆಕ್ಚರರ್ ಆಗಲಿ ಅಥವಾ ಡೆಮಾನ್‌ಸ್ಟ್ರೇಟರಾಗಲಿ, ಮೊದಲನೆಯ ಮಟ್ಟದಲ್ಲಿ ಸೇರ್ಪಡೆ ಮಾಡಬೇಕಾದರೆ ಆತನ ಅರ್ಹತೆ M.A., MSc. (II Class) ಇರಬೇಕೆಂದು ನಿರ್ಣಯಗಳಾಗಿವೆ. ಸಿಂಡಿಕೇಟಿನವರು ಮತ್ತು ಸೆನೆಟ್‌ನವರು, ಆ ಪ್ರಕಾರ ಆಜೆ ಮಾಡಿದ್ದಾರೆ. ಆದ್ದರಿಂದ ಇವು ಯಾವುದೇ ಹುದ್ದೆಗಳು—designation ಏನೇ ಇರಲಿ—ಇದಕ್ಕಿಂತಲೂ ಮುಂಚೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಲೆಕ್ಚರರ್ ಗ್ರೇಡ್ (1), ಲೆಕ್ಚರರ್ ಗ್ರೇಡ್ (2), ಲೆಕ್ಚರರ್ ಗ್ರೇಡ್ (3) ಎಂದು ಮೂರು ತೆರದಲ್ಲಿದ್ದುವು. ಈ ಮೂರು ಗ್ರೇಡ್‌ಗಳನ್ನೂ 1957ನೆಯ ಇಸವಿಯಲ್ಲಿ ಒಂದುಗೂಡಿಸಿದರು. ಆದ್ದರಿಂದ ನನಗೆ ಗೊತ್ತಿರುವ ಮಟ್ಟಿಗೆ ಹೇಳುವುದಾದರೆ, ಅವರು ಡೆಮಾನ್‌ಸ್ಟ್ರೇಟರುಗಳ, ಟ್ಯೂಟರುಗಳ ಹುದ್ದೆಯನ್ನು create ಮಾಡಿದರು, ಆ ಪೋಸ್ಟ್ ಇರಕೂಡದೆಂದು ಹೇಳಿದ ವಾದ ಸರಿಯಲ್ಲವೆಂದು ನಾನು ಹೇಳುತ್ತೇನೆ. ಆದಕ್ಕೆ ಬದಲು, ಈಗಿರತಕ್ಕ ಲೆಕ್ಚರರುಗಳಿಗೆ ಅನ್ಯಾಯವಾಗಿದೆಯೆಂದರೆ ಅದರ ಬಗ್ಗೆ ಸರ್ಕಾರದವರನ್ನು ಕೇಳಿಕೊಳ್ಳಬಹುದು. ಈಗಿರುವವರಿಗೆ ಇದನ್ನು ಅನ್ವಯಿಸಕೂಡದು, ಮುಂದಿನವರಿಗೆ ಮಾಡಬಹುದು ಎಂದು ಹೇಳಿದ್ದರೆ ಸಾಧ್ಯವಾದ್ದು. ಹಾಗಿಲ್ಲದೆ, ಅದನ್ನೂ ಇದನ್ನೂ ಕೂಡಿಸಿಬಿಟ್ಟು ಡೆಮಾನ್‌ಸ್ಟ್ರೇಟರುಗಳ ಮತ್ತು ಟ್ಯೂಟರುಗಳ ಜಾರೆವನ್ನು create ಮಾಡಿ, ಗೊಂದಲ ಎಬ್ಬಿಸಿದ್ದಾಗ ಎಂದು ಹೇಳುವುದು ಸರಿಯಲ್ಲ.

ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದ policy ಏನಿದೆ ಅದನ್ನು ಹಿಡಿದು ವೈಯಕ್ತಿಕವಾಗಿ ಶ್ರೀಮಾನ್ ಕಂಠಿಯವರನ್ನು ಟೀಕೆ ಮಾಡುವ ಪ್ರಶ್ನೆ ಹುಟ್ಟುವುದಿಲ್ಲ. ಏಕೆಂದರೆ ಸರ್ಕಾರದ ಕೆಲಸಗಳೆಲ್ಲವೂ ಜಂಟಿ ಜವಾಬ್ದಾರಿಯಿಂದ ನಡೆಯುತ್ತಿರುತ್ತದೆ. ಮಂತ್ರಿಮಂಡಳ—ಎಲ್ಲರೂ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಕ್ಯಾಬಿನೆಟ್ ತೀರ್ಮಾನವಾಯಿತೆಂದರೆ, ಯಾವುದೇ ಒಬ್ಬ ಮಂತ್ರಿಯ ಮೇಲೆ ಅದನ್ನು ಆರೋಪಿಸುವುದು, ಯಾರೋ ಒಬ್ಬ ಮಂತ್ರಿಯಿಂದ ಆಗಿದೆಯೆಂದು ಹೇಳುವುದು ಸರಿಯಲ್ಲ It is collective wisdom.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಂದರೇನು ! ಎಲ್ಲರೂ ಹೋಗಬೇಕೆಂದು ಹೇಳುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ಆದ್ದರಿಂದ ಒಬ್ಬ ಮಂತ್ರಿಯನ್ನು ಬೆರಳಿಟ್ಟು ತೋರಿಸಿ (point out ಮಾಡಿ) 'ನೀವೇ ಮಾಡಿದ್ದೀರಿ, ಈ ದೇಶಕ್ಕೆಲ್ಲಾ ನೀವೇ ಹಾನಿ ಮಾಡಿದ್ದೀರಿ' ಎಂದರೆ ಡೆಮಾಕ್ರಸಿಯಲ್ಲಿ ಸರ್ಕಾರ ಹೇಗೆ ಕೆಲಸ ಮಾಡುತ್ತಿದೆಂಬುದನ್ನೇ ಅವರು ಅರ್ಥಮಾಡಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಯಾವುದಾದರೂ ತೀರ್ಮಾನ ಇಂದು ತೆಗೆದುಕೊಂಡಿದ್ದರೆ, ಅದು ಇಂದು ಕಂಠಿಯವರೇ ತೆಗೆದುಕೊಂಡಿದ್ದಲ್ಲ. ಅವರೇ ತಪ್ಪಿತಸ್ಥರು ಎಂದು ಹೇಳುವುದು ಸರಿಯಲ್ಲ.

ಕಡೆಯದಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. 'ಕಡ್ಡಿಗೆ ಗುಡ್ಡ ಮಾಡಬಾರದು' ಸರ್ಕಾರದವರು ಎಂದೆಂದೂ ತಪ್ಪು ಮಾಡುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಒಂದು ವೇಳೆ ತಪ್ಪುಗಳು ನಿಜವಾಗಿಯೂ ಇದ್ದರೆ, ಅದನ್ನು ಈ ಮನೆಯಲ್ಲಿರುವವರೆಲ್ಲರೂ ಸೇರಿ ತಿದ್ದುವುದಕ್ಕೆ ಹೋಗಬೇಕು. ಹಾಗೆ ತಿದ್ದುವುದನ್ನು ಬಿಟ್ಟು 'ನಿಕಾಲ್' ಮಾಡಿಬಿಡುತ್ತೇವೆನ್ನುವುದು ಸರಿಯಲ್ಲ. ಸಣ್ಣದಾದ ಮಾತನ್ನು ದೊಡ್ಡದು ಮಾಡಿ, 'ವಿಶ್ವಾಸವೇ ಇಲ್ಲ'ವೆನ್ನುವುದು ಸರಿಯಲ್ಲ. Politically ಅದು ಸರಿಯಾಗಿರಬಹುದು; ಆದರೆ ಬೇರೆ ದೃಷ್ಟಿಯಿಂದ ಅಲ್ಲ. ಆದ್ದರಿಂದ ಯಾವುದೇ ಕಾರಣದಿಂದ ಈ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ತರುವುದಕ್ಕೆ ಈ ಸರ್ಕಾರದಿಂದ ಅಂಥ ಅಪರಾಧವೇನೂ ಆಗಿಲ್ಲವೆಂದು ಹೇಳುತ್ತೇನೆ.

Business of the House

Mr. SPEAKER.—Before I call upon others, I suppose we are agreed that tomorrow we are sitting in the morning at 8-30 and we shall drop the question hour because we can give more time for discussion of this subject.

MEMBERS.—Yes.

Mr. SPEAKER.—Question hour will be dropped. I have an agreed list of members. I will scrutinise it. Now I call upon Sri S. M. Krishna to speak.

Motion of No-Confidence in the Council of Ministers.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಸಭಾಪತಿಗಳೇ, ನಮ್ಮ ನಾಯಕರಾದ ಮಾನ್ಯ ಶಿವಪ್ಪನವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಅವಿಶ್ವಾಸದ ಠರಾವನ್ನು ಸಮರ್ಥನೆ ಮಾಡುವುದಕ್ಕೆ ನಾನು ನಿಂತಿದ್ದೇನೆ. ಕಳೆದ ಫೆಬ್ರುವರಿಯಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಾದ ನಂತರ ಬಹುಮತ

ಪಡೆದು ಬಂದ ಕಾಂಗ್ರೆಸ್ ಪರಿಷ್ಕಾರು ರಚಿಸಿದ ಮಂತ್ರಿಮಂಡಳವು ಕಳೆದ 6 ತಿಂಗಳಲ್ಲಿ ಎಷ್ಟರ ಮಟ್ಟಿಗೆ ಜನಹಿತವನ್ನು, ಜನರ ಕಣ್ಯಾಣವನ್ನು ಸಾಧನೆ ಮಾಡುವುದಕ್ಕೆ ಅಸಮರ್ಥವಾಗಿದೆಯೆಂಬುದರ ಬಗ್ಗೆ ನಾವು ಈ ಅವಿಶ್ವಾಸದ ನಿರ್ಣಯದ ಮೂಲಕ, ದೇಶದ ಜನರಲ್ಲಿ ಅಸಮಾಧಾನ ಹೊಗೆಯಾಡುತ್ತಿರುವ ಸಂದರ್ಭದಲ್ಲಿ, ನಮ್ಮ ಅಭಿಪ್ರಾಯವನ್ನು ಸೂಚಿಸಲು ಇದನ್ನು ಮಂಡಿಸಿದ್ದೇವೆ.

ಸ್ವಾಮಿ, ಈರೀತಿಯಾದ ನಿರ್ಣಯಕ್ಕೆ, ನಾನು ಕೇವಲ ವಿರೋಧ ಪಕ್ಷದ ಸದಸ್ಯನಾಗಿ ಮಾತ್ರ ಸಮರ್ಥನೆ ಮಾಡುವುದಕ್ಕೆ ನಿಂತಿಲ್ಲ! ಈ ಮೈಸೂರು ಸಂಸ್ಥಾನದ ಒಬ್ಬ ಪ್ರಜೆಯಾಗಿ ನಾನು ಅವಿಶ್ವಾಸ ನಿರ್ಣಯವನ್ನು ಸಮರ್ಥನೆ ಮಾಡುತ್ತಲಿದ್ದೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಅಣ್ಣಾರಾಯರು ಈ ಅವಿಶ್ವಾಸ ನಿರ್ಣಯವನ್ನು ವಿರೋಧ ಮಾಡಿದವರಲ್ಲಿ ಮೊಟ್ಟ ಮೊದಲನೆಯವರು. ನಮ್ಮ ಸಭಾನಾಯಕರು ಶರಾವತಿ ಕರ್ಮಖಾಂಡದ ಬಗ್ಗೆ ಹಲವಾರು ಮಾತನ್ನು ಆಡಿದರು. ಆದರೆ—ವೈಯುಕ್ತಿಕವಾದ ವಿಚಾರ—ಶ್ರೀಮಾನ್ ಅಣ್ಣಾರಾಯರು ಕಾಂಗ್ರೆಸ್ ಸರ್ಕಾರದವರ ಪರವಾಗಿ ಸಮರ್ಥನೆ ಮಾಡುವುದಕ್ಕೆ ಈ ಮಹಾ ಸಭೆಯಲ್ಲಿ ಮುಂದೆ ನಿಂತು, ಕೇವಲ ವಿದ್ಯಾ ಮಂತ್ರಿಗಳನ್ನು ಮಾತ್ರ ರಕ್ಷಣೆ ಮಾಡಿ, ಶರಾವತಿಯ ವಿಚಾರದಲ್ಲಿ ಒಂದು ಮಾತನ್ನೂ ಹೇಳದಿರುವುದಕ್ಕೆ ಕಾರಣವೇನೆಂಬುದಾಗಿ ಶ್ರೀಮಾನ್ ಅಣ್ಣಾರಾಯರನ್ನು ನಾನು ಪ್ರಶ್ನಿಸುತ್ತೇನೆ. ಅಂದ ಮೇಲೆ, ಮಾನ್ಯ ವಿರೋಧ ಪಕ್ಷದ ನಾಯಕರು ಶರಾವತಿಯ ಬಗ್ಗೆ ಏನು ಅಪಾದನೆಗಳನ್ನು ಸರ್ಕಾರದ ಮೇಲೆ ಮಾಡಿದ್ದರೋ, ಆ ಅಪಾದನೆಗಳನ್ನು ಶ್ರೀಮಾನ್ ಅಣ್ಣಾರಾಯರು ಸಮರ್ಥನೆ ಮಾಡುತ್ತಿದ್ದಾರೆ ಎಂಬ ಭಾವನೆ ಮೂಡಬಹುದಾಗಿದೆ. ಏಕೆಂದರೆ ಅವಿಶ್ವಾಸದ ಠರಾವು ಮೊಟ್ಟ ಮೊದಲನೆಯದಾಗಿ ಶರಾವತಿಯ ಬಗ್ಗೆ ಎದ್ದಿರತಕ್ಕ ಒಂದು ಬೊಬ್ಬೆಯ ವಿಚಾರವನ್ನೂ ಸೂಚಿಸಿ, ಶರಾವತಿಯ ಬಗ್ಗೆ ಹೇಗೆ ಕಾಂಗ್ರೆಸ್ ಸರ್ಕಾರ ಪ್ರಥಮದಿಂದಲೂ ಮುಗ್ಗರಿಸಿ ಬಿದ್ದು ದೇಶದ ಜನತೆಗೆ ಅನ್ಯಾಯ ಮಾಡಿದೆಯೆಂಬುದನ್ನು ನಮೂದಿಸಿದೆ. ಅಂಥಾದ್ರಲ್ಲಿ ಶರಾವತಿಯ ಬಗ್ಗೆ ಯಾಗಲೀ, ಆ ಸಂಬಂಧದಲ್ಲಿ ಮಂತ್ರಿಮಂಡಳದ ಬಗ್ಗೆ ಯಾಗಲೀ, ಅಲ್ಲಿ ಕೆಲಸ ಮಾಡತಕ್ಕ ಇಂಜಿನಿಯರುಗಳ ಬಗ್ಗೆ ಯಾಗಲೀ, ಜವಾಬ್ದಾರಿಯುತರಾದ ಒಬ್ಬ ಸದಸ್ಯರು, ಮಾಡಿದ ಅಪಾದನೆಗಳನ್ನು ಅಲ್ಲಗಳೆಯುವ ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲವಲ್ಲಾ! ಇದರಿಂದ ನಮಗೇನನ್ನಿಸುತ್ತದೆ ಎಂದರೆ ಶ್ರೀಮಾನ್ ಅಣ್ಣಾರಾಯರು, ನಾಲ್ಕೂವರೆ ವರ್ಷಗಳಕಾಲ ಮೈಸೂರು ಸಂಸ್ಥಾನದ ಮಂತ್ರಿಗಳಾಗಿದ್ದು ಶ್ರೀಮಾನ್ ಎಚ್. ಎಂ. ಚೆನ್ನಬಸಪ್ಪನವರು ಪತ್ರಿಕೆಯಲ್ಲಿ ಒಂದು ಹೇಳಿಕೆ ಕೊಟ್ಟು "ಶರಾವತಿಯಲ್ಲಿ ಎಲ್ಲವೂ ಚೆನ್ನಾಗಿ ನಡೆದಿಲ್ಲ! ಬೇಕಾದಷ್ಟು ಅನಾಚಾರ! ಅಕ್ರಮಗಳು! ನಡೆದಿವೆ" ಎಂದೆಲ್ಲಾ ತಿಳಿಸಿರುವ ವಿಚಾರದಲ್ಲಿ; ಒಂದು ಮಾತನ್ನೂ ಹೇಳಲಿಲ್ಲವಲ್ಲಾ! ಏಕೆ? ಎಂಬ ಕುತೂಹಲವಾಗಿದೆ. ಈ ಹೊತ್ತು ನಾವಾದರೋ ಶರಾವತಿಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ. ಆ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಎರಡು ಬಾರಿ ಏನೋ ಉತ್ತರಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನಾದರೋ ಈ ಶರಾವತಿಯ ಪುರಾಣ, ಶರಾವತಿಯ ಹಗರಣ ಹೇಗೆ ಶುರುವಾಯಿತು, ಹೇಗೆ ಪರ್ಯಾವಸಾನವಾಯಿತು ಎಂಬುದನ್ನು ಹೇಳಲು ಅಧ್ಯಕ್ಷರ ಅಪ್ಪಣೆ ಬೇಡುತ್ತೇನೆ.

1960ನೆಯ ಇಸವಿಯಲ್ಲಿ ಶರಾವತಿಯ ಬಗ್ಗೆ ಅಲ್ಲಿ ಕಂಟ್ರಾಕ್ಟ್ ಮಾಡುತ್ತಿದ್ದ ಎಂ. ಎಚ್. ರಾಮಯ್ಯನವರು, ಆಗ್ಗೆ ಮಂತ್ರಿಗಳಾಗಿದ್ದ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರ ಮುಂದೆ, ಶರಾವತಿಯ ಕಾಮಗಾರಿಯ ವಿಷಯದಲ್ಲಿ ಕೊಂಚ ಮಟ್ಟಿಗೆ ಅನ್ಯಾಯವಾಗಿದೆ... ...

Mr. SPEAKER.—As for as possible the Hon'ble member will please avoid mentioning names. If he omits the names the efficacy of his argument will not go.

ಶ್ರೀ ಎಸ್. ಎಂ. ಕೃಷ್ಣ.—ಆದ್ದರಿಂದ ಮಂತ್ರಿಗಳಾಗಿದ್ದ ಶ್ರೀಮಾನ್ ಚನ್ನಬಸಪ್ಪನವರಲ್ಲಿ ಸಂಬಂಧಪಟ್ಟ ಕಂಟ್ರಾಕ್ಟರ್ಸ್ ಅವರು ಮುಂದೆ ಹೋಗಿ ನಮಗೆ ಅನ್ಯಾಯವಾಗಿದೆ. ನಮಗೆ ದರಗಳನ್ನು ಜಾಸ್ತಿ ಮಾಡಿಕೊಡಬೇಕು ಎಂದು ಕೇಳಿದಾಗ ಶ್ರೀಮಾನ್ ಚನ್ನಬಸಪ್ಪನವರು ಆಗುವುದಿಲ್ಲ. ಈ ಶರಾವತಿ ಬಗ್ಗೆ ಹಿಂದೆಯೇ ಒಂದು ಕಾಂಟ್ರಾಕ್ಟ್ ಆಗಿತ್ತು, ಒಂದು ಒಪ್ಪಂದವಾಗಿತ್ತು. ಸರ್ಕಾರಕ್ಕೂ ಮತ್ತು ಕಂಟ್ರಾಕ್ಟರುಗಳಿಗೂ ಒಂದು ಒಪ್ಪಂದವಾಗಿ ಆ ಒಪ್ಪಂದ ರಿಜಿಸ್ಟರ್ ಆಗಿತ್ತು. ಅದರ ಪ್ರಕಾರ ಎಲ್ಲಿ ಅನುಮಾನ ಕಂಡು ಬರುತ್ತದೋ, ಎಲ್ಲಿ ದರಗಳ ಬಗ್ಗೆ ಕರಾರುವಾಕ್ಕಾದ ಅಂಶಗಳು ಇಲ್ಲವೋ ಅಂತಹ ಕಡೆಗಳಲ್ಲಿ ಮಾತ್ರ ನ್ಯಾಯನಿರ್ವಹಣೆಗೆ ವಹಿಸುವುದು ನ್ಯಾಯವೆಂದು ಒಪ್ಪಿಗೆಯಾಗಿತ್ತು. ಇಲ್ಲಿ ದರಗಳ ವಿಷಯದಲ್ಲಿ ಯಾವ ವಿಧವಾದಂಥ ಅನುಮಾನ, ಅಂತಹ ಕಡೆ ಯಾವ ವಿಧವಾದ ಆರ್ಬಿಟ್ರೇಷನ್ನಿಗೂ ಕೂಡ ಸಾಧ್ಯವಾಗುವುದಿಲ್ಲವೆಂದು ಶ್ರೀಮಾನ್ ಚನ್ನಬಸಪ್ಪನವರು ವ್ಯಕ್ತಪಡಿಸಿದ್ದರು. ಅವರು ಹೋದ ಮೇಲೆ ಮತ್ತೊಬ್ಬರು ಆ ಸಚಿವ ಸ್ಥಾನವನ್ನು ವಹಿಸಿಕೊಂಡರು. ಇದೇ ಕಂಟ್ರಾಕ್ಟರ್ಸ್ ಪುನಃ ಇದನ್ನು ಆರ್ಬಿಟ್ರೇಷನ್ನಿಗೆ ವಹಿಸಬೇಕು. ಅವರು ಏನು ತೀರ್ಮಾನ ಮಾಡುತ್ತಾರೋ ಅದನ್ನು ನಾವೆಲ್ಲರೂ ಒಪ್ಪಬೇಕು ಎಂಬ ಒಂದು ವಾದವನ್ನು ಮತ್ತೆ ಹೂಡಿದರು. ಆಗ ಕಂಟ್ರಾಕ್ಟದಾರರು ಅವರ ಪರವಾಗಿ ಒಬ್ಬ ಆರ್ಬಿಟ್ರೇಟರನ್ನು ನೇಮಿಸಿದರು. ಅದೇ ರೀತಿ ಸರ್ಕಾರದವರು ದೇಶದ ದುಡ್ಡು, ಜನಗಳ ದುಡ್ಡು, ಅದನ್ನು ಯಾವ ರೀತಿ ರಕ್ಷಣೆ ಮಾಡಬೇಕು, ಖರ್ಚು ಮಾಡಬೇಕು ಎಂಬ ಬಗ್ಗೆ ಮಹಾತ್ಮ ಗಾಂಧೀಜಿಯವರ ಧರ್ಮದರ್ಶಿತ್ವ ಇದಕ್ಕೆ ಅಡಿಯಾಳಾಗಿ, ಅದಕ್ಕೆ ಬದ್ಧರಾಗಿ ಕಾಂಗ್ರೆಸ್ ಮಂತ್ರಿಮಂಡಲ ಕಾರ್ಯನಿರ್ವಹಣೆ ಮಾಡಿದ್ದರೆ ಸರ್ಕಾರದ ಪರವಾಗಿ ಯಾರನ್ನು ಆರ್ಬಿಟ್ರೇಟರಾಗಿ ನೇಮಿಸಿದ್ದರೋ ಆ ಬಗ್ಗೆ ಸಾಕಾದಷ್ಟು ನಿರ್ದೇಶನವನ್ನು ಸರ್ಕಾರದವರು ಅವರಿಗೆ ಕೊಡಬೇಕಾಗಿತ್ತು. ಆ ಬಗ್ಗೆ ನನ್ನ ಆಪಾದನೆ ಇಷ್ಟೆ. ಸರ್ಕಾರ ಅವರು ಮಾಡಿರತಕ್ಕ ಆರ್ಬಿಟ್ರೇಟರ ನೇಮಕದಲ್ಲಿ ಆ ಆರ್ಬಿಟ್ರೇಟರಿಗೆ ಯಾವ ಒಂದು ನಿರ್ದೇಶನವನ್ನು ಸರ್ಕಾರದವರು ಜನಗಳ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ, ಖಜಾನೆಯ ಹಿತದೃಷ್ಟಿಯಿಂದ ಕೊಡಬೇಕೋ ಅದನ್ನು ಕೊಡದೆ ಈ ದಿವಸ ದೇಶಕ್ಕೆ ಮಹಾಪರಾಧವನ್ನು ಮಾಡಿದ್ದಾರೆ. ಆ ಅಪರಾಧ ಅಕ್ಷಮ್ಯವಾಗಿದೆಯೆಂದು ನಾನು ಸಾರಿಸಾರಿ ಹೇಳಬೇಕಾಗಿದೆ. ಈ ಆರ್ಬಿಟ್ರೇಟರ್ ಒಂದು ಅವಾರ್ಡನ್ನು ಕೊಡುವುದಕ್ಕೆ ಮುಂಚೆಯೇ ಶ್ರೀಮಾನ್ ಗಂಗಾಧರರಾಯರು ಗತಿಸಿ

(ಶ್ರೀ ಎಸ್. ಎಂ. ಕೃಷ್ಣ)

ಹೋದರು. ನಂತರ ಶ್ರೀಮಾನ್ ನರಸಿಂಗ್‌ರಾವ್ ಅವರನ್ನು ಆರ್ಬಿಟ್ರೇಟರನ್ನಾಗಿ ನೇಮಿಸಬೇಕೆಂದು ಸರ್ಕಾರದವರು ಯೋಚನೆ ಮಾಡಿದರು. ಆಗ ಮಂತ್ರಿಗಳಾಗಿದ್ದ ಶ್ರೀಮಾನ್ ವೀರಣ್ಣಗೌಡರು ಅವರನ್ನು ನೇಮಕ ಮಾಡಿದ ಆರ್ಡರನ್ನು ಬರೆದು ಕಳುಹಿಸಿದರು. ಆದರೆ ಕಂಟ್ರಾಕ್ಟುದಾರರಿಗೆ ಶ್ರೀಮಾನ್ ನರಸಿಂಗ್ ರಾವ್ ಅವರಲ್ಲಿ ನಂಬಿಕೆಯಿರಲಿಲ್ಲ. ಅವರು ಬಂದರೆ ತಮ್ಮ ವ್ಯವಹಾರಕ್ಕೆ ಧಕ್ಕೆ ಆಗುತ್ತದೆ, ಅಡ್ಡಿ ಬರುತ್ತದೆಂಬ ದೃಷ್ಟಿಯಿಂದ ಮಂತ್ರಿಗಳಾಗಿದ್ದವರು ಪಿಸು ಮಾತಿನಲ್ಲಿ ಶ್ರೀಮಾನ್ ನರಸಿಂಗರಾಯರಿಗೆ ಏನೋ ಹೇಳಿದರು. ಒಬ್ಬ ಜವಾಬ್ದಾರಿಯುತವಾದ ಮಂತ್ರಿಗಳು ಪರ್ಸನಲ್ ಅಸಿಸ್ಟೆಂಟ್ ಅವರನ್ನು ಕರೆದು ಆರ್ಬಿಟ್ರೇಟರ್‌ಗಿರುವುದಕ್ಕೆ ಇಷ್ಟವಿಲ್ಲ ಎಂದು ಶ್ರೀಮಾನ್ ನರಸಿಂಗ್‌ರಾವ್ ಅವರಲ್ಲಿ ತಿಳಿಸಿದರಂತ ಆವರು ಹೇಳಿದರು. ಜವಾಬ್ದಾರಿಯಾಗಿರತಕ್ಕ ಪ್ರಜಾಮಂತ್ರಿಗಳು ಈ ರೀತಿ ಹೇಳಬಹುದೇ ಎಂಬ ವಿಚಾರವನ್ನು ನಾವು ಯೋಚನೆ ಮಾಡಬೇಕು. ನಂತರ ಸ್ವಲ್ಪ ಮಾನ ಮರ್ಯಾದೆ ಇಟ್ಟುಕೊಂಡಿದ್ದಂಥ ಈ ಆರ್ಬಿಟ್ರೇಟರ್ ಮಂತ್ರಿಗಳ ಕೃಪಾಕಟಾಕ್ಷಕ್ಕೆ ಬೀಳಲಿಲ್ಲವಾದ್ದರಿಂದ ನನಗೂ ಈ ವ್ಯವಹಾರಕ್ಕೂ ಸಂಬಂಧವಿಲ್ಲವೆಂಬುದಾಗಿ ಅಪ್ಪಣೆ ಕೊಡಿಸಿದರು. ನಂತರ ಅದೇ ಮಂತ್ರಿಗಳು ಶ್ರೀಮಾನ್ ಗಣಪತಿಯವರನ್ನು ತಮ್ಮ ಆರ್ಬಿಟ್ರೇಟರನ್ನಾಗಿ ನೇಮಕ ಮಾಡಿದರು. ಆರ್ಬಿಟ್ರೇಷನ್ನಿಗೆ ಮೊದಲ ಕೇವಲ ಎರಡು ಐಟಂಗಳನ್ನು ಮಾತ್ರ ಕಂಟ್ರಾಕ್ಟುದಾರರು ವಹಿಸಿದ್ದರು. ಲಿಂಗನಮಕ್ಕಿ ಬಗ್ಗೆ enhancement of rate ವಿಷಯದಲ್ಲಿ ವಿರೋಧ ಪಕ್ಷದ ನಾಯಕರು ಚೆನ್ನಾಗಿ ಸ್ಪಷ್ಟಪಡಿಸಿದ್ದಾರೆ. ಈ ಎರಡು ಐಟಂಗಳನ್ನು ಮಾತ್ರ ಆರ್ಬಿಟ್ರೇಷನ್ನಿಗೆ ಮೊದಲು ವಹಿಸಬೇಕೆಂದು ಶ್ರೀಮಾನ್ ರಾಮಯ್ಯನವರು ಮಂತ್ರಿಗಳಿಗೆ ಹೇಳಿದರು. ಅಗ್ರಿಮೆಂಟ್ ಪ್ರಕಾರ ಈ ಎರಡು ಐಟಂಗಳಲ್ಲದೆ ಇನ್ನೂ ಆರು ಐಟಂಗಳನ್ನು ಆರ್ಬಿಟ್ರೇಷನ್ ಚೌಕಟ್ಟಿಗೆ ಸೇರಿಸಿ ಆರ್ಬಿಟ್ರೇಷನ್ ಮೊಬಲಗು ಸುಮಾರು 19 ಲಕ್ಷವಾಗುವುದಕ್ಕೆ ಅವಕಾಶವಾಯಿತು. 19 ಲಕ್ಷವಾಗುವುದಕ್ಕೆ ಅವಕಾಶವಾದುದು ಒಂದೇ ಅಲ್ಲ. ಈ 19 ಲಕ್ಷ ರೂಪಾಯಿಗಳು ಮೈಸೂರು ಖಜಾನೆಯಿಂದ ಒಬ್ಬ ಕಂಟ್ರಾಕ್ಟುದಾರನ ವಶಕ್ಕೆ ಹೋಯಿತು ಎಂಬುದಾಗಿ ನಾನು ತಿಳಿದುಕೊಳ್ಳುವಾಗ ನನಗೆ ಎದೆ ಜುಮ್ ಎನ್ನಿಸಿತು. ನಮ್ಮ ದೇಶದಲ್ಲಿ ಕಲಿಯುಗದ ರಾಮರಾಜ್ಯ ಬರುವುದಕ್ಕೆ ಮೊದಲು ಭರತನ ರಾಜ್ಯ ನಡೆಯುತ್ತಿತ್ತು. ಹಾಗೆಯೇ ಇವತ್ತಿನ ದಿವಸ ಮುಖ್ಯಮಂತ್ರಿಗಳಾಗಿ ಶ್ರೀಮಾನ್ ನಿಜಲಿಂಗಪ್ಪನವರು ಬರುವುದಕ್ಕೆ ಮೊದಲು ಶ್ರೀಮಾನ್ ಕಂಠಿಯವರು ಮುಖ್ಯಮಂತ್ರಿಗಳಾಗಿದ್ದರು. ಶ್ರೀಮಾನ್ ಕಂಠಿಯವರ ಕಾಲದಲ್ಲಿಯೇ ಈ 19 ಲಕ್ಷ ರೂಪಾಯಿಗಳನ್ನು ಆರ್ಬಿಟ್ರೇಷನ್ ಅವಾರ್ಡ್ ಎಂಬ ನೆವದ ಮೂಲಕ ಕಂಟ್ರಾಕ್ಟುದಾರರಿಗೆ ಕೊಟ್ಟಿದ್ದಾರೆ. ಇದು ಸುಳ್ಳು ಎಂದು ಹೇಳತಕ್ಕ ಧೈರ್ಯ ಸರ್ಕಾರಕ್ಕೆ ಇದೆಯೋ ಎಂದು ಪ್ರಶ್ನೆ ಮಾಡುತ್ತೇನೆ. ಸರ್ಕಾರದವರು ಈ ರೀತಿ 19 ಲಕ್ಷ ರೂಪಾಯಿಗಳನ್ನು ಕೊಡಬೇಕಾದರೆ ಎಷ್ಟು ಸಾರಿ ಯೋಚನೆ ಮಾಡಿದರು. ಅದರಲ್ಲೂ ಶ್ರೀಮಾನ್ ಕಂಠಿಯವರು ಮುಖ್ಯಮಂತ್ರಿಗಳ ಪದವಿಯಿಂದ ಇಳಿಯುವುದಕ್ಕೆ ಕೇವಲ 48 ಘಂಟೆಗಳಿರುವಾಗ 19 ಲಕ್ಷ ರೂಪಾಯಿಗಳ ಆರ್ಬಿಟ್ರೇಷನ್ ಅವಾರ್ಡಿಗೆ ಹಾಕಿರತಕ್ಕ ಸಹಿಯನ್ನು ನೋಡಿದರೆ ಆ ಮಂತ್ರಿಗಳಲ್ಲಿ ಯಾವ ರೀತಿ ಜನಗಳಿಗೆ ವಿಶ್ವಾಸ ಹುಟ್ಟುತ್ತದೆಂಬ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಹಾಕಬೇಕಾಗಿದೆ, ಈ 19 ಲಕ್ಷ ರೂಪಾಯಿಗಳ ಅವಾರ್ಡನ್ನು ಕೊಡುವ ಬಗ್ಗೆ ಇದು ಲಾ ಡಿಪಾರ್ಟ್‌ಮೆಂಟಿಗೆ ರೆಫರ್ ಆಯಿತು. ಲಾ ಡಿಪಾರ್ಟ್‌ಮೆಂಟ್ ಮತ್ತು ಅಡ್ವೊಕೇಟ್ ಜನರಲ್ ಅವರೂ ಕೂಡ ಈ 19 ಲಕ್ಷ ರೂಪಾಯಿಗಳನ್ನು ಕೊಡುವುದನ್ನು ವಿರೋಧಿಸಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರೂ ಸಹ ಒಂದು ಬಹಿರಂಗವಾದ ವಿಚಾರಣಾ ಸಮಿತಿಯನ್ನು ಈ ಬಗ್ಗೆ ನೇಮಕ ಮಾಡಬೇಕೆಂದು ಶರಾವತಿಯ ಮೇಲೆ ಪ್ರಶ್ನೆ ಬಂದಾಗ ಇದೇ ಸಭೆಯಲ್ಲಿ ಕೇಳಿದ್ದರು. ಹಾಗೆ ಕೇಳುವುದಕ್ಕೆ ನಮಗೆ ಸಾಕಾದಷ್ಟು ಸಾಕ್ಷಿ, ಸಾಹಿತ್ಯ ಇತ್ತು. ಆಗಲೇ ಒಂದು ವಿಚಾರಣಾ ಸಮಿತಿಯನ್ನು ಮಾಡಿ ಎಂದು ಕೇಳಿದ್ದೆವು. ಶ್ರೀಮಾನ್ ಶಿವಪ್ಪನವರು ವಿಧಾನಸೌಧ ವಿಚಾರಣಾ ಸಮಿತಿ ಬಗ್ಗೆಯು ಮಾತನಾಡಿದ್ದಾರೆ. ವಿಧಾನಸೌಧದ ಬಗ್ಗೆ ಆಗ ಇದ್ದಂಥ ಗುಲ್ಲು ಮತ್ತು ಒಂದು ಪ್ರಚಾರವನ್ನು ಅರಿತುಕೊಂಡೇ ಶ್ರೀಮಾನ್ ಹನುಮಂತಯ್ಯನವರು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿದರು. ವಿಧಾನಸೌಧದ ಬಗ್ಗೆ ಶ್ರೀಮಾನ್ ಹನುಮಂತಯ್ಯನವರೇ ಏಕೆ ಒಂದು ಸಮಿತಿಯನ್ನು ನಿರ್ಮಿಸಿದರು ಎಂಬುದಾಗಿ ನಾನು ಕೇಳುತ್ತೇನೆ. ನಮಗೆ ಎಲ್ಲ ಅಂಶಗಳೂ ಗೊತ್ತಾಗುತ್ತವೆ. ನಮ್ಮ ಕೈಗಳು ಶುಚಿಯಾಗಿವೆ ಎಂಬುದನ್ನು ಒಂದು ತೀರ್ಮಾನದ ಪ್ರಕಾರ ತೋರಿಸಿಕೊಟ್ಟಿದ್ದಾರೆ. ಮತ್ತು ನಮ್ಮ ಶರೀರ ಮಲಿನವಾಗಿಲ್ಲವೆಂಬುದನ್ನು ಸಹ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಜನಗಳ ಪ್ರತಿನಿಧಿಗಳಾದ ನಮಗೆ ಈ ಬಗ್ಗೆ ಚರ್ಚೆ ನಡೆಸಲು ಇಲ್ಲಿ ಒಂದು ಅವಕಾಶವನ್ನು ಮಾಡಿಕೊಡಬೇಕು. ಈ ಒಂದು ಹಗರಣದಲ್ಲಿ ಯಾರ್ಯಾರ ಕೈವಾಡ ಎಷ್ಟರಮಟ್ಟಿಗಿದೆ, ಯಾರ್ಯಾರ ಪಾತ್ರ ಎಷ್ಟೆಷ್ಟು, ಇಷ್ಟು ಗುರುತರವಾದ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದಾರೆ ಎಂಬೀ ವಿಚಾರಗಳನ್ನು ನಿಷ್ಪಕ್ಷಪಾತದಿಂದ ಆ ಸಮಿತಿ ಮುಂದೆ ಇಡಬೇಕು. ಆ ಸಮಿತಿ ಯಾರ್ಯಾರು ತಪ್ಪಿತಸ್ಥರು ಎಂಬುದನ್ನು ಕೈಯೆತ್ತಿ ತೋರಿಸಬೇಕಾಗುತ್ತದೆ. ಆಗ ಅಂತಹ ತಪ್ಪಿತಸ್ಥರನ್ನು ಸರಿಯಾಗಿ ಶಿಕ್ಷೆ ಮಾಡದೆ ಹೋದರೆ ದೇಶದ ಜನ ಖಂಡಿತವಾಗಿ ಸರ್ಕಾರದ ಬಗ್ಗೆ ನಕ್ಕಾರು, ಹಾಸ್ಯ ಮಾಡಾರು ಎಂಬುದಾಗಿ ನಾನು ಈ ಸಮಯದಲ್ಲಿ ಹೇಳಬೇಕಾಗಿದೆ. ಈ 19 ಲಕ್ಷ ರೂಪಾಯಿಗಳ ಅವಾರ್ಡನ್ನು ಕೊಡುವಾಗ ನನಗೆ ತಿಳಿದ ಆಧಾರದ ಮೇಲೆ ಕಾಂಗ್ರೆಸ್ಸಿನ ವರಿಷ್ಠ ಜತ್ತಿ ಸರ್ಕಾರದ ಮೇಲೆ ಯಾರು 27 ಆಪಾದನೆಗಳನ್ನು ಮಾಡಿದ್ದರೋ ಅಂತಹವರ ಬಗ್ಗೆ ನಾವು ಈಗ ಪುನಃ ಆಪಾದನೆ ಮಾಡುತ್ತಿದ್ದೇವೆ. ಆ ರೀತಿ ಆಪಾದನೆ ಮಾಡುವ ಹೊತ್ತಿನಲ್ಲಿ ನಾವು ಏನು ಆಪಾದನೆಗಳನ್ನು ಮಾಡುತ್ತಿದ್ದೇವೋ ಆ ಆಪಾದನೆಗಳನ್ನೆಲ್ಲಾ ಸಾಕ್ಷಿ, ಸಾಹಿತ್ಯ ಸಂಬಂಧವಾಗಿ ನಾವು ಪ್ರೂವ್ ಮಾಡುವುದಕ್ಕೆ ತಯಾರಾಗಿದ್ದೇವೆ. ಇದು ಒಂದು ಸವಾಲು. ಒಂದು ವೇಳೆ ನಾವು ಈ ರೀತಿ ಪ್ರೂವ್ ಮಾಡುವುದಕ್ಕೆ ಸಾಧ್ಯವಾಗದೆ ಹೋದರೆ ಈ ಸಭೆಯಲ್ಲಿ ನಮಗಿರತಕ್ಕ ಹಕ್ಕನ್ನು ಕಳೆದುಕೊಳ್ಳುವುದಕ್ಕೂ ಸಿದ್ಧರಾಗಿದ್ದೇವೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಅದನ್ನು ಸರ್ಕಾರದವರು ಅಂಗೀಕರಿಸಬೇಕು. 19 ಲಕ್ಷ ರೂಪಾಯಿಗಳ ಹಗರಣ, ವಿದ್ಯಾಮಂತ್ರಿಗಳ ಪಾತ್ರ, ಇವೆರಡಕ್ಕೂ ಒಂದು ಸಂಬಂಧವಿದೆ. ವಿದ್ಯಾಮಂತ್ರಿಗಳು 4 ಲಕ್ಷ ರೂಪಾಯಿಗಳನ್ನು ಹಳೆಯ ಮೈಸೂರಿನ ವಿದ್ಯಾರ್ಥಿಗಳಿಂದ,

ಹಳೆಯ ಮೈಸೂರಿನ ಮಾನ್ಯರಿಂದ, ತಂದೆಯವರಿಂದ ಪಡೆಯುತ್ತೇನೆಂದು ಹೇಳಿ ನಾನು ಜಗದಂಡಮಲ್ಲ, ಕಲ್ಲು, ಯಾರಿಗೂ ಹೆದರುವುದಿಲ್ಲವೆಂಬುದಾಗಿ ಹೇಳಿದರು. ಅದೇ ವಿದ್ಯಾಮಂತ್ರಿಗಳು ಎರಡು ದಿವಸಗಳ ಕೆಳಗೆ ಅರ್ಧ ರಿಯಾಯತಿಯನ್ನು ಕೊಡುತ್ತೇವೆಂಬುದಾಗಿ ಹೇಳಿದರು. ಒಂದು ಹೆಸರಿನ ಸರ್ಕಾರ ಒಂದು ತತ್ವವನ್ನು ಅಥವಾ ನೀತಿಯನ್ನು ತಾಳುವಾಗ ನಿರ್ದಿಷ್ಟತೆ ಇರಬೇಕು. ಸರ್ಕಾರದ ನೀತಿಯಲ್ಲಿ ದೃಢತ್ವವಿರಬೇಕು. ದೃಢತ್ವ ನೀತಿ ಮಾಯವಾದಾಗ್ಗೆ ಸರ್ಕಾರದ ಬಿಗಿ ತಪ್ಪಿಹೋಗುತ್ತದೆ. ಜನರಿಗೆ ಅದರ ಮೇಲೆ ಒಂದು ಹಾಸ್ಯಾಸ್ಪದವುಂಟಾಗುವುದಕ್ಕೆ ದಾರಿಯಾಗುತ್ತದೆ. ಅದ್ದರಿಂದ ಶ್ರೀಮಾನ್ ಕಂಠಿಯವರಿಗೆ ಒಂದು ಮಾತನ್ನು ಕೇಳುತ್ತೇನೆ. 19 ಲಕ್ಷ ರೂಪಾಯಿಗಳ ಅವಾರ್ಡನ್ನು ಕೊಡುವಾಗ ನೀವು ಸರ್ಕಾರದ ವಿಚಾರವಾಗಲೀ ಅಥವಾ 3ನೇ ಪಾಂಚವಾರ್ಷಿಕ ಯೋಚನೆಯ ವಿಚಾರವಾಗಿ ಏನಾದರೂ ಯೋಚನೆ ಮಾಡಿದ್ದರೋ ಇಲ್ಲವೋ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಈ ಶರಾವತಿಯ ಕರ್ಮಕೂಪದಲ್ಲಿ ಸರ್ಕಾರ ನಿರ್ದಿಷ್ಟವಾದ ಮತ್ತು ನಿರ್ಣಯವಾದ ನಿಲುವನ್ನು ನಿಜವಾಗಿ ಪಡೆದಿದ್ದರೆ ಯಾವ ಇಂತಹ ಅಪಾದನೆಗೂ ಈ ದಿವಸ ಮೈಸೂರು ಜನತೆಯ ಮುಂದೆ ಈ ಸರ್ಕಾರ ಹೆದರುವುದಕ್ಕೆ ಖಂಡಿತವಾಗಿ ಅವಕಾಶವಿರಲಲ್ಲವೆಂದು ನಾನು ಹೇಳುತ್ತೇನೆ.

ಸುಮಾರು ಒಂದು ಕೋಟಿ ರೂಪಾಯಿಗಳನ್ನು ಶರಾವತಿ ಪ್ರಾಜೆಕ್ಟಿನಲ್ಲಿ ಉಳಿಸ ಬಹುದಾಗಿತ್ತು. ಆ ಒಂದು ಕೋಟಿರೂಪಾಯಿಗಳಲ್ಲಿ ಒಂದು ಕೋಟಿ ಜನಗಳ ಕಲ್ಯಾಣವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಎರಡನೇಯದು ಲಿಂಗನಮಕ್ಕಿಯಲ್ಲಿ ಸರ್ಕಾರ ಮಣ್ಣು ಮುಕ್ಕಿತು. ಇದನ್ನು ನಾನು ಉದ್ದೇಶ ಪೂರ್ವಕವಾಗಿ ಹೇಳುತ್ತಿದ್ದೇನೆ. ಲಿಂಗನಮಕ್ಕಿ ವಿಚಾರದಲ್ಲಿ ತಾರಾಪುರ್ ಕಂಪೆನಿ ಒಂದು ಅಗ್ರಿಮೆಂಟ್ ಮಾಡಿಕೊಂಡಿತ್ತು. ಅದರ ಪ್ರಕಾರ ಕಲ್ಲುಗಳಿಂದ ಕಟ್ಟಬೇಕೆಂದಿದ್ದ ಕಟ್ಟೆಯನ್ನು ಯಾವ ಉದ್ದೇಶದಿಂದಲೋಏನೋ ಮಣ್ಣಿನಿಂದ ಕಟ್ಟಲು ನಿರ್ಧರಿಸಿದರು. ಈ ವಿಚಾರಗಳನ್ನೆಲ್ಲಾ ಶ್ರೀ ಮಾನ್. ಶಿವಪ್ಪನವರು ಬಹಳ ಸೂಕ್ಷ್ಮವಾಗಿ ವಿಮರ್ಶೆ ಮಾಡಿದ್ದಾರೆ. ನಾನು ಆ ವಿಚಾರದಲ್ಲಿ ಕೆಲವು ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ತಯಾರಾಗಿದ್ದೇನೆ. ಲಿಂಗನಮಕ್ಕಿ ಕಟ್ಟೆಯ ವಿಚಾರದಲ್ಲಿ, ಸರ್ಕಾರದವರು ಎರಡು ಅಗ್ರಿಮೆಂಟ್‌ಗಳನ್ನು ಮಾಡಿಕೊಂಡಿದ್ದಾರೆ. ಅದರಲ್ಲಿ ಈ ಲಿಂಗನ ಮಕ್ಕಿಯ ಕಟ್ಟೆಯ ನಿರ್ಮಾಣ ಕಾರ್ಯವನ್ನು ತಾರಾಪುರ್ ಕಂಪೆನಿಯವರಿಗೆ ಸರ್ಕಾರ ವಹಿಸಿತ್ತು. ಆ ಒಪ್ಪಂದದ ಪ್ರಕಾರ ಲಿಂಗನಮಕ್ಕಿಯ ಕಾರ್ಯವನ್ನು ಕೊನೆಯವರೆವಿಗೂ ಅವರಿಂದಲೇ ನಡೆಸುವುದಕ್ಕೆ ಸಾಧ್ಯವಿತ್ತು. ಆ ಕಂಪೆನಿಯವರು ತಮಗೆ ಆ ಕೆಲಸದಿಂದ ಸಾಕಷ್ಟು ಲಾಭ ಬರುವುದಿಲ್ಲವೆಂತಲೋ, ಅಥವಾ ಹಣದ ಕೊರತೆಯಿಂದಲೋ ಅಥವಾ ಇನ್ನು ಯಾವ ಕಾರಣದಿಂದಲೋ ಏನೋ ಅವರು ಆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಲಿಂಗನಮಕ್ಕಿ ಕಂಟ್ರಾಕ್ಟರ್ ಕೆಲಸವನ್ನು ನಾವು ಸರೆಂಡರ್, ಮಾಡುತ್ತೇವೆ. ಇದನ್ನು ಬೇರೆಯರವ ಕೈಯ್ಯಲ್ಲಿ ಮಾಡಿಸಿಕೊಳ್ಳಿ ಎಂದು ಹೇಳಿದರು. ಈಗ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ನಾನು ನನ್ನ ಮನೆಯನ್ನು ಕಟ್ಟಿಸುವುವಾಗ ಒಬ್ಬ ಕಂಟ್ರಾಕ್ಟರ್‌ದಾರನ ಜೊತೆಯಲ್ಲಿ ಒಂದು ಅಗ್ರಿಮೆಂಟ್ ಮಾಡಿಕೊಂಡು ಅವನು ಆ ಅಗ್ರಿಮೆಂಟ್ ಪ್ರಕಾರ ಆ ಕೆಲಸವನ್ನು ಮಾಡಿಸುವುದಕ್ಕಾಗುವುದಿಲ್ಲವೆಂದು ಹೇಳಿದರೆ ನಾನು ಆ ಕಂಟ್ರಾಕ್ಟದಾರನ ಮೇಲೆ ಕ್ರಮವನ್ನು ತೆಗೆದುಕೊಳ್ಳಬಹುದು. ತಾರಾಪುರ್ ಕಂಪೆನಿಯವರು ನಾವು ಆ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ನಮ್ಮ ರೈಟ್ಸ್ ಅನ್ನು ಸರೆಂಡರ್ ಮಾಡಿದ್ದೇವೆ. ಬೇರೆ ಟೆಂಡರ್ ಕರೆದು ಆ ಕೆಲಸವನ್ನು ಮಾಡಿಸಿಕೊಳ್ಳಿ ಎಂದು ಹೇಳಿದಾಗ ಸರ್ಕಾರದವರು ಆ ಕಂಟ್ರಾಕ್ಟದಾರನ್ನು ಕರೆದು ಇದು ಕಂಟ್ರಾಕ್ಟುದಾರರ ನೀತಿಯಲ್ಲ ಆ ಕೆಲಸದ ಸಂಬಂದದಲ್ಲಿ ಒಂದು ಒಪ್ಪಂದ ಇದೆ, ಒಂದು ಅಗ್ರಿಮೆಂಟ್ ಇದೆ, ಅದನ್ನು ಮುರಿಯುವುದಕ್ಕೆ ಸಾಧ್ಯವಿಲ್ಲ, ನೀವು ಆ ಒಪ್ಪಂದದ ಪ್ರಕಾರ ಆ ಕೆಲಸವನ್ನು ಮಾಡದೆ ಹೋದರೆ ನಿಮ್ಮ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಒಂದು ಎಚ್ಚರಿಕೆಯನ್ನು ಸರ್ಕಾರದವರು ಆ ಕಂಪೆನಿಯವರಿಗೆ ಕೊಡಬೇಕಾಗಿತ್ತು. ಅಂಥಾ ನಿಷ್ಠೆ ಈ ಸರ್ಕಾರಕ್ಕೆ ಎಲ್ಲಿಂದ ಬರುತ್ತದೆ? ಅವರು ಆ ರೀತಿ ಹೇಳಲಿಲ್ಲ ಹೊಸದಾಗಿ ಕರೆಯುತ್ತೇವೆಂದು ಹೇಳಿದರು. ಯಾವ ನ್ಯಾಯಾಸ್ಥಾನಕ್ಕೆ ಹೋಗಿದ್ದರೂ ಕೂಡ ಅಗ್ರಿಮೆಂಟ್ ಪ್ರಕಾರ ತಾರಾಪುರ ಕಂಪೆನಿಯವರು ಲಿಂಗನಮಕ್ಕಿ ಕೆಲಸವನ್ನು ಮುಗಿಸಬೇಕಾಗಿತ್ತು ಎಂದು ಹೇಳುತ್ತಿದ್ದರು. ಒಂದು ವೇಳೆ ಆ ಕೇಸಿಗೆ ನನ್ನನ್ನೇ ಲಾಯರಾಗಿ ವಾದಮಾಡಿ ಎಂದು ಸರ್ಕಾದವರು ಕೇಳಿದ್ದರೆ ನಾನು ಯಾವ ಕೋರ್ಟಿನಲ್ಲಿ ಬೇಕಾದರೂ ವಾದ ಮಾಡುವುದಕ್ಕೆ ಸಿದ್ಧನಾಗಿದ್ದೆ. ಸರ್ಕಾರದವರನ್ನು ನಾನು ಯಾವ ಫೀಜನ್ನು ಕೇಳುತ್ತಾ ಇರಲಿಲ್ಲ. ಆದರೆ ಸರ್ಕಾರ ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅನಂತರ ಟೆಂಡರ್ ಪ್ರಕರಣ ನಡೆಯುತ್ತದೆ. ಅದಕ್ಕೆ ಟೆಂಡರ್ ಕರೆದಾಗ ಹಲವಾರು ಟೆಂಡರುಗಳು ಸರ್ಕಾರಕ್ಕೆ ಬಂದುವು. ಅದರಲ್ಲಿ ಲೀಸ್ಟ್ ಟೆಂಡರು ಶ್ರೀಮಾನ್ ಎಂ. ಎಸ್. ರಾಮಯ್ಯನವರದಾಗಿತ್ತು. ಸರ್ಕಾರದಲ್ಲಿ ಎಷ್ಟರ ಮಟ್ಟಿಗೆ ದರ್ಪ ದಕ್ಷತೆ, ಒಂದು ಬಿಗಿ ಇದೆ. ಎಂಬುದು ಈ ಟೆಂಡರ್ ವ್ಯವಹಾರದಿಂದ ಅರ್ಥವಾಗುತ್ತದೆ. ಶ್ರೀ ಎಂ. ಎಸ್. ರಾಮಯ್ಯನವರಿಗೆ ಹೇಗೋ ಗೊತ್ತಾಯಿತು, ಅಶರೀರವಾಣಿ ಏನಾದರೂ ಅವರಿಗೆ ಹೇಳಿತೋಏನೋ ಅಷ್ಟು ಕಡಮೆ ರೇಟನ್ನು ಏತಕ್ಕೆ ಕೊಟ್ಟಿದ್ದೀರಿ ಅದರಿಂದ ಬಹಳ ದುಡ್ಡು ಹೋಗುತ್ತದೆ ಎಂದು. ಆಗ ಅವರು ತಕ್ಷಣ ಮಂತ್ರಿಗಳ ಜೊತೆಯಲ್ಲಿ, ಉಪಮಂತ್ರಿಗಳ ಜೊತೆಯಲ್ಲಿ ಪಿಸು ಪಿಸು ಮಾತನಾಡಿದರು. ಆ ಮೇಲೆ ನನ್ನ ಟೆಂಡರು ಸರಿಯಾಗಿಲ್ಲ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಸರ್ಕಾರಕ್ಕೆ ತಾರ್ ಕಳುಹಿಸಿದರು. ಆ ಮೇಲೆ ಸರ್ಕಾರದವರು ಟೆಂಡರುಗಳು ಯಾವುದೂ ಸರಿಯಾಗಿಲ್ಲ ರೇಟುಗಳನ್ನು ನೆಗೋಷಿಯೇಟ್ ಮಾಡೋಣ ಎಂದು ಹೇಳಿದರು. ಇದರಲ್ಲಿ ಏನು ಧರ್ಮ ಇದ್ಯೆ ಇದರಲ್ಲಿ ನೀತಿ ಇದೆಯೇ? ನ್ಯಾಯ ಇದೆಯೇ, ಟೆಂಡರುಗಳನ್ನು ಕರೆಯತಕ್ಕ ವುದ್ದೇಶವೇನು, ಟೆಂಡರುಗಳನ್ನು ಕರೆಯತಕ್ಕದ್ದು ಮಕ್ಕಳ ಆಟವೇ ಎಂದು ನಾನು ಕೇಳುತ್ತೇನೆ! ಸರ್ಕಾರದಲ್ಲಿ ಭದ್ರತೆ ಇದೆಯೇ? ಈ ವಿಷಯದಲ್ಲಿ ಸಾಮಾನ್ಯ ಜನರಿಗೆ ಅನುಮಾನ ಬರುವುದಕ್ಕೆ ಸಾಕಷ್ಟು ಕಾರಣ ಇದೆ. ನೆಗೋಷಿಯೇಟ್ ರೇಟ್ಸ್ ಏನಿದೆ ಅದಕ್ಕೂ ಟೆಂಡರ್ ರೇಟಿಗೂ ಇರತಕ್ಕ ಸಾಮರಸ್ಯವನ್ನು ಈ ಸಭೆಯ ಅವಗಾಹನೆಗೆ ವಿನಯದಿಂದ ತರುವುದಕ್ಕೆ ಇಚ್ಛಿಸುತ್ತೇನೆ. ಆಗ ಆ ಕೆಲಸಕ್ಕೆ ಅಲ್ಲಿ 3 ಬಾಬುಗಳಲ್ಲಿ ಟೆಂಡರ್ ಕರೆದರು. ಒಂದನೇಯದು ಗ್ರಾನಿಟ್ ಜೆಲ್ಲಿ. ಅದು 12 ಸಾವಿರ ಯೂನಿಟ್

(ಶ್ರೀ ಎಸ್. ಎಂ. ಕೃಷ)

ಆ ಕಾರ್ಯಕ್ಕೆ ಬೇಕಾಗಿತ್ತು. ಅದಕ್ಕೆ ಕೊನೆಯು ಟೆಂಡರು 80 ರೂಪಾಯಿ. ಅದರಲ್ಲಿ ಕುಂಭಕೋಣ ಮಾಡಿ ನೆಗೋಷಿಯೇಟ್ ಮಾಡಿದ ರೇಟು 100 ರೂಪಾಯಿ. ನೂರು ರೂಪಾಯಿ ನಂತೆ 12 ಸಾವಿರ ಯೂನಿಟ್ಟಿಗೆ 12 ಲಕ್ಷರೂಪಾಯಿ ಆಗುತ್ತದೆ. ಟೆಂಡರ್ ರೇಟ್ 80 ರೂಪಾಯಿ ಪ್ರಕಾರ 12 ಸಾವಿರ ಯೂನಿಟ್ಟಿಗೆ ಕೇವಲ 9 ಲಕ್ಷರೂಪಾಯಿಗಳಾಗುತ್ತವೆ. ಈ ರೇಟಿನ ವ್ಯತ್ಯಾಸದಿಂದ ಮೈಸೂರು ಜನತೆಯ ಖಜಾನೆಯಿಂದ ಈ ಒಂದು ಬಾಬಿನಲ್ಲಿ ಎರಡು ಲಕ್ಷ ನಲವತ್ತು ಸಾವಿರ ರೂಪಾಯಿಗಳನ್ನು ಕಂಟ್ರಾಕ್ಟ್‌ದಾರರಿಗೆ ಕೊಟ್ಟಿದ್ದಾರೆ. ಅದು ಮೊದಲನೆಯ ಐಟಮ್ ಎರಡನೆಯದು ಗ್ರಾನಿಟ್ ಜೆಲ್ಲಿ. ಅದು 40 ಸಾವಿರ ಯೂನಿಟ್‌ಗಳು ಬೇಕಾಗಿತ್ತು. ಅವರು ಟೆಂಡರ್ ರೇಟ್ ಕೋಟ್ ಮಾಡಿದ್ದು 80 ರೂಪಾಯಿ. ಅದರಂತೆ 32 ಲಕ್ಷ ರೂಪಾಯಿ ಆಗುತ್ತಿತ್ತು. ನೆಗೋಷಿಯೇಟ್ ರೇಟ್ 114 ರೂಪಾಯಿ. ಇದರಿಂದ ಮೈಸೂರು ಸರ್ಕಾರದ ಖಜಾನೆಗೆ ಆದಂಥ ನಷ್ಟ 13 ಲಕ್ಷ 60 ಸಾವಿರ ರೂಪಾಯಿ, ಆ ಮೇಲೆ ಮೂರನೇಯದು ಗ್ರೇನೇಜ್‌ಜೆಲ್ಲ 90 ಸಾವಿರ ಯೂನಿಟ್‌ಗಳು ಬೇಕಾಗಿದ್ದವು. ಟೆಂಡರ್ ರೇಟ್ 40 ರೂಪಾಯಿಗಳು. ನೆಗೋಷಿಯೇಟ್ ರೇಟ್ 100 ರೂಪಾಯಿ. ಇದಕ್ಕೆ 100–100 ಜಾಸ್ತಿ ಆಯಿತು. ಇವರು ಯಾರ ದುಡ್ಡನ್ನು ನೆಗೋಷಿಯೇಟ್ ಮಾಡಿದರು? ಅದು ಅವರ ಸ್ವಂತ ದುಡ್ಡಾಗಿದ್ದರೆ, ಆ ರೀತಿ ನೆಗೋಷಿಯೇಟ್ ಮಾಡುತ್ತಿದ್ದರೆ ಎಂದು ನಾನು ಕೇಳುತ್ತೇನೆ. ವಿನೋಬಾ ಭಾವೆಯವರು ಭೂದಾನ ಮಾಡಿದರೆ, ಇವರು ದುಡ್ಡುದಾನ ಮಾಡಿದರು. ಇದು ಯಾರ ದುಡ್ಡು? ಬಡ ಬೋರೇಗೌಡನ ದುಡ್ಡನ್ನು ಯಾರು ತಮ್ಮ ಚುನಾವಣಾ ನಿಧಿಗೆ ಸಹಾಯ ಮಾಡಿದರೋ ಅಂಥವರಿಗೆ ದಾನ ಮಾಡಿದ್ದಾರೆ. ಇದು ಸರಿಯೇ ಎಂದು ನಾನು ಕೇಳುತ್ತೇನೆ. ಬಡ ಬೋರೇಗೌಡನ ದುಡ್ಡನ್ನು ಹಾಳುಮಾಡುತ್ತಿದ್ದಾರೆ. ಮೈಸೂರು ಬಡ ಬೋರೇಗೌಡನಿಗೆ ಆಗಿರತಕ್ಕ ನಷ್ಟ ಅದರಿಂದ ದೇಶಕ್ಕೆ ಆಗಿರುವ ಪ್ರತಿಕೂಲ ಹಾಗೂ ಕಂಟ್ರಾಕ್ಟುದಾರನಿಗೆ ಉತ್ಪತ್ತಿ 70 ಲಕ್ಷ ರೂಪಾಯಿಗಳು ಎಂದು ಹೇಳುವುದಕ್ಕೆ ನಾನು ಬಹಳ ವ್ಯಸನ ಪಡುತ್ತೇನೆ.

5-00 P.M.

ಈ ರೀತಿ ಸರ್ಕಾರವನ್ನು ನಡೆಸಿಕೊಂಡು ಹೋದರೆ ಮೈಸೂರು ಸಂಸ್ಥಾನ ಬಹು ಬೇಗ ಬರಡಾಗುತ್ತದೆ. ಬಹುಬೇಗ ದಿವಾಳಿಯಾಗುತ್ತದೆ. ಇಂಥವರ ಕೈಗೆ ರಾಜ್ಯವನ್ನು ಕೊಟ್ಟು ನಮ್ಮ ದೇಶದ ಖಜಾನೆ ಬರಿದಾಗಿ ನಮ್ಮ ದೇಶ ದಿವಾಳಿಯಾಗುತ್ತದೆ, ಈ ಶರಾವತಿಯ ಕರ್ಮಕೂಪಕ್ಕೆ ಕಾರಣರಾದವರು ಯಾರೇ ಆಗಲೀ, ಎಷ್ಟೇ ದೊಡ್ಡವರಾಗಲೀ, ಅವರ ಹಿಂದಿನ ಚರಿತ್ರೆ ಎಷ್ಟೇ ನಿರ್ಮಲವಾಗಿರಲಿ ಅವರು ತಮ್ಮ ಅಭಿಮಾನದಿಂದ ಆದರೂಕೂಡ, ತಮ್ಮ ಹಿತದೃಷ್ಟಿಇಂದ ಆದರೂ ಕೂಡ ಒಂದು ನಿಷ್ಪಕ್ಷಪಾತವಾದ ವಿಚಾರಣೆ ಸಮಿತಿಯನ್ನು ನೇಮಕಮಾಡಿ, ಯಾವಮಂತ್ರಿ ಮಂಡಲ ಈ ಶರಾವತಿ ಬಗ್ಗೆ ಈ ರೇಟ್‌ಗಳನ್ನು ಪಾಸ್‌ಮಾಡಿತೋ ಆ ಮಂತ್ರಿಗಳು ಈ ದಿವಸ ಈ ಸಭೆಯ ಮುಂದೆ ಹೇಳಿಕೆಕೊಡಲಿ," ಈ ಅಪಾದನೆ ನಿಂದೆಗಳಿಂದ ವಿಮುಕ್ತನಾಗಬೇಕಾದರೆ ಒಂದು ನಿಸ್ಪಕ್ಷಪಾತವಾದ ವಿಚಾರಣಾ ಸಮಿತಿಯಮುಂದೆ ನನ್ನನ್ನು ನಿಲ್ಲಿಸಿ ನಿರಪರಾಧಿ ಎಂದು prove ಮಾಡುತ್ತೇನೆ '' ಎಂದು ಹೇಳತಕ್ಕ ಆತ್ಮಶಕ್ತಿ ಅವರಿಗೆ ಬರಲಿಲ್ಲವಲ್ಲಾ ಎಂದು ನನಗೆ ವ್ಯಸನವಾಗುತ್ತದೆ. ಈ ಶರಾವತಿ ಪ್ರಕರಣವನ್ನು ನಾವು ಇಲ್ಲಿಗೇ ಬಿಡುವುದಿಲ್ಲ. ಇದರಲ್ಲಿ ಮೈಸೂರಿನ ಜನರಿಗೆ ಬಹುದೊಡ್ಡ ಅಪಚಾರನಡೆದಿದೆ. ಇದನ್ನು ಮೈಸೂರಿನ ಜನ ಕ್ಷಮಿಸುವುದಿಲ್ಲ. ಬಹುಶಃ ಮುಂದೆ ನಡೆಯತಕ್ಕ ಚುನಾವಣೆಗಳಲ್ಲಿ ಮೈಸೂರಿನ ಜನ ಈ ವಿಚಾರದಲ್ಲಿ ಒಂದು ನಿರ್ಣಯವನ್ನು ಕೊಡುತ್ತಾರೆ. ಆದರೆ ತಕ್ಷಣದಲ್ಲಿ ಈ ಶಾಸನ ಸಭೆಯ ಜವಾಬ್ದಾರಿಯುತ ಸದಸ್ಯರಾದ ನಾವು ಮುಖ್ಯಮಂತ್ರಿಯವರನ್ನು ಬಹಳವಿನಯದಿಂದ ಕೇಳುತ್ತೇವೆ, ಸ್ವಾಮಿ ನಿಮಗೆ ಇರತಕ್ಕ ಅಡಚಣೆಯಾದರೂ ಏನು : ಅಡ್ಡಿ ಆತಂಕವಾದರೂ ಏನು : ನಾವು ಇಲ್ಲಿ ಜವಾಬ್ದಾರಿಯುತವಾಗಿ ಕೆಲವು ಆರೋಪಣೆಗಳನ್ನು ಮಾಡುತ್ತಾ ಇದ್ದೇವೆ. ನೀವು ಅವನ್ನು ಅಲ್ಲಗಳೆಯುತ್ತಾ ಇದ್ದೀರಿ, ನಮ್ಮಿಬ್ಬರಿಗೂ ವ್ಯಾಜ್ಯ ಏಕೆ? ಒಂದು ನಿಷ್ಪಕ್ಷಪಾತವಾದ ವಿಚಾರಣಾಮಂಡಲಿಯನ್ನು ನೇಮಕ ಮಾಡಿ ಅದು ಇದರಬಗ್ಗೆ ಸೂಕ್ತವಾದ, ನ್ಯಾಯತೀರ್ಮಾನವನ್ನು ಕೊಟ್ಟಮೇಲೆ ಅದಕ್ಕೆ ನಾವು, ನೀವೂ ಇಡೀ ಮೈಸೂರಿನ ಜನತೆ ಅಡಿಯಾಳಾಗಿ ಬಾಳೋಣ ಎಂದು. ಈ ವಿಚಾರವನ್ನು ನಮ್ಮ ಮುಖ್ಯಮಂತ್ರಿಯವರು ಬಹಳ ಸಾವಧಾನದಿಂದ ಪರಿಶೀಲನೆ ಮಾಡಬೇಕು ಎಂದು ಸೂಚನೆಮಾಡುತ್ತೇನೆ.

ಈ ಅವಿಶ್ವಾಸ ನಿರ್ಣಯದ ಎರಡನೇ ವಿಚಾರ ವಿದ್ಯಾಮಂತ್ರಿಗಳನ್ನು ಕುರಿತದ್ದಾಗಿದೆ. ವಿದ್ಯಾಮಂತ್ರಿಗಳು ಈಗತಾನೆ ಈ ಸಭೆಯಲ್ಲಿ ತಮ್ಮ ಇತ್ತೀಚಿನ ಧೋರಣೆಯನ್ನು ಸಮರ್ಥನೆ ಮಾಡಿಕೊಳ್ಳುತ್ತಾ ಇದ್ದರು. ಅವರನ್ನು ಸಮರ್ಥನೆ ಮಾಡುವವರಲ್ಲಿ ಶ್ರೀಮಾನ್ ಅಣ್ಣಾರಾಯರೂ ಕೂಡ ಒಬ್ಬರು. ಈ ವಿದ್ಯಾಮಂತ್ರಿಗಳವರ ಹೇಳಿಕೆಗಳು ಒಂದಕ್ಕೊಂದಕ್ಕೆ ಅಸಂಬದ್ಧವಾಗಿವೆ, ಒಂದಕ್ಕೊಂದಕ್ಕೆ ಯಾವವಿಧವಾದ ಸಂಬಂಧವಾಗಲೀ ಬಾಂಧವ್ಯವಾಗಲೀ ಇಲ್ಲ ಎನ್ನುವ ಮಾತನ್ನು ಶ್ರೀಮಾನ್ ಶಿವಪ್ಪನವರು ಹೇಳಿದ್ದಾರೆ. ನಾನಾದರೂಕೂಡ ಹೇಳುತ್ತೇನೆ ಶ್ರೀಮಾನ್ ಕಂಠಿಯವರು ಹೇಳಿರುವ ಹೇಳಿಕೆಗಳನ್ನು ಒಂದರಪಕ್ಕದಲ್ಲಿ ಒಂದನ್ನಿಟ್ಟರೆ ಈ ಸಭೆಯಲ್ಲಿರತಕ್ಕ ಯಾರಾದರೂಕೂಡ ನೋಡಿ ಒಂದಕ್ಕೊಂದಕ್ಕೆ ಎಷ್ಟುಮಟ್ಟಿಗೆ ಸಮರಸ್ಯ ಇದೆ ಎಂಬುದನ್ನು ನಾವು ಯೋಚನೆ ಮಾಡಬಹುದಾಗಿತ್ತು. ನಾವು ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ಕೊಡಬಹುದಾಗಿತ್ತು. ಎಷ್ಟು ಜನ ಈ ಸಭೆಯ ಕಾಂಗ್ರೆಸ್ ಸದಸ್ಯರು ನನ್ನ ಜೊತೆಯಲ್ಲಿ ಹೇಳಿಲ್ಲ? ವಿದ್ಯಾಮಂತ್ರಿಗಳು ಅಸಂಬದ್ಧ ಹೇಳಿಕೆ ಕೊಡತ್ತಾ ಇದ್ದಾರೆ ಎಂದು. ಯಾವ ಕಾಂಗ್ರೆಸ್ ಸ್ನೇಹಿತರು ಹೊರಗೆ ಈ ವಿದ್ಯಾಮಂತ್ರಿಗಳ ಬಗ್ಗೆ ಏನು ಹೇಳುತ್ತಾರೆಯೋ ಅದನ್ನೇ ಸಭೆಯ ಒಳಗೆ ಬಂದರೆ ಹೇಳತಕ್ಕ ಧೈರ್ಯವಿಲ್ಲವಲ್ಲಾ ಎಂದು ಪಾಶ್ಚತ್ತಾಪ ಪಡಬೇಕಾಗಿದೆ. ಮೊಟ್ಟಮೊದಲನೆಯದಾಗಿ ಈ ವಿದ್ಯಾಮಂತ್ರಿಗಳು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಂದಾಗ ಈ ಟೆಂಪೊರೆರಿ ಲೆಕ್ಚರರ್ಸ್ ವಿಚಾರದಲ್ಲಿ ವಿದ್ಯಾಮಂತ್ರಿಗಳಲ್ಲದೇ ಆಗ ಅವರು ಮುಖ್ಯಮಂತ್ರಿಗಳೂಕೂಡ ಆಗಿದ್ದರು-ಒಂದು ಆಶ್ವಾಸನವನ್ನು ಈ ಸಭೆಯಮುಂದೆ ಕೊಟ್ಟರು. ಈ ಸಭೆಯವರದಿಯನ್ನು ಯಾರಾದರೂ ನೋಡಿದರೆ ಗೊತ್ತಾಗುತ್ತದೆ ಅದು ನನ್ನಹತ್ತಿರಇದೆ. ವಿದ್ಯಾಮಂತ್ರಿಗಳು ಕೊಟ್ಟಂಥ ಭರವಸೆ ಏನೆಂದರೆ ಈ ಸಭೆಯಮುಂದೆ-ಇದು ಒಂದು ನ್ಯಾಯ ದೇಗುಲ ಎಂದು ತಿಳಿದುಕೊಂಡಿದ್ದೇನೆ-ಇದರಮುಂದೆ ಕೊಟ್ಟಂಥ

ಭರವಸೆ ಏನೆಂದರೆ ಲೆಕ್ಚರರ್ಸ್‌ನ್ನು ಮುಂದಿನ ವರ್ಷ ನಾವು ಕನ್ಫರ್ಮ್ ಮಾಡುತ್ತೇವೆ, ಅವರ ಸರ್ವೀಸಸ್ ರೆಗ್ಯೂಲರೈಜ್ ಮಾಡುತ್ತೇವೆ, ಹಿಂದಿನಿಂದ ಏನು ನಡೆದುಕೊಂಡು ಬಂದಿದೆ, ಆ ಪದ್ಧತಿ ತಪ್ಪಿಹೋಗಬೇಕು, ಎಂಟು ವರ್ಷ ಏಳು ವರ್ಷ, ಆರು ವರ್ಷಗಳಕಾಲ ಹಂಗಾಮಿಯಾಗಿ ಅಧ್ಯಾಪಕರನ್ನು ನೇಮಿಸತಕ್ಕ ನೀತಿಯನ್ನು ಒಪ್ಪುವುದಿಲ್ಲ ಎಂದು ಶ್ರೀಮಾನ್ ಕಂಠಿಯವರು ಅಪ್ಪಣೆಕೊಡಿಸಿದ್ದರು. ಅನಂತರಾ ಆ ಅಧಿವೇಶನ ಆಯಿತು, ಮತ್ತೊಂದು ಅಧಿವೇಶನ ಬಂತು ಆಗಲೂ ಕೂಡ ಯಾವುದಾದರೂ ಸಂದರ್ಭದಲ್ಲಿ ನಾವು ಈ ಮಾತನ್ನು ಹೇಳಿದಕಾಲಕ್ಕೆ ಮತ್ತೊಂದು ರೀತಿಯ ಭರವಸೆಯನ್ನು ಕೊಟ್ಟರು, ಕಾಲೇಜು ಪ್ರಾರಂಭವಾದ ಮೊದಲನೆಯ ದಿವಸವೇ ನೂರ ಹನ್ನೊಂದು ಜನ ಹಂಗಾಮಿ ಅಧ್ಯಾಪಕರನ್ನು ಬರ್‌ತರ್ಫ ಮಾಡಿದ್ದರು. ಬಡ್ಜೆಟ್ ಅಧಿವೇಶನದಲ್ಲಿ ನಾವು ಬಡ್ಜೆಟ್ ಚರ್ಚೆಯ ಕಾಲಕ್ಕೆ ವಿದ್ಯಾಮಂತ್ರಿಗಳ ಗಮನವನ್ನು ಈ ಬಗ್ಗೆ ಈ ನೀತಿಯ ಬಗ್ಗೆ, ಈ ಧೋರಣೆಯ ಬಗ್ಗೆ ಸೆಳೆದಾಗ ಅವರು ಅಪ್ಪಣೆ ಕೊಡಿಸಿದರು ಅವರನ್ನು ನಾವು ಡೆಮಾನ್‌ಸ್ಟ್ರೇಟರ್ಸ್, ಟ್ಯೂಟರ್ಸ್ ಆಗಿ ಮಾಡುತ್ತೇವೆ ಎಂದು. ತಮ್ಮನ್ನು ಪ್ರಶ್ನೆಮಾಡುತ್ತೇನೆ, ಸಭಾಪತಿಗಳೇ, ತಮ್ಮ ಮೂಲಕ ಈ ಸಭೆಯ ಪ್ರತಿಯೊಬ್ಬ ಸದಸ್ಯರಿಗೂ ಪ್ರಾರ್ಥನೆಮಾಡುತ್ತೇನೆ, ಎಷ್ಟುಮಟ್ಟಿಗೆ ಒಂದು ಉತ್ತರಕ್ಕೂ ಇನ್ನೊಂದು ಉತ್ತರಕ್ಕೂ ಸಂಬಂಧವಿದೆ ಎನ್ನುವುದು, ಸಾಮರಸ್ಯವಿದೆ ಎನ್ನುವುದನ್ನು ಅವರೇ ತೀರ್ಮಾನ ಮಾಡಿಕೊಳ್ಳಬೇಕಾಗಿದೆಯಲ್ಲವೇ ಎಂದು! ಇದು ವಿದ್ಯಾ ಮಂತ್ರಿಗಳು ಮಾಡಿರತಕ್ಕ ದೊಡ್ಡ ತಪ್ಪು. ವಿದ್ಯಾ ಮಂತ್ರಿಗಳು ವಿಶ್ವವಿದ್ಯಾನಿಲಯಕ್ಕೆ ಒಂದು ಬಲವತ್ತರವಾದ lead ಕೊಡಬೇಕು ಮಾರ್ಗದರ್ಶನ ಮಾಡಬೇಕು ಅದು ಮಾಡುತ್ತಿಲ್ಲ. ವಿದ್ಯಾಮಂತ್ರಿಗಳು ಈ ವಿಷಯದಲ್ಲಿ ಇವತ್ತು ಸೋತಿದ್ದಾರೆ, ಅಸಮರ್ಥರಾಗಿದ್ದಾರೆ. ಆದ್ದರಿಂದ ಈ ಬಗ್ಗೆ ಈ ಸಭೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗಿದೆ. ನಿರ್ದಿಷ್ಟವಾದ ಧೋರಣೆಯನ್ನು ತೆಗೆದುಕೊಳ್ಳ ಬೇಕಾಗಿದೆ. ವಿದ್ಯಾಮಂತ್ರಿಗಳು ಸಿಕ್ಕಿದಹಾಗೆ, ಸಮಂಜಸವಲ್ಲದ, ಅಸಂಬಂಧ್ಧವಾದ ಹೇಳಿಕೆಗಳನ್ನು ಕೊಡುವ ನೀತಿಯಿಂದ ಈ ಸರ್ಕಾರಕ್ಕೆ ಒಳ್ಳೆಯದಾಗುತ್ತದೆಯೇ ಎಂಬ ವಿಚಾರವನ್ನು ನಮಗಿಂತಲೂ ಹೆಚ್ಚಾಗಿ ಸರ್ಕಾರದಲ್ಲಿರತಕ್ಕಾ ನೀವೇ ಯೋಚನೆಮಾಡಿ. ನಮಗೆ ಈ ಸರ್ಕಾರ ಹೋದರೆ ಬೇರೆಸರ್ಕಾರ ಬರುತ್ತದೆ. ಆ ಪ್ರಶ್ನೆ ಅಲ್ಲ ಈ ಸಕ್ಕಾರವನ್ನು ಉಳಿಸಿಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಬೇಕು, ಆ ದೃಷ್ಟಿಯಿಂದ ನೋಡಿದರೆ ಈ ಸರ್ಕಾರ ಖಂಡಿತವಾಗಿಯೂ ಉಳಿಯುವುದಿಲ್ಲಎಂದು ಘಂಟಾ ಘೋಷವಾಗಿ ಹೇಳಬಯಸುತ್ತೇನೆ.

ಸ್ವಾಮಿ, ಎಲ್ಲಕ್ಕಿಂತಲೂ ಮಿಗಿಲಾಗಿ ಈ ವಿದ್ಯಾಮಂತ್ರಿಗಳ ಬಗ್ಗೆ ನನ್ನ ಒಂದು ಪ್ರಬಲವಾದ ಅಪಾದನೆ ಏನೆಂದರೆ ಈ ಸರ್ಕಾರಿ ಕಾಲೇಜುಗಳ ನಿರ್ದೇಶನ ಮಾಡತಕ್ಕ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜ್ಯುಕೇಷನ್ ಯಾರಿದ್ದಾರೆ ಆ ಸರ್ವಾಧಿಕಾರಿ–ಸರ್ವಾಧಿಕಾರಿಗಳ ಚರಿತ್ರೆಯಲ್ಲಿಯೇ ಬಂದರು ಆಳಿದರು–ಆದರೆ ಈ ಒಬ್ಬ ಪುಟ್ಟ ಸವಾಧಿಕಾರಿ ಇವತ್ತು ಮೈಸೂರು ಸಂಸ್ಥಾನದ ವಿದ್ಯಾನೀತಿಯನ್ನು ನಿರ್ದೇಶನ ಮಾಡುವ ರೀತಿಯಲ್ಲಿ ಮಾತನಾಡುತ್ತಾ ಇದ್ದಾರೆ. ನನಗೆ ಬಹಳ ನಾಚಿಕೆಯಾಗುತ್ತದೆ. ಸ್ವಾಮಿ ನಾನೂ ಕೂಡ ದೇಶ, ವಿದೇಶಗಳಿಗೆ ಹೊಗಿಬಂದಿದ್ದೇನೆ. ನನಗೆ ಕೋಮುವಾರು ಭಾವನೆ ಲವಲೇಶವೂ ಇಲ್ಲ. ನನಗೆ ಜಾತಿ ಇಲ್ಲ. ಆದ್ದರಿಂದ ಈ ಮಾತನ್ನು ಹೇಳುವಾಗ ಬಹಳ ದೀರ್ಘವಾಗಿ ಆಲೋಚನೆ ಮಾಡಿ ಹೇಳುತ್ತಾ ಇದ್ದೇನೆ. ಸ್ವಾಮಿ ಒಬ್ಬ ಸಣ್ಣ ಸರ್ಕಾರಿ ಅಧಿಕಾರಿಯನ್ನು ಸರ್ವಾಧಿಕಾರಿ ಎಂದು ಏಕೆ ಕರೆದೆನೆಂದರೆ ಈ ಸರ್ಕಾರಿ ಅಧಿಕಾರಿಗಳು ತಮ್ಮ ಆಫೀಸಿನಲ್ಲಿ ಬಂದಜನಕ್ಕೆಲ್ಲಾ ಇದು ಒಂದು ಕೋಮಿನರಾಜ್ಯ ಈ ಕೋಮಿನವರಿಗೆ ಏನು ಬೇಕಾದರೂ ಮಾಡುತ್ತೇನೆ, ಕಂಠಿಯವರು ನಮ್ಮವರು, ಮುಖ್ಯಮಂತ್ರಿಗಳು ನಮ್ಮವರು ಎನ್ನುವುದನ್ನು ಎಷ್ಟೋಜನ ಕೇಳಿಕೊಂಡು ಬಂದು ನನಗೆ ಹೇಳಿದ್ದಾರೆ. ಇದನ್ನು ಬಹಳ ವ್ಯಸನದಿಂದ ಈ ಸಭೆಯಲ್ಲಿ ಹೇಳಬೇಕಾಗಿದೆ. ಜಾತ್ಯತೀತ ರಾಷ್ಟ್ರವನ್ನು ಸೃಷ್ಟಿಮಾಡುತ್ತೇವೆ. ಜಾತ್ಯತೀತ ರಾಜ್ಯವನ್ನು ಕಟ್ಟುತ್ತೇವೆ ಎಂದು ರಾಜ್ಯಾಂಗಕ್ಕೆ ಇವತ್ತಿನದಿವಸ ಕಟ್ಟುಬಿದ್ದಿರುವಾಗ, ಇಂಥಾ ಸಣ್ಣ ಪುಟ್ಟ ಅಧಿಕಾರಿಗಳಿಗೆ ನೀವು ರಕ್ಷಣೆಕೊಡುತ್ತಾ ಹೋದರೆ ನಿಮ್ಮ ದೇಶ ಎತ್ತ ಸಾಗಿದೆ, ಎತ್ತ ಹೋಗುತ್ತಾ ಇದ್ದೇವೆ; ಅಭಿವೃದ್ಧಿಯ ಮಾರ್ಗದಲ್ಲಿ ಹೋಗುತ್ತಾ ಇದ್ದೇವೆಯೋ ಅಥವಾ ಅವನತಿಯ ದಿಶೆಯಲ್ಲಿ ಹೋಗತ್ತಾ ಇದ್ದೇವೆಯೋ ಎಂದು ಅನುಮಾನಬರದೇ ಇರದು. ಖಂಡಿತವಾಗಿಯೂ ಇಂಥಾ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕ ನೀತಿಯನ್ನು ನಾವು ಈ ಸಭೆಯಲ್ಲಿ ಖಂಡಿಸಲೇ ಬೇಕಾಗಿದೆ, ಇಂಥಾ ಅಧಿಕಾರಿಗಳನ್ನು ಆದಷ್ಟುಬೇಗ ಸರ್ಕಾರದಿಂದ ಹೊರಗೆ ಹಾಕಬೇಕು. ಒಟ್ಟಿನಲ್ಲಿ ಸೂಕ್ತವಾದ ಕಾರ್ಯಕ್ರಮ ಸರ್ಕಾರ ಕೈಕೊಳ್ಳಬೇಕೆಂದು ಈ ಸಭೆಯ ಮುಂದೆ ಪ್ರತಿಪಾದಿಸುತ್ತೇನೆ. ಏಕೆಂದರೆ ಹಿಂದೆ ಮಹಮದ್‌ಬಿನ್ ತೊಗಲಕ್ ರಾಜ್ಯಭಾರ ಮಾಡಿದುದನ್ನು ಚರಿತ್ರೆಯಲ್ಲಿ ಓದಿದ್ದೇವೆ, ಅವನ ಹೆಸರು ಇವತ್ತಿಗೂಕೂಡ ಹೇಳುತ್ತೇವೆ, ಮಹಮದ್ ಬಿನ್ ತೊಗಲಕ್ ಸರ್ಕಾರ ಅಂತ. ಇವತ್ತೂ ಆ ಅಧಿಕಾರಿ ತೊಗಲಕ್ ರಾಜ್ಯವನ್ನು ಮೈಸೂರು ಸಂಸ್ಥಾನದ ಸರ್ಕಾರಿ ಕಾಲೇಜುಗಳಲ್ಲಿ ಮಾಡುವುದಕ್ಕೆ ಹೊರಟಿರುವಂತೆ ಕಾಣುತ್ತದೆ. ಮೊನ್ನೆತಾನೆ ಪೇಪರ್‌ನಲ್ಲಿ ಓದಿದ್ದೇವೆ—ಒಂದು ಕಾಲೇಜಿನ ಪ್ರಿನ್ಸಿಪಾಲರನ್ನು ಅವರು ಯಾವಸಬ್ಜೆಕ್ಟ್ ಟೀಚ್‌ಮಾಡುತ್ತಾರೋ ಆ ಸಬ್ಜೆಕ್ಟ್ ಟೀಚ್‌ಮಾಡದೇ ಇರತಕ್ಕ ಇನ್ನೊಂದು ಇನ್‌ಸ್ಟಿಟ್ಯೂಷನ್‌ಗೆ ವರ್ಗಮಾಡಿ ಆ ಆದ್ಯಾಪಕರು ಹೈಕೋರ್ಟಗೆ ಹೋಗಿ ಹೈಕೋರ್ಟ್‌ನಲ್ಲಿ ಡೈರೆಕ್ಟರ್ ಆಫ್ ಕೊಲಿಜಿಯೆಟ್ ಎಜ್ಯುಕೇಷನ್ ಅವರು ಆರ್ಡರ್ ಮಾಡಿರುವುದು ತಪ್ಪು ಎಂದು ತೀರ್ಮಾನವಾಗಿ ಕೂಡಲೇ ಆ ಬಗ್ಗೆ ಒಂದು ತಡೆಯಾಜ್ಞೆಯನ್ನು ಕೂಡ ಕೊಟ್ಟಿರುವುದು ಸರ್ಕಾರಕ್ಕೆ ಮಾನಬರತಕ್ಕ ಕೆಲಸವೇ; ಸರ್ಕಾರಕ್ಕೆ ಗೌರವತರತಕ್ಕ ಕೆಲಸವೇ ಎಂದು ಪ್ರಶ್ನಿಸ ಬೇಕಾಗಿದೆ.

ಇಂತಹ ಹಲವಾರು ನಿದರ್ಶನಗಳಿವೆ. ಸೆಂಟ್ರಲ್ ಕಾಲೇಜಿನಲ್ಲಿ ಈದಿವಸ ಒಂದು ಸಣ್ಣ ಪಾಳೆಯಗಾರಿಕೆ ನಡೆಯುತ್ತಿದೆ, ಕೊಲಿಜಿಯೇಟ್ ಡೈರೆಕ್ಟರು ಸಾಯಂಕಾಲದ ಮೇಲೆ ಮಸಲತ್ತು ಮಾಡುತ್ತಿದ್ದಾರೆ. ಯಾವ ಅಧ್ಯಾಪಕರನ್ನು ಅಥವಾ ಲೆಕ್ಚರರನ್ನು ಬೇರೆ ಕಡೆಗೆ ಹಾಕಬೇಕು, ಯಾರನ್ನು ತಮ್ಮ ಒಡ್ಡೋಲಗದಲ್ಲಿಟ್ಟುಕೊಳ್ಳಬೇಕು ಎಂಬುದರ ಕಡೆಗೇ ಅವರ ಗಮನ ಜಾಸ್ತಿ. ಅವರನ್ನು ಇಂದ್ರ, ದೇವೇಂದ್ರ ಎಂದು ಹೊಗಳುವವರಿಗೆ ಅನುಕೂಲ. ಅಂಥವರೆಲ್ಲ ಸೇರಿ ಕೊಲಿಜಿಯೇಟ್ ಡೈರೆಕ್ಟರನ್ನು ಆಕಾಶಕ್ಕೆ ಏರಿಸಿದ್ದಾರೆ. ರಷ್ಯಾದಲ್ಲಿ ಟಿಟೋರವರನ್ನು ಸ್ಪೇಸ್‌ಗೆ ಕಳುಹಿಸಿದಹಾಗೆ ಈ ಡೈರೆಕ್ಟರನ್ನೇಕೆ ಕಳುಹಿಸಬಾರದಾಗಿತ್ತು ಎಂದು ನನಗನ್ನಿಸುತ್ತದೆ. ಇಚ್ಛೆಬಂದಹಾಗೆ ಸಣ್ಣತನದಿಂದ ಈ ಒಬ್ಬ ಅಧಿಕಾರಿ ಸರ್ಕಾರಿ ಕಾಲೇಜುಗಳ ಕಾಯಿದೆ ನಿರ್ವಹಣೆ ಮಾಡುವುದು ಈ ಸಭೆಗೆ ಮತ್ತು ಈ ದೇಶಕ್ಕೆ ಮರ್ಯಾದೆ ತರುವು

(ಶ್ರೀ ಎಸ್. ಎಂ. ಕೃಷ್ಣ)

ದಿಲ್ಲ. ಈ ವಿಷಯವನ್ನು ಹೇಳದಿದ್ದರೆ ಕರ್ತವ್ಯ ಲೋಪಮಾಡಿದಂತಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಇನ್ನು ಸರ್ಕಾರ ಮೂರು ಜನರನ್ನು ಮೇಲ್ಮನೆಗೆ ನಾಮಕರಣಮಾಡಿದೆ. ತಿಳಿದಂಥವರೂ, ಶಾಸ್ತ್ರಜ್ಞರೂ ಆದಂಥ ಮಾನ್ಯ ಕಾನೂನು ಮಂತ್ರಿಗಳು ಈಗಾಗಲೆ ಇದನ್ನು ಡಿಫೆಂಡ್ ಮಾಡಿದ್ದೇನೆ, ಹೊಸದಾಗಿ ಏನೂ ಹೇಳಬೇಕಾಗಿಲ್ಲ ಎಂದು ಹೇಳಿದರು. ನಾವು ಟೀಕೆ ಮಾಡುವಾಗ............

ಶ್ರೀ ಎಂ. ವಿ. ರಾಮರಾವ್.—ಆಕ್ಷೇಪಣೆಗೆ ಜವಾಬು ಹೇಳಿದ್ದೇನೆಂದು ಹೇಳಿದೆ.

ಶ್ರೀ ಎಸ್. ಎಂ. ಕೃಷ್ಣ.—ನಾನು ಹೇಳುವುದಕ್ಕೂ ಅವರು ಹೇಳುವುದಕ್ಕೂ ಒಂದು ಕೂದಲು ಎಳೆಯಷ್ಟು ಮಾತ್ರ ವ್ಯತ್ಯಾಸವಿದೆ. ಅವರು ಯಾವ ಆಧಾರದ ಮೇಲೆ ಹೇಗೆ ಸಮರ್ಥನೆ ಮಾಡಿದರು ಎಂದು ಕೊಂಚ ಅನುಮಾನ ಬರುತ್ತಿದೆ. ವಿರೋಧಪಕ್ಷದ ನಾಯಕರ ಬಗ್ಗೆ ಗೌರವವಿದೆಯೆಂದು ಮೊದಲೇ ಹೇಳಿದರು. ಅವರಿಗೆ ಸಭೆ ಗೌರವ ಕೊಡುತ್ತದೆ. ರಾಜ್ಯಾಂಗಕ್ಕೆ ಅಪಚಾರವಾಗುವ ಕೆಲಸಕ್ಕೆ ಸಮರ್ಥನೆ ಮಾಡುವಾಗ ಅವರಲ್ಲಿರುವ ಗೌರವ ಕೊಂಚ ಕಡಿಮೆಯಾಗುತ್ತದೆ ಎಂದು ಹೇಳುತ್ತೇನೆ. ರಾಜ್ಯಾಂಗದ ಒಂದು ಸಣ್ಣ ಭಾಗವನ್ನು ನಮ್ಮ ನಾಯಕರು ಸಭೆಯ ಅವಗಾಹನೆಗೆ ತಂದರು. ಮೇಲ್ಮನೆ ಸದಸ್ಯರನ್ನು ಸರ್ಕಾರ ನಾಮಕರಣ ಮಾಡುವಾಗ ಯಾವ ನೀತಿಯನ್ನನು ಸರಿಸಬೇಕು ಎಂದು ಸೂಚಿಸಲು ರಾಜ್ಯಾಂಗದಲ್ಲಿ ಒಂದು ಆರ್ಟಿಕಲ್ ಹಾಕುವಾಗ ಏನು ಚರ್ಚೆಯಾಗಿದೆಯೋ ಅದರಕಡೆ ಗಮನಕೊಡಬೇಕು. 171 ನೆಯ ವಿಧಿಯನ್ನು ಭಾರತದ ರಾಜ್ಯಾಂಗಕ್ಕೆ ಅಳವಡಿಸುವಾಗ ಒಂದು ಪಕ್ಷದ ಸದಸ್ಯರನ್ನು ಮಾತ್ರ ಮೇಲ್ಮನೆಗೆ ತುಂಬುವ ಸಾಹಸಮಾಡುವುದಕ್ಕೆ, ಅವಕಾಶ ಕೊಡುವುದಕ್ಕೆ ಆಗ 171 ನೆಯ ವಿಧಿಯನ್ನು ಸೇರಿಸಲಿಲ್ಲ ಎಂದು ಘಂಟಾ ಘೋಷವಾಗಿ ಹೇಳುತ್ತೇನೆ. ಈ ಮಾತನ್ನು ಮಾನ್ಯ ನ್ಯಾಯ ಮಂತ್ರಿಗಳು ಒಪ್ಪುತ್ತಾರೆಂದು ಭಾವಿಸುತ್ತೇನೆ.

ಶ್ರೀ ಎಂ. ವಿ. ರಾಮರಾವ್.—ಒಪ್ಪುವುದಿಲ್ಲ,

ಶ್ರೀ ಎಸ್. ಎಂ. ಕೃಷ್ಣ.—ಕಲೆಗೆ, ಸಂಸ್ಕೃತಿಗೆ, ವಿದ್ಯೆಗೆ, ಸಾಹಿತ್ಯಕ್ಕೆ ಗೌರವವನ್ನು ಕೊಡುವುದಕ್ಕೆ, ಸಾಹಿತಿಗಳು, ವಿಜ್ಞಾನಿಗಳು, ಕಲೆಗಾರರು ಮೇಲ್ಮನೆಯಲ್ಲಿ ಕಳಶಪ್ರಾಯರಾಗಿರಲಿ ಎಂಬ ದೃಷ್ಟಿಯಿಂದ 171 ನೆಯ ವಿಧಿಯನ್ನು ರಾಜ್ಯಾಂಗ ನಿರ್ಮಾಣಮಾಡಿದಂಥ ಜನ ಇಟ್ಟಿರುವಾಗ ಇವತ್ತಿನ ದಿವಸ ಮೈಸೂರು ಸರ್ಕಾರ ಒಬ್ಬರು ವ್ಯವಸ್ಥಾಪಕ ಕಾರ್ಯದರ್ಶಿಗಳನ್ನು, ಚುನಾವಣೆಗೆ ಮುಂಚೆ ಅಥವಾ ಚುನಾವಣೆ ಆದಮೇಲೆ ನಾಲ್ಕಾಣೆ ಕಾಂಗ್ರೆಸ್ ಸದಸ್ಯರಾದ ಮತ್ತೊಬ್ಬರನ್ನು, ಮುಖ್ಯಮಂತ್ರಿಗಳಿಗೆ ಸ್ಥಳಕೊಟ್ಟ ಇನ್ನೊಬ್ಬರನ್ನು ಮೇಲ್ಮನೆಗೆ ನೂಕುವ ಸಾಹಸ ಮಾಡಿದೆ. ಈ ಸರ್ಕಾರವನ್ನು ಅಭಿನಂದನೆ ಮಾಡುವುದಕ್ಕೆ ಹೇಗೆ ಸಾಧ್ಯ? ನಾವು ಸರ್ಕಾರಕ್ಕೆ ಅವಮಾನ ಮಾಡಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ, ಸರ್ಕಾರವನ್ನು ಟೀಕೆಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ, ರಾಜ್ಯಾಂಗಕ್ಕೆ ನೀವು ಕೋರುತ್ತಿರುವ ಗೌರವ, ನಿಷ್ಠೆ ಈ ದೃಷ್ಟಿಯಿಂದ ನೋಡಿದರೆ ನೀವು ಜನರಿಗೆ ಅಪಚಾರಮಾಡುವುದರಲ್ಲಿ ನಿಸ್ಸೀಮರಾಗಿದ್ದೀರಿ. ಈಗ ನಿಮ್ಮ ಕಣ್ಣು ರಾಜ್ಯಾಂಗದ ಮೇಲೆ ಕೂಡ ಬಿತ್ತಲ್ಲಾ ಎಂಬ ವ್ಯಸನ ಬಾಧಿಸುತ್ತಿದೆ. ಇನ್ನು ಮುಂದಾದರೂ ಕೂಡ ಇಂತಹ ಅಕ್ಷಮ್ಯವಾದ ರಾಜ್ಯಾಂಗಕ್ಕೆ ಅಪಚಾರವಾಗುವ ಕೆಲಸಗಳು ನಡೆಯದಿರಲಿ ಎಂಬ ದೃಷ್ಟಿಯಿಂದ ಈ ಅವಿಶ್ವಾಸ ನಿರ್ಣಯದಲ್ಲಿ ಈ ಒಂದು ಸೂಚನೆಯನ್ನು ಕೂಡ ಸೇರಿಸಿದ್ದೇವೆ ಎಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ. 171 ನೆಯ ವಿಧಿ ಎಷ್ಟರಮಟ್ಟಿಗೆ ಇದೆಯೆಂದರೆ ಈ ವಿಚಾರದಲ್ಲಿ ಯಾವ ಒಬ್ಬ ಶಾಸನಸಭಾ ಸದಸ್ಯರೂ ಕೂಡ ಒಂದು ಕೋರ್ಟಿಗೆ ಹೋಗಿ ಈ ವಿಚಾರದಲ್ಲಿ ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲ. ಬಹುಶಃ ಈ ರಾಜ್ಯಾಂಗ ನಿರ್ಮಾಣ ಮಾಡಿದವರಿಗೆ ಮುಂದೆ ಬರುವ ಸರ್ಕಾರದವರು ಈ ಒಂದು ವಿಧಿಯನ್ನು ದುರುಪಯೋಗ ಮಾಡುತ್ತಾರೆಂದು ಕೊಂಚವಾದರೂ ಸೂಚನೆಯಿದ್ದಿದ್ದರೆ, ಗವರ್ನರ್ ಮೂಲಕ ಹೀಗೆ ದುರುಪಯೋಗ ಮಾಡುವರೆಂಬ ನಿದರ್ಶನವಿದ್ದಿದ್ದರೆ ನ್ಯಾಯಾಲಯಗಳಲ್ಲಿ ಕಂಟೆಸ್ಟ್ ಮಾಡುವ ಅಧಿಕಾರವನ್ನು ಕೂಡ ರಾಜ್ಯಾಂಗದಲ್ಲಿ ಸೇರಿಸುತ್ತಿದ್ದರೆಂದು ನನಗಾದರೂ ಭರವಸೆಯಿದೆ. ಮೇಲ್ಮನೆಗೆ ನಾಮಕರಣಮಾಡಿರುವುದು ಈ ಸರ್ಕಾರ ಮಾಡಿರುವ ರಾಜ್ಯಾಂಗದ ಅಪಚಾರ ಎಂದು ಮತ್ತೊಮ್ಮೆ ಹೇಳುತ್ತೇನೆ. ಇನ್ನು ಮುಂದಾದರೂ ಇಂಥಾದ್ದು ನಡೆಯದಿರಲಿ ಎಂದು ಇಂಥ ಅಪಚಾರಮಾಡಿರುವ ಸರ್ಕಾರದ ಬಗ್ಗೆ ನಾವು ಅವಿಶ್ವಾಸ ತೋರಿಸದೆ ಮತ್ತೇನು ತೋರಿಸಬೇಕೆಂದು ಪ್ರಶ್ನೆ ಮಾಡುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ಇದೆಯೆಂದರೆ ಪ್ರಜಾಪ್ರಭುತ್ವ ಮನೋಭಾವ ಈ ಸರ್ಕಾರದ ಎಲ್ಲ ಅಂಗಗಳನ್ನು ಕೂಡ ಆವರಿಸಿಕೊಂಡಹಾಗಿದೆ. ಯಾವ ಜನ ನಿಮಗೆ ಓಟು ಕೊಟ್ಟಿಲ್ಲ ಅಂಥವರನ್ನು ದಂಡಿಸಬೇಕು ಎಂಬುದು ನಿಮ್ಮ ವಿಚಾರ ಧಾಟಿ. ಇದು ನಿಮ್ಮ ನೀತಿ ಸೂತ್ರ. ಈ ಸಭೆಯ ಸುಮಾರು 69 ಜನ ಕಾಂಗ್ರೆಸ್ ಸಂಸ್ಥೆಯನ್ನು ವಿರೋಧಿಸಿ ಚುನಾಯಿತರಾಗಿ ಬಂದಿದ್ದೇವೆ. ನಾವು 69 ಜನ ಈ ಸಭೆಗೆ ಬಂದಿರಬೇಕಾದರೆ ನಮ್ಮ ಬಗ್ಗೆ ಕೂಡ ಅಭಿಮಾನ ತಾಳಿರುವ ಸಹಸ್ರಾರು ಜನ, ಲಕ್ಷಾಂತರ ಜನ ಈ ದೇಶದಲ್ಲಿದ್ದಾರೆ. ಆ ಜನರ ಬಗ್ಗೆ ಈ ಕಾಂಗ್ರೆಸ್ ಸರ್ಕಾರದ ಔದಾರ್ಯ ದೃಷ್ಟಿ ಅದು ಬೇಡ, ಅಪೇಕ್ಷಿಸುವುದಿಲ್ಲ, ಕೊಂಚಮಟ್ಟಿಗೆ ಧರ್ಮ ದೃಷ್ಟಿಯಾದರೂ ಇರಬೇಕು ಎಂಬುದು ನಮ್ಮ ಭಾವನೆ.

ಎಷ್ಟೋ ಕಡೆ ನಡೆಯುತ್ತಿರುವ ವಿದ್ಯಮಾನಗಳನ್ನು ಹೇಳಬಹುದಾದರೂ ಹೊಸದುರ್ಗದ ಒಂದು ವಿಷಯವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳುತ್ತೇನೆ. ಹೊಸದುರ್ಗದಲ್ಲಿ ಯಾವ ಜನರು ಕಾಂಗ್ರೆಸ್‌ಗೆ ಓಟು ಕೊಡಲಿಲ್ಲವೋ ಆ ಜನರ ಬಗ್ಗೆ ಈ ಹೊತ್ತು ಅನ್ಯಾಯ ಮತ್ತು ಅಕ್ರಮಗಳು ನಡೆಯುತ್ತಿವೆಯೆಂದು ಹೇಳುವುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಹೊಸದುರ್ಗದಲ್ಲಿ ಹೆಲ್ತ್ ಯೂನಿಟ್ ಇರಿಸಬೇಕೇಬೇಡವೆ ಎನ್ನುವ ಪ್ರಶ್ನೆ ಬಂತು. ಇದಕ್ಕೂ ಚುನಾವಣೆಗೂ ಗಂಟುಹಾಕುವ ಮನೋಭಾವವನ್ನು ಸರ್ಕಾರ ಬಿಡಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ ಬಾಗಲಕೋಟೆಯಿಂದ; ಈಗ ಮುಖ್ಯಮಂತ್ರಿಯಾಗಿದ್ದಾರೆ. ಇನ್ನಾದರೂ ಹೊಸದುರ್ಗದ ಬಗ್ಗೆ ನ್ಯಾಯ ನಿರ್ವಹಣೆ ಮಾಡುವುದಕ್ಕೆ, ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಅವಕಾಶ ಕೊಡುತ್ತಾರೆಂದು ನಂಬಿದ್ದೇನೆ.

ಶ್ರೀ ಕೆ. ನಾಗಪ್ಪ ಆಳ್ವ (ಆರೋಗ್ಯ ಶಾಖೆಯ ಮಂತ್ರಿಗಳು).—ಹೆಲ್ತ್ ಯೂನಿಟ್ ವಿಷಯವನ್ನು ಅವರು ಹೇಳುತ್ತಿದ್ದಾರೆ. ಆ ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಚುನಾವಣೆಗೂ ಅದಕ್ಕೂ ಏನೂ ಸಂಬಂಧವಿಲ್ಲ. ಜನರ ಹಿತದೃಷ್ಟಿಯಿಂದ ಹೆಲ್ತ್ ಯೂನಿಟ್ ಮಾಡುವುದು.

ಶ್ರೀ ಎಸ್. ಎಂ. ಕೃಷ್ಣ.—ಚುನಾವಣೆಗೂ ಅದಕ್ಕೂ ಸಂಬಂಧವಿಲ್ಲವೆಂದು ಆರೋಗ್ಯ ಮಂತ್ರಿಗಳು ಹೇಳಿದರು, ಕೇಳಿದ್ದೇನೆ.

ನಾನು ಒಬ್ಬ ಮಂತ್ರಿಗಳನ್ನು ಮದ್ದೂರಿಗೆ ಬನ್ನಿ ಎಂದು ಕರೆದೆ; ಅವರು ಬರುತ್ತೇನೆಂದು ಹೇಳಿದರು. ಒಂದು ಹಳ್ಳಿಗೆ ವಿದ್ಯುಚ್ಛಕ್ತಿಯ ಉದ್ಘಾಟನೆ ಮಾಡುವುದಕ್ಕೆ, ಹಳ್ಳಿಯ ಜನರ ಮನಸ್ಸನ್ನು ಅವರ ಜ್ಞಾನ ಜ್ಯೋತಿಯಿಂದ ಬೆಳಗುವುದಕ್ಕೆ. ಅದೇನು ಕಾಂಗ್ರೆಸ್ ನಡೆಯಿತೋ ಏನೋ ಅದಾದ ಐದಾರು ದಿವಸಗಳಲ್ಲಿ ನನಗೊಂದು ತಾರು ಬಂತು unavoidable circumstancesಎಂದ ಬರುವುದಕ್ಕಾಗುವುದಿಲ್ಲವೆಂದು ತಿಳಿಸಿದರು. ಇದು ತರವೆ? ಯಾರಾದರೂ ಮಂತ್ರಿಗಳನ್ನು ಕರೆಸಲು ನನಗೆ ಈಗ ಹೆದರಿಕೆಯಾಗುತ್ತದೆ. ಅವರನ್ನು ಕರೆಯುವುದು, ಅವರು ಒಪ್ಪಿಕೊಂಡು ಆಮೇಲೆ ಬರುವುದಕ್ಕಾಗುವುದಿಲ್ಲವೆಂದು ತಾರು ಕಳುಹಿಸುವುದು. ಅವರು ಯಾರಿಗೋ ಹೆದರಿ, ಯಾರದೋ ದಾಕ್ಷಿಣ್ಯಕ್ಕಾಗಿ ಬರಲಿಲ್ಲವೆಂದು ಕಾಣುತ್ತದೆ. ಇದನ್ನು ಕೇಳಿ ನ್ಯಾಯಾಂಗ ಮಂತ್ರಿಗಳು ನಗುತ್ತಿದ್ದಾರೆ, ಇದು ನಗತಕ್ಕ ವಿಷಯವಲ್ಲ. ನಾನು ಶಾಸನ ಸಭಾ ಸದಸ್ಯನಾಗಿ ಆಹ್ವಾನ ಮಾಡಿದ್ದೇನೆ. ನಾನು ಲಘುವಾಗಿ ಮಾತನಾಡುತ್ತಿಲ್ಲ, ಬಹಳ ಗಂಭೀರವಾಗಿ ಮಾತನಾಡುತ್ತಿದ್ದೇನೆ. ಇನ್ನು ಮುಂದಾದರೂ ಕೂಡ ಇಂಥ ಕ್ಷುಲ್ಲಕ ಕಾರಣಗಳನ್ನು ಕೊಟ್ಟು, ಬರುವುದಕ್ಕಾಗುವುದಿಲ್ಲವೆಂದು ಹೇಳಬಾರದು. ಹೊಸದುರ್ಗ ಮುಂತಾದ ಕಾಂಗ್ರೆಸೇತರರು ಚುನಾಯಿತರಾಗಿ ಬಂದಿರುವ ಕ್ಷೇತ್ರಗಳನ್ನು ತಾತ್ಸಾರದಿಂದ ನೋಡಬಾರದು. ಒಂದು ಶಿಶುವಿಹಾರವನ್ನು ಪ್ರಾರಂಭ ಮಾಡುವುದಕ್ಕಾಗಿ ಮುಖ್ಯ ಮಂತ್ರಿಗಳು 120 ಮೈಲಿ ದೂರ ಹೋಗುತ್ತಾರೆ; ಈ ದೇಶದಲ್ಲಿ ಶುಚಿಯಾದ, ಶುದ್ಧವಾದ, ನಿರ್ಮಲವಾದ ಆಡಳಿತವನ್ನೊದಗಿಸುವುದರಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿರುವುದರಿಂದ ನಾವು ಈ ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆ. ಶರಾವತಿಯ ಬಗ್ಗೆ ಕೂಡಲೇ, ಕಾಲವಿಳಂಬ ಮಾಡದೆ ನಿಷ್ಪಕ್ಷಪಾತವಾದ ಹೈಪವರ್ ಕಮಿಷನ್ ರಚನೆ ಮಾಡಬೇಕು. ಸರ್ಕಾರ ಕೊಡತಕ್ಕ ಸಾಕ್ಷ್ಯಗಳನ್ನು ತೆಗೆದುಕೊಂಡು ಪರೀಕ್ಷಿಸಿ, ಆ ಕಮಿಷನ್ ಯಾವ ಇಂಜಿನಿಯರಿಂಗ್ ಇಲಾಖೆ ದೇಶಕ್ಕೆ ಅಪಚಾರ ಮಾಡಿದೆಯೋ ಅಲ್ಲಿನ ಆ ಜನರನ್ನು ಶಿಕ್ಷೆಗೊಳಗು ಮಾಡಬೇಕೆಂದು ಹೇಳಿ ಈ ನಿರ್ಣಯವನ್ನು ಸಂತೋಷದಿಂದ ಸಮರ್ಥನೆ ಮಾಡುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ನಗರ).—ಸ್ವಾಮಿ, ಈ ನಿರ್ಣಯವನ್ನು ನಾನು ವಿರೋಧ ಮಾಡುತ್ತಿದ್ದೇನೆ. ವಿರೋಧ ಮಾಡುವಾಗ ಕೆಲವು ವಿಷಯಗಳನ್ನು ಮಾತ್ರ ಹೇಳೋಣವೆಂದರೆ, ನಮ್ಮ ವಿರೋಧಪಕ್ಷದ ಜನರು ಕೆಲವು ಅಪಾರ್ಥಗಳನ್ನು ಮಾಡುತ್ತಾರೆ. ಅವರು ಹೇಳಿರುವ ಕೆಲವು ವಿಷಯಗಳಿಗೆ ಉತ್ತರವನ್ನು ಹೇಳದೇ ಹೋದರೆ, ಅವರು ಹೇಳಿದುದನ್ನೇ ನಾವು ಒಪ್ಪಿದೆವೆಂದು ಅರ್ಥಮಾಡುವ ಸಾಹಸ ಮಾಡುತ್ತಾರೆ. ಅವರು ಮಾಡತಕ್ಕ ಕೆಲಸವಾದರೂ ಇಷ್ಟೆ; ಇಲ್ಲದುದನ್ನು ಹೇಳಿ, ಸಣ್ಣದನ್ನು ದೊಡ್ಡದು ಮಾಡಿ ಜನರ ಮನಸ್ಸನ್ನು ಕಲಕಿ ಅಥವಾ ಜನರ ಮನಸ್ಸಿನಲ್ಲಿ ಸ್ವಲ್ಪ ಗೊಂದಲವನ್ನು ಉತ್ಪತ್ತಿ ಮಾಡಿ, ಆಡಳಿತ ಪಕ್ಷದಲ್ಲಿರಬಹುದಾದ ಅಭಿಮಾನವನ್ನು ಕಡಮೆ ಮಾಡುವುದು. ಹೀಗೆ ಮಾಡಲು ವಿರೋಧ ಪಕ್ಷದ ಜನರು ತಮಗೆ ಇರುವ ಅವಕಾಶವನ್ನು ಉಪಯೋಗಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಅವರು ಹೇಳುವುದನ್ನು ಕೇಳುವುದು ನ್ಯಾಯವಾದರೂ ಸತ್ಯವನ್ನು ಹೇಳಬೇಕಾಗುತ್ತದೆ, ನಿಜವನ್ನು ಹೇಳಬೇಕಾಗುತ್ತದೆ. ಇಂಥ ಸಭೆಯಲ್ಲಿ ಅವರು ಹೇಳುವುದು ಸತ್ಯವೆಂದು challenge ಮಾಡುತ್ತಾರೆ. ಶ್ರೀಮಾನ್ ಕೃಷ್ಣ ಅವರೂ ಶಿವಪ್ಪನವರೂ ತಾವು ರಾಜೀನಾಮೆ ಕೊಡುವುದಾಗಿ ಹೇಳಿದರು. ಅವರು ಅಷ್ಟು ದೊಡ್ಡ ಕೆಲಸವನ್ನು ಮಾಡಬೇಕಾಗಿಲ್ಲ. ರಾಜ್ಯಾಂಗವನ್ನು ರಚಿಸುವಾಗ ಕಾನೂನಿನಲ್ಲಿ ಎಲ್ಲವನ್ನೂ ಸೇರಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕಾನೂನು ಕಟ್ಟಲೆಗಳಿವೆ. ದೇಶದಲ್ಲಿ ಏನೋ ದೊಡ್ಡ ಅನಾಹುತ ನಡೆದಿದೆ, ಖಜಾನೆಯ ಹಣವೆಲ್ಲ ಸೋರಿಹೋಗುತ್ತಿದೆ. ಎನ್ನುವಂತೆ ಮಾತನಾಡಿದರು. ಆದರೆ ಸಾರ್ವಜನಿಕ ಹಣ ಸರಿಯಾಗಿ ಖರ್ಚಾಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ತಕ್ಕ ಜನರನ್ನು ನೇಮಕ ಮಾಡಿದ್ದಾರೆ. ಈ ಜನರನ್ನು ರಾಷ್ಟ್ರಾಧ್ಯಕ್ಷರೇ ನೇರವಾಗಿ ನೇಮಕ ಮಾಡಿದ್ದಾರೆ. ಅವರೇನೂ ಆಡಳಿತದ ಕೈ ಕೆಳಗಿಲ್ಲ. ಆದುದರಿಂದ ದೇಶದಲ್ಲಿ ಏನೋ ಕ್ಷೋಭೆಯಾಗಿದೆ, ಬೊಬ್ಬೆಯಾಗಿದೆ ಎನ್ನುವುದನ್ನು ನಂಬಬೇಕಾಗಿಲ್ಲ. ಇಂಥ ಅಪಾದನೆಗಳನ್ನು ಮಾಡುವವರು ರಾಜ್ಯಾಂಗವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಆಡಿಟರ್ ಜನರಲ್ ಮತ್ತು ಅಕೌಂಟೆಂಟ್ ಜನರಲ್ ಅವರು ರಾಷ್ಟ್ರಾಧ್ಯಕ್ಷರಿಂದ ನೇಮಕವಾಗಿರುವವರು. ಇವರು ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಕೊಟ್ಟವರದಿಯನ್ನು ತುಲನಮಾಡಿ, ಸರ್ಕಾರ ಸರಿಯಾಗಿ ಆಡಳಿತ ನಡೆಸುತ್ತಿದೆಯೋ ಇಲ್ಲವೋ ಎನ್ನುವುದನ್ನು ಈ ಸಭೆಯಲ್ಲಿ ಚರ್ಚಿಸಿ ಅದರ ಮೇಲೆ ಈ ಸಭೆ ಅಭಿಪ್ರಾಯವನ್ನು ಕೊಡುತ್ತಿದೆ. ಆದುದರಿಂದ ವಿರೋಧ ಪಕ್ಷದವರು ಹೇಳಿದುದಕ್ಕೆ ಆಧಾರವಿಲ್ಲ. ಖಜಾನೆಯ ಬೀಗದ ಕೈ ಯಾರಿಗೋ ಕೊಟ್ಟಿದ್ದಾರೆ, ಹಣ ಸೋರುತ್ತಿದೆ ಎಂದು ಅನುಮಾನ ಪಡಲು ಅವಕಾಶವೇ ಇಲ್ಲ. ಹೀಗೆ ಕಾನೂನಿಗೆ ವಿರುದ್ಧವಾಗಿ ಸರ್ಕಾರ ಏನಾದರೂ ಅಪವ್ಯಯ ಮಾಡಿದರೆ ಅದನ್ನು ತೋರಿಸುವುದಕ್ಕೆ ಈಗಿರುವಂತೆ ಅವಕಾಶವಿದೆ. ಆದುದರಿಂದ ಇದಕ್ಕಾಗಿ ಬೇರೆ ಸಮಿತಿಯನ್ನು ನೇಮಕ ಮಾಡಬೇಕಾಗಿಲ್ಲ. ವಿರೋಧ ಪಕ್ಷದವರು ಹೇಳಿರುವುದು ನಿಜವಾಗಿದ್ದರೆ ಅದು ಆಡಿಟ್ ವರದಿಯಲ್ಲಿ ಏಕೆ ಬಂದಿಲ್ಲ? ನಾವೇ ಈ ಸಭೆಯಿಂದಲೇ ಪಬ್ಲಿಕ್ ಅಕೌಂಟ್ಸ್ ಕಮಿಟಿ ಎಂದು ರಚನೆ ಮಾಡಿದ್ದೇವೆ. ಈ ಕಮಿಟಿಯವರು ಕಣ್ಣು ಮುಚ್ಚಿಕೊಂಡು ಕುಳಿತಿಲ್ಲ. ಇವರು ಮಾಡುವ ಟೀಕೆಟಿಪ್ಪಣಿಗಳನ್ನೂ, ವರದಿಯನ್ನೂ ಸಭೆಯ ಮುಂದಿಡುತ್ತಾರೆ. ಅದರ ಮೇಲೆ ಸಭೆಯಲ್ಲಿ ಚರ್ಚೆಮಾಡುತ್ತೇವೆ. ಯಾವುದೇ ಯೋಜನೆಯಲ್ಲಿ ಲೋಪದೋಷಗಳಿದ್ದಲ್ಲ ಅವೆಲ್ಲವೂ ವರದಿಯಲ್ಲಿ ನಮೂದಾಗಿರುತ್ತವೆ............

ಶ್ರೀ ಎಸ್. ಎಂ. ಕೃಷ್ಣ.—ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಎಷ್ಟು ಜನ ಕಾಂಗ್ರೆಸ್‌ನವರಿದ್ದಾರೆ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕಾನೂನಿನ ಪ್ರಕಾರ ಇಷ್ಟು ಜನರು ಆ ಸಮಿತಿಯಲ್ಲಿರ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ಬೇಕೆಂದು ಒಪ್ಪಿದ್ದೇವೆ. ಅದನ್ನು ಬಿಟ್ಟು ಯಾರು ಯಾರು ಎಷ್ಟು ಜನರಿದ್ದಾರೆಂದರೆ ಅದಕ್ಕೇನು ಹೇಳುವುದು? ನಾನು ಅಂದಾಜು ಸಮಿತಿಯಲ್ಲಿದ್ದೆ. ಚರ್ಚೆಗೆ ಬರುವ ವಿಷಯಗಳನ್ನು ಎಲ್ಲಿಯೂ ಕೈಯೆತ್ತಿ ತೀರ್ಮಾನ ಮಾಡಿಲ್ಲ ....

ಶ್ರೀ ಕೆ. ಲಕ್ಕಪ್ಪ.—ಆಡಿಟ್ ವರದಿಯಲ್ಲಿ ಮಾಡಿರುವ ಆಪಾದನೆಗಳಲ್ಲಿ ಎಷ್ಟು ತೀರ್ಮಾನ ಮಾಡಿದ್ದೀರಿ? ಎಷ್ಟು ಲೋಪದೋಷಗಳನ್ನು ಸರಿಪಡಿಸಿದ್ದೀರಿ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸರ್ಕಾರದವರು ತಪ್ಪು ಮಾಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನೂರು ರೂಪಾಯಿ ವರಮಾನ ಬರತಕ್ಕ ಒಂದು ಸಂಸಾರದಲ್ಲಿ ಆಯವ್ಯಯವನ್ನು ನಡೆಸುವಾಗ ಎಷ್ಟೋ ತಪ್ಪುಗಳಾಗುತ್ತವೆ. ಹೀಗಿರುವಾಗ ನೂರು ಕೋಟಿ ರೂಪಾಯಿಗಳ ಆಡಳಿತ ನಡೆಸುವಾಗ, ಇಂಥ ದೊಡ್ಡ ವ್ಯವಸ್ಥೆ ಇರುವಾಗ ತಪ್ಪಾಗುವುದೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಅದನ್ನು ತಿದ್ದುವುದಕ್ಕೇ ಈ ಸಭೆ ಇರುವುದು, ಸಮಿತಿಗಳಿರುವುದು! ನಾವೂ ನೀವೂ ಸೇರಿ ಚರ್ಚೆ ಮಾಡಿ ಅದನ್ನು ಸರಿಮಾಡುತ್ತೇವೆ. ಅದನ್ನು ಬಿಟ್ಟು 'ಅವರು ಸಮಜಾಯಿಷಿ ಕೊಡಲೇಬೇಕು,' ಎಂದು ಹೇಳುತ್ತಾ, ಬರೀ ವಾದ ಮಾಡುತ್ತಾ, ಹೋಗುವುದು ಸರಿಯಲ್ಲ. ಈಗ ಎಷ್ಟು ಹಣ ಖರ್ಚಾಗಿದೆ. ಅಂಥಾದ್ದರಲ್ಲಿ ಮತ್ತೊಂದು ಕಮಿಟಿಯನ್ನು ಅದಕ್ಕೇ ಮಾಡಿ ಮತ್ತಷ್ಟು ಹಣ ಖರ್ಚುಮಾಡಿ ಎನ್ನುವುದು ಯಾವ ಎಕಾನಮಿಯೋ ಗೊತ್ತಿಲ್ಲ.

5-30 P.M.

ಶರಾವತಿಯ ಬಗ್ಗೆ ಒಂದು ವಿಚಾರ ನಾನು ಹೇಳಬಯಸುತ್ತೇನೆ. ಏಕೆಂದರೆ, ಅದರ ವಿಚಾರ ಹೇಳದೆ ಇದ್ದರೆ, ಅದನ್ನು ಒಪ್ಪಿಕೊಂಡಿದ್ದಾರೆ ಎಂದು ಅವರು ಹೇಳುತ್ತಾರೆ. ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ತಮ್ಮ ಭಾಷಣದಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ ಎಂದು ಹೇಳಿದರು. ಅವರು ತಾನೆ ಶ್ವೇತಪತ್ರ (white paper) ಹೊರಡಿಸಿ ಎಂದು ಏಕೆ ಹೇಳಿದ್ದಾರೆ? ವಿರೋಧ ಪಕ್ಷದ ಅನೇಕ ಜನ ಅನೇಕ ರೀತಿಯ ಅಪವಾದಗಳನ್ನು ಮಾಡುತ್ತಿದ್ದಾರೆ, ಆದ್ದರಿಂದ ಸರ್ಕಾರದವರು ಒಂದು ಹೇಳಿಕೆ ಕೊಡಲಿ ಎಂಬ ಅರ್ಥದಲ್ಲಿ ಹೇಳಿದರೇ ಹೊರತು, ಚನ್ನಬಸಪ್ಪನವರು ಯಾರ ಮೇಲೆಯೂ ತಪ್ಪು ಹೊರಿಸಲಿಲ್ಲ. ಹೀಗಿರುವಾಗ, ಚನ್ನಬಸಪ್ಪನವರು 'ಹೀಗೆ ಹೇಳಿದ್ದಾರೆ' ಎಂದು ಅವರು ಹೇಳದಿರುವುದನ್ನು ಅವರ ಬಾಯಲ್ಲಿ ಹಾಕುವುದು ಸರಿಯಲ್ಲ; 75 ಲಕ್ಷ ರೂಪಾಯಿಗಳನ್ನು ವೃಥಾ ಖರ್ಚು ಮಾಡಿದ್ದಾರೆ, ಕಂಟ್ರಾಕ್ಟ್‌ದಾರರಿಗೆ ತೆಗೆದುಕೊಟ್ಟಿದ್ದಾರೆ ಎಂದು ಹೇಳಿದರೆಂದು ಹೇಳುವುದು ನ್ಯಾಯವಲ್ಲ. ಶ್ರೀಮಾನ್ ಚನ್ನಬಸಪ್ಪನವರು ವಿಷಯ ತಿಳಿದಿರುವವರಾಗಿರುವುದರಿಂದ, ಸರ್ಕಾರದವರು ಒಂದು ಶ್ವೇತ ಪತ್ರ ಹೊರಡಿಸುವುದಕ್ಕೆ ಏನೂ ಕಷ್ಟವಿಲ್ಲವೆಂಬ ಧಾಟಿಯಲ್ಲಿ ಹೇಳಿದ್ದಾರೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಆ ಮೇಲೆ ಆರ್ಬಿಟ್ರೇಷನ್ ವಿಚಾರ ಹೇಳಿದರು. ಆರ್ಬಿಟ್ರೇಷನ್ ಇರಬೇಕೇ ಬೇಡವೇ ಎಂಬ ವಿಚಾರದಲ್ಲಿ ಜಿಜ್ಞಾಸೆ ಬಂದಿದೆ. 'ಬೇಡ' ಎಂದು ಹೇಳುವುದು ಸರ್ವಸಾಮಾನ್ಯ. ಸರಿಯಾದ ಆರ್ಬಿಟ್ರೇಟರನ್ನು ನೇಮಕ ಮಾಡಿದರೆ ಆಯಿತು. ಏಕೆ ಒಳ್ಳೆಯವರಿಲ್ಲವೇ? ಒರಿಸ್ಸಾದಲ್ಲಿ ಒಂದು ದೊಡ್ಡ ಪ್ರಾಜೆಕ್ಟ್ ಮಾಡಿದ್ದಾರೆ. ಅಲ್ಲಿಯೂ ಕೂಡ ಒಂದು ಆರ್ಬಿಟ್ರೇಷನ್ ಕ್ಲಾಜು ಹಾಕಿತ್ತು. ಒಮ್ಮೆ ಜಿಜ್ಞಾಸೆ ಬಂದಾಗ, ಒರಿಸ್ಸಾ ಸರ್ಕಾರದವರು, ಆ ಕಂಟ್ರಾಕ್ಟ್‌ದಾರನಿಗೇ ಅವನಿಗೆ ಬೇಕಾದ ಒಬ್ಬ ಆರ್ಬಿಟ್ರೇಟರನ್ನು ನೇಮಿಸುವಂತೆ ಹೇಳಿದರು. ಆಗಲೂ ಕೂಡ ಆ ಆರ್ಬಿಟ್ರೇಟರು ತಮ್ಮ ರಿಪೋರ್ಟಿನಲ್ಲಿ ಕಂಟ್ರಾಕ್ಟ್‌ದಾರನಿಗೆ ಒಂದು ಕಾಸೂ ಕೊಡಬೇಕಾಗಿಲ್ಲವೆಂದು ಹೇಳಿದರು. ಏಕೆ ಇದನ್ನು ನಾನು ಹೇಳಿದೆನೆಂದರೆ, ಆರ್ಬಿಟ್ರೇಷನ್ ಇದ್ದ ಮಾತ್ರಕ್ಕೇ ಏನೂ ತೊಂದರೆಯಾಗುವುದಿಲ್ಲ. ಏನಾದರೂ ತೊಂದರೆ ಬಂದರೆ ತೀರ್ಮಾನಮಾಡುವವರು ಯಾರಾದರೂ ಇರಲಿ ಎಂದು ಇದನ್ನು ಮಾಡಿರುತ್ತಾರೆ. ನಿಷ್ಪಕ್ಷಪಾತವಾದ ಒಂದು ಸಂಸ್ಥೆಯಿರಲಿ ಎಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಆರ್ಬಿಟ್ರೇಟರ್ ಹೇಳುವುದು ಸರಿಯೇ ಅಲ್ಲವೇ ಎಂಬ ವಿಮರ್ಶೆ ಮಾಡಬಹುದು. ಅದಕ್ಕೇ ಬೇರೆ ಸ್ಥಳವಿದೆ. ಬೇರೆ ವ್ಯಕ್ತಿಗಳಿದ್ದಾರೆ. ಅದಕ್ಕೆ ಗೊತ್ತಾದಂಥ ಸಂಸ್ಥೆಗಳೇ ಬೇರೆ ಇವೆ. ಆದ್ದರಿಂದ ಈ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ.

ಎರಡನೆಯದಾಗಿ ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಶ್ರೀಮಾನ್ ಶಿವಪ್ಪನವರು ಬಹಳ ದೀರ್ಘವಾದ ಭಾಷಣ ಮಾಡಿದರು. ಈಗ ನಾವು ಈ ಸಭೆಯಲ್ಲಿ ಅನೇಕ ತೆರಿಗೆ ಕಾನೂನುಗಳನ್ನು ತಂದು ಜನರ ಮೇಲೆ ತೆರಿಗೆ ಹೊರಿಸಿದ್ದೇವೆ; ಈ ತೆರಿಗೆಯ ಕಾನೂನುಗಳು 'ಸರಿ' ಎಂದು ಇದುವರೆಗೆ ಯಾರು ತಾನೆ ಒಪ್ಪಿದ್ದಾರೆ. ಸೇಲ್ಸ್ ಟ್ಯಾಕ್ಸ್ ಆಗಲೀ, ಮತ್ತೊಂದಾಗಲೀ ಬಂದಾಗ ಸದಸ್ಯರೆಲ್ಲರೂ ಏನು ಹೇಳಿದರು? ಇದೆಲ್ಲಾ ಬಡವರ ಮೇಲೆ ಬೀಳುತ್ತದೆ, ತೆರಿಗೆ ಹಾಕಬೇಡಿರಿ ಎಂದು ಎಲ್ಲರೂ ಹೇಳಲಿಲ್ಲವೇ? ಯಾವುದನ್ನು ಹೆಚ್ಚಿಸುವುದಕ್ಕೆ ಹೋದರೂ ವಿರೋಧ ಬಂದೇ ಬರುತ್ತದೆ! ಸಾಮಾನ್ಯವಾಗಿ ಈ ಅಂಶವನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಸರ್ಕಾರವನ್ನು ನಡೆಸುತ್ತಾ ಇರುವವರು ಯಾರು? ಸರ್ಕಾರಕ್ಕೆ ಹಣ ಬೇಕಾಗಿದ್ದರೆ ಅದನ್ನು ಎತ್ತುವುದು ಈ 27 ಜನ ಮಂತ್ರಿಗಳು ಮಾತ್ರವಲ್ಲ. ಈ ಶಾಸನ ಸಭೆ ಕೂಡ ಅದನ್ನು ವಿಮರ್ಶಿಸಬೇಕಾಗುತ್ತದೆ ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಸೇಲ್ಸ್ ಟ್ಯಾಕ್ಸ್ ಮಸೂದೆ ಬಂದಾಗ ಆಹಾರ ಧಾನ್ಯಗಳ ವಿಷಯದಲ್ಲಿ ತೆರಿಗೆ ಹಾಕಕೂಡದೆಂದು ಸದಸ್ಯರು ಹೇಳಿದ ಮೇಲೆ ಅದರ ಮೇಲೆ ಹಾಕಲಿಲ್ಲ. ಅದಕ್ಕೆ ಬದಲಾಗಿ ಬೇರೆ ವಸ್ತುಗಳಿಗೆ ತೆರಿಗೆ ಹಾಕಲು ಸೂಚನೆ ಕೂಡ ಸದಸ್ಯರು ಮಾಡಿದರು. ರಿಫ್ರಿಜರೇಟರ್ ಮೇಲೆ ತೆರಿಗೆ ಹಾಕಿ ಎಂದು ಸದಸ್ಯರು ಸೂಚನೆ ಮಾಡಿದ್ದರಿಂದಾಗಿ ಅದರ ಬೆಲೆ ಏರಿತು. ಜನರು ಹೇಳಿಕೊಂಡರು, 'ನಿನ್ನೆ ತಾನೆ ರೇಟು ಕಡಮೆಯಿತ್ತು, ಈ ಹೊತ್ತು 4 ರೂಪಾಯಿ ಜಾಸ್ತಿಯಾಗಿಬಿಟ್ಟಿದೆ' ಎಂದು ಈ ರೀತಿಯೆಲ್ಲಾ ಜನರು ಮಾತನಾಡಿಕೊಳ್ಳುವುದು ಸರ್ವ ಸಾಮಾನ್ಯ. ಹೀಗಿರುವಾಗ ಫೀಯನ್ನು ಜಾಸ್ತಿಮಾಡಿದ್ದನ್ನು ಯಾರು ತಾನೇ ಸ್ವಾಗತಿಸುತ್ತಾರೆ. ಅಲ್ಲದೆ ಶ್ರೀಮಾನ್ ಶಿವಪ್ಪನವರು,—ಅವರು ಸಿಂಡಿಕೇಟ್ ಮೆಂಬರಾಗಿದ್ದರು; ಅಧಿಕಾರ ವರ್ಗದಲ್ಲಿದ್ದರು. ನಾನು ಕೇವಲ ವಿದ್ಯಾರ್ಥಿ ವೃಂದದಲ್ಲಿ ಸೇರಿದ್ದೆ—ಶ್ರೀಮಾನ್ ಶಿವಪ್ಪನವರಿಗೆ ನಾನು ಒಂದೇ ಒಂದು ಮಾತು ಈ ವಿಚಾರದಲ್ಲಿ ಕೇಳಬಯಸುತ್ತೇನೆ. ಸರ್ಕಾರ ಮಾಡಿದ್ದು ತಪ್ಪೇ ಎಂದು ಹೇಳೋಣ; ಶಿವಪ್ಪನವರು ಸಿಂಡಿಕೇಟ್

ಮೆಂಬರಾಗಿದ್ದು ಮಾಡಿದ್ದೇನು ! ಸರ್ಕಾರ ಮಾಡಿದ ತಪ್ಪನ್ನು ಅವರೇಕೆ ಸಿಂಡಿಕೇಟಿನಲ್ಲಿದ್ದು ಒಪ್ಪಿ ಕೊಂಡರು ?

Sri S. SIVAPPA.—Even in the Syndicate the Congress has nominated majority.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಆದರೆ ನಾನು ತಮ್ಮನ್ನು ಕೇಳುತ್ತೇನೆ, ಅಲ್ಲೇಕೆ ತಾವು ಒಮ್ಮತದಿಂದ ಕೈಎತ್ತಿ ತೀರ್ಮಾನ ಮಾಡಿದಿರಿ ಎಂದು ?

Sri B. D. JATTI (Minister for Finance).—Was it unanimous ?

Sri S. SIVAPPA.—I have given a dissenting note !

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನನಗೆ ಗೊತ್ತಿರುವ ಮಟ್ಟಿಗೆ ಒಮ್ಮತದಿಂದ ಈ ವಿಷಯವನ್ನು ತೀರ್ಮಾನ ಮಾಡಿದ್ದಾರೆ.

Sri S. SIVAPPA.—It is wrong ; I have given a dissenting note. I am making it emphatically clear.

Sri S. R. KANTHI.—It is a unanimous decision. I have looked into the records of the University. It is unanimous.

Sri S. SIVAPPA.—It is a confidential thing. I do not want to refer to it here. The students know what it is.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಶ್ರೀಮಾನ್ ಶಿವಪ್ಪನವರು ಡಿಸ್ಸೆಂಟಿಂಗ್ ನೋಟ್ ಕಳುಹಿಸಿಲ್ಲವೆಂದು ನಾನು ಹೇಳಲಿಲ್ಲ. ಯೂನಿವರ್ಸಿಟಿ ಆರ್ಡಿನೆನ್ಸ್‌ಗಳನ್ನು ತಿಳಿದ ಜನ ಎಷ್ಟೋ ಸಲ ಏನು ಮಾಡುತ್ತಾರೆ ಎಂದರೆ, ಯೂನಿವರ್ಸಿಟಿ ಸಿಂಡಿಕೇಟಿನಲ್ಲಿ ತೀರ್ಮಾನಕ್ಕೆ ಒಪ್ಪಿಗೆ ಕೊಟ್ಟು ಆಮೇಲೆ ಡಿಸ್ಸೆಂಟಿಂಗ್ ನೋಟ್ ಕಳುಹಿಸುವುದೂ ಒಂದು ರೀತಿ. ಶ್ರೀಮಾನ್ ಶಿವಪ್ಪನವರು ಆ ರೀತಿ ಮಾಡಿರಬಹುದು.

Sri S. SIVAPPA.—I have given a dissenting note. I am openly stating. I am not like Sri Kanthi.

Sri S. R. KANTHI.—I am the Pro-Chancellor of the University. I have got the right to look into the record.

Sri S. SIVAPPA.—He is misleading. I have protested. He cannot say that I am in favour of it. I am against it and I have also sent a memorandum to the Chancellor. The whole country knows it. Then how can he say this ?

Sri S. R. KANTHI.—He has sent a petition to the Governor against the fee rise. He has not said a word in it about the fee rise in the University college which is on a par with Government.

Sri S. SIVAPPA.—What business has Sri Kanthi to say this ? He is misleading the House as is his usual character. I stand by what I have said. I have given a dissenting note.

Mr. SPEAKER.—The Education Minister has no right to mislead nor has the Leader of the Opposition the right to say that it is the usual fashion of the Education Minister to mislead.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇನ್ನು ಸದ್ಯಕ್ಕೆ ಯೂನಿವರ್ಸಿಟಿ ಸಿಂಡಿಕೇಟ್‌ನಲ್ಲಿ ಆಗಿದ್ದನ್ನು ಬಿಟ್ಟು ಬಾಕಿಯುದನ್ನು ಹೇಳುತ್ತೇನೆ.

ಫೀ ವಿಚಾರ ಹೇಳುತ್ತಿದ್ದೆ. ಈ ಸಂದರ್ಭದಲ್ಲಿ ಒಂದು ವಿಚಾರ ಈ ಸಭೆಯುವರು ಗಮನಕೊಟ್ಟಿಲ್ಲ. ನಮ್ಮಲ್ಲಿರ ತಕ್ಕ ಅಫಿಲಿಯೇಟೆಡ್ ಕಾಲೇಜುಗಳು ಹೆಚ್ಚಿನ ಫೀಜು ಹಾಕುತ್ತಿವೆ. ಇದಕ್ಕೆ ತಾವು ಒಂದು ಹೇಳಬಹುದು. ಅಫಿಲಿಯೇಟೆಡ್ ಕಾಲೇಜುಗಳವರು ಹೆಚ್ಚಿಗೆ ಹಾಕಿಬಿಟ್ಟಿದ್ದಾರೆ, ನಾವೇನು ಮಾಡೋಣ ಎಂದು. ಅದನ್ನು ಕೊಟ್ಟು ಜನರು ಸೇರುತ್ತಿದ್ದಾರೆ, ಏನೂ ಹೇಳುತ್ತಿಲ್ಲ. ಹೀಗೆಯೇ ಅನೇಕ ವಿದ್ಯಾ ಸಂಸ್ಥೆಗಳಿವೆ. ಇದೇ ಬೆಂಗಳೂರು ಸಿಟಿಯಲ್ಲಿ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸಕ್ಕೆ ತಿಂಗಳಿಗೆ 20 ರೂಪಾಯಿ ಫೀಜು ಕೊಡುವ ಜನರೂ ಇದ್ದಾರೆ, ಬೇರೆ ಕಾಲೇಜುಗಳಲ್ಲಿ ವರ್ಷಕ್ಕೆ 320 ರೂಪಾಯಿ ಫೀಜು ತೆಗೆದುಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಸಾವಿರಾರು ಹುಡುಗರು ಅಲ್ಲಿ ಸೇರಿ ಓದುತ್ತಿದ್ದಾರೆ. ಯಾರೂ ತಕರಾರು ಮಾಡಿಲ್ಲ. ಅದನ್ನು ಹುಡುಗರು ಒಪ್ಪಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಕೊಡತಕ್ಕ ಶಕ್ತಿ ಇದೆಯೆಂದು ನಾನು ಹೇಳುತ್ತೇನೆ. ಹುಡುಗರು ಗಲಾಟೆ ಮಾಡಿದರು ಎಂದು ಸುಮ್ಮನೆ ಅವರು ಹೇಳಿದರೆ ಹೇಳಲಿ.

ಶ್ರೀ ಎಸ್. ಶಿವಪ್ಪ.—ಪ್ರೈಮರಿ ಸ್ಕೂಲುಗಳಲ್ಲಿ ಕೋಟ್ಯಾಧೀಶ್ವರರ ಮಕ್ಕಳು ಸಹ ಇದ್ದಾರೆ. ಏತಕ್ಕೆ ಅವರಿಗೆ ಫೀಸ್ ಹಾಕಿಲ್ಲ ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕಾನ್ಸ್ಟಿಟ್ಯೂಷನ್ ಮಾಡುವುದಕ್ಕೆ ಮುಂಚೆ ನಮ್ಮಲ್ಲಿ ವಿದ್ಯಾಭ್ಯಾಸ ಫ್ರೀಯಾಗಿತ್ತು. ಶ್ರೀಮಾನ್ ಶಿವಪ್ಪನವರ ವಾದವನ್ನು ನಾನು ಮೊದಲಿನಿಂದಲೂ ಕೇಳುತ್ತಾ ಇದ್ದೇನೆ. ಪ್ರೈಮರಿ ವಿದ್ಯಾಭ್ಯಾಸಕ್ಕೂ ಫೀಸ್ ಹಾಕೋಣ.

ಶ್ರೀ ಎಸ್. ಶಿವಪ್ಪ.—ನಿಮ್ಮ ವಾದಕ್ಕೆ ಬೆಲೆ ಎಲ್ಲಿದೆ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಆದ್ದರಿಂದ ಇವತ್ತು ಮಾಡಿರತಕ್ಕ ಆರ್ಡರನ್ನು ಸರಿಯಿಲ್ಲವೆಂದು ಹೇಳುವುದಕ್ಕೋಸ್ಕರ ಅವರು ಆರೀತಿ ವಾದವನ್ನು ಬೆಳೆಸುತ್ತಿದ್ದಾರೆ. ಕಾರಣವಿಷ್ಟೆ, ದೇಶದಲ್ಲಿ 3 ಅಥವಾ 4 ವರ್ಷಗಳವರೆಗೆ ಇರತಕ್ಕ ಕೋರ್ಸು ಗಳ ಪಾಠವನ್ನು ಕಲಿಯತಕ್ಕ ಮಕ್ಕಳು ಸುಮಾರು 20 ರೂಪಾಯಿಗಳವರೆಗೆ ಫೀಸ್ ಕೊಡುವುದಕ್ಕೆ ಶಕ್ತಿ ಇದೆ. ಒಬ್ಬ ಡಿಗ್ರಿ ಹೋಲ್ಡರಿಗೆ 320 ರೂಪಾಯಿಗಳವರೆಗೆ ಕೊಡಲು ಶಕ್ತಿ ಇದೆ. ಅಂತಹ ಜನಗಳಿಗೆ ಮೈಸೂರು ಸರ್ಕಾರದವರು ಕೇವಲ 90 ರೂಪಾಯಿಗಳೊಳಗೆ ಡಿಗ್ರಿ ಕ್ಲಾಸ್‌ನೊಳಗೆ ಪಾಠ ಹೇಳಿಸಿ ಎಂದು ಸರ್ಕಾರಕ್ಕೆ ಹೇಳಿದರೆ ಎಲ್ಲಿದೆ ನ್ಯಾಯವೆಂದು ನಾನು ಕೇಳುತ್ತೇನೆ. ಯಾರ್ಯಾರಿಗೆ ಕಾನೂನು ಪ್ರಕಾರ ಫೀಸ್ ಕೊಡತಕ್ಕ ಶಕ್ತಿ ಇದೆಯೋ ಕೊಡಲೇಬೇಕು. ಯಾರ್ಯಾರಿಗೆ ಕೊಡಲು ಶಕ್ತಿ ಇಲ್ಲವೋ ಅಂತಹವರಿಗೆ ಸರ್ಕಾರ ಸಹಾಯ ಮಾಡಬಹುದು. ಆ ದೃಷ್ಟಿಯಿಂದ ಅವರು ಅರ್ಹರಾಗಿರುತ್ತಾರೆ. ಆಗ ಪ್ರೈಮರಿ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ವಿದ್ಯಾಭ್ಯಾಸವನ್ನು ಫ್ರೀಯಾಗಿ ಮಾಡಬೇಕು. ದೊಡ್ಡ ದೊಡ್ಡ ದೊಡ್ಡ ಶ್ರೀಮಂತರಲ್ಲಿ ಸರ್ಕಾರದ ಉದಾರತೆ ಯೇನಾದರೂ ಇದ್ದರೆ ಅದು ತಪ್ಪು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನೊಂದು ಮುಖ್ಯವಾದ ವಿಷಯ. ಈ ದೇಶದಲ್ಲಿ ಈಗಿನ ಫೀಸ್ ಗಿಂತ ಹೆಚ್ಚಿಗೆ ಕೊಡತಕ್ಕ, ಯೋಗ್ಯತೆಯಿರತಕ್ಕಂಥ ಜನಗಳು ಇದ್ದಾರೆ. ಸರ್ಕಾರದವರು ಈ ವಿಚಾರ ಗಳನ್ನೆಲ್ಲಾ ಹಂತ ಹಂತವಾಗಿ ಯೋಚನೆ ಮಾಡಿ ವಿದ್ಯಾರ್ಥಿಗಳ ಹಿತರಕ್ಷಣೆಯನ್ನು ಮನಸ್ಸಿನಲ್ಲಿಟ್ಟು ಕೊಂಡು ಬೇಕಾದಷ್ಟು ಅಂಕಿ ಅಂಶಗಳನ್ನು ಶೇಖರಿಸಿ ಯೋಚಿಸಿ ಕಾನೂನುಗಳನ್ನು ಅನುಸರಿಸಿ ಕೆಲಸ ಮಾಡು ತ್ತಾರೆಂಬುದನ್ನು ನಾವು ಈ ಸಂದರ್ಭದಲ್ಲಿ ಗಮನಿಸ ಬೇಕು. ಯಾವುದನ್ನು ಮಾಡಿದರೂ ದೇಶದಲ್ಲಿ ಏನು ಪರಿಣಾಮವಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕು. ಇದನ್ನೆಲ್ಲಾ ಗಮನಿಸಿ ನಾಳೆ ಮತ್ತೆ ಈ ಬಗ್ಗೆ ಯಾವೊಂದು ತಕರಾರು ಮತ್ತು ವಿರೋಧ ಬಾರದ ಹಾಗೆ ನಾವು ಕೆಲಸ ಮಾಡಬೇಕಾಗಿದೆ. ಇದನ್ನು ಮಾಡುವಾಗ ವಿರೋಧ ಪಕ್ಷದ ಕೆಲವರು ಸಮಯನೋಡಿ ಸುಮ್ಮನೆ ಸರ್ಕಾರದಮೇಲೆ ಇಲ್ಲದ ಸಲ್ಲದ ಆರೋಪಣೆ ಮಾಡುವುದು ಸರಿಯಲ್ಲ. ನಾವು ಆ ರೀತಿ ಯಾರನ್ನೂ ಅಪವಾದ ಮಾಡುವುದಕ್ಕೆ ಬರು ವುದಿಲ್ಲ. ಸುಮ್ಮನೆ ಸರ್ಕಾರದವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಹೇಳುವುದು ಸರಿಯಲ್ಲ. ಈಗ ಮಾಡಿರತಕ್ಕ ಸರ್ಕಾರೀ ಆಜ್ಞೆಯಲ್ಲಿ ನಾನು ಒಂದು ಅಂಶವನ್ನು ಹೇಳಬಹುದು. ಬಹಳ ದಿನಗಳಿಂದ ಮಾಡಿದ್ದನ್ನೆಲ್ಲಾ ಮರೆತು ಯಾವುದಾದರೂ ಒಂದನ್ನು ಮಾಡದೇ ಇದ್ದರೆ, ನೋಡಿ ಇವರು ಮಾಡಲಿಲ್ಲವೆಂದು ಪ್ರಚಾರ ಮಾಡುವುದು ಧರ್ಮವಲ್ಲವೆಂದು ನಾನು ಹೇಳುತ್ತೇನೆ. ಇದಕ್ಕೊಂದು ಉದಾಹರಣೆಯನ್ನು ಕೊಟ್ಟರೆ ತಪ್ಪಾಗಲಾರದೆಂದು ನಾನಂದು ಕೊಂಡಿ ದ್ದೇನೆ. ಈಗ ಆ ವಿಷಯಕ್ಕೆ ಅನ್ವಯಿಸುವಂತೆ ಒಂದು ಸಣ್ಣ ಕಥೆಯನ್ನು ಹೇಳುತ್ತೇನೆ. ಒಬ್ಬ ಭಿಕ್ಷುಕ ಬೀದಿ ಯಲ್ಲಿ ಭಿಕ್ಷಕ್ಕಾಗಿ ಬರುತ್ತಿದ್ದ. ಒಂದು ಮನೆಯಲ್ಲಿ ಪ್ರತಿದಿನವೂ ಆತನಿಗೆ ಭಿಕ್ಷೆ ಇಡುತ್ತಿದ್ದರು. ಹೀಗೆಯೇ ಮತ್ತೊಂದು ಮನೆಗೆ ಪ್ರತಿದಿನ ಹೋಗುತ್ತಾ, ಭಿಕ್ಷೆ ಯನ್ನು ಪಡೆಯುದೆಯೇ ಇದ್ದ. ಈ ರೀತಿ ತನ್ನ ಜೀವನ ವನ್ನು ಸಾಗಿಸುತ್ತಿದ್ದ. ಒಂದುದಿನ ತಾನು ತಂದಿದ್ದ ಅಕ್ಕಿಯೆಲ್ಲಾ ಮುಗಿಯಿತು. ಆಗ ಮೊದಲಿನಿಂದಲೂ ಪ್ರತಿದಿನವೂ ಭಿಕ್ಷೆ ನೀಡುತ್ತಿದ್ದಂಥ ಮನೆಗೆ ಹೋದಾಗ ಪಕ್ಕದ ಮನೆಗೆ ಹೋಗಿ ಎಂದು ಹೇಳಿದಾಗ ಆ ಭಿಕ್ಷುಕ ಸಿಟ್ಟಿಗೆದ್ದು ಅವರನ್ನು ಮುಂಡೆಮಕ್ಕಳು ಈ ದಿನ ಕೊಡ ಲಿಲ್ಲ ಎಂದು ಬೈದು ಪಕ್ಕದ ಮನೆಗೆ ಹೋದ, ಅಲ್ಲಿಯೂ ಅವನಿಗೆ ಭಿಕ್ಷ ಸಿಗಲಿಲ್ಲ. ಅದಕ್ಕೆ ಅವನ......

ಶ್ರೀ ಎಸ್. ಎಂ. ಕೃಷ್ಣ.—ಮುಂಡೆಮಕ್ಕಳು ಎಂಬ ಪದ ಪಾರ್ಲಿಮೆಂಟರಿಯೇ!

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕೆಲವು ಸಂದರ್ಭಗಳಲ್ಲಿ ಕೇವಲ ಶಬ್ದಗಳನ್ನು ಇಲ್ಲಿ ಹೇಳು ವುದು ವಾಡಿಕೆ. ಆ ರೀತಿ ಹೇಳಿದೆ. ಅದು ಪಾರ್ಲಿ ಮೆಂಟರಿಯೇ ಹೌದು. ನಾನು ಪಾರ್ಲಿಮೆಂಟರಿ ಪದ ಗಳಿಗೆ ಅನ್ವಯಿಸಿಕೊಂಡೇ ಹೇಳಿದ್ದು.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ತಾನು ಬಹಳ ದೊಡ್ಡ ಧರ್ಮಿಷ್ಠ ತನ್ನ ಮನೆ ಬಾಗಿಲಿಗೆ ಬರುವವರೆಲ್ಲರೂ ಲೋಭಿಗಳು ಎನ್ನುವ ಅರ್ಥ ಬರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿಯಾದಂಥ ಮಾತನ್ನು ಹೇಳಬಾರದು

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ಇದನ್ನು ಏಕೆ ಹೇಳಿದೆನೆಂದರೆ ಸರ್ಕಾರ ಶೇ. 99 ಒಳ್ಳೆಯದನ್ನು ಮಾಡಿದರೆ ಯಾರೂ ಶಹಬಾಸ್ ಗಿರಿ ಕೊಡುವಹಾಗಿಲ್ಲ. ಎಲ್ಲಾದರೂ ಅಕಸ್ಮಾತ್ ಜಾರಿ ದರೆ, ಜಾರಿಲ್ಲ, ಜಾರುವುದಿಲ್ಲ ಜಾರುತ್ತಾರೆಂದರೆ ಅವ ರನ್ನೂ ಎಂದಿಗೂ ಬೈಯ್ಯಬಾರದು. ನೀವು ಬೈದರೆ ಜಾರಿಕೊಳ್ಳುವುದೆಲ್ಲಾ ಸರಿಹೋಗುತ್ತದೆಂದು ಹೇಳು ವುದಕ್ಕಾಗುವುದಿಲ್ಲ. ಸರ್ಕಾರ ಮಾಡುವ ಒಳ್ಳೆಯ ಕೆಲಸಗಳನ್ನು ತಾವು ಯೋಚನೆ ಮಾಡಬೇಕು. ಈ ವರ್ಷದೊಳಗೆ ಎಷ್ಟು ಪ್ರೈಮರಿ ಶಾಲೆಗಳನ್ನು ಮತ್ತು ಹೈಸ್ಕೂಲುಗಳನ್ನು ನಡೆಸುವುದಕ್ಕೆ ಸರ್ಕಾರ ಉತ್ಪ ತ್ತಿಯ ಅರ್ಧದಷ್ಟು ಹಣವನ್ನು ಕೊಟ್ಟರೂ ಸಾಕಾಗು ವುದಿಲ್ಲವೆಂದು ನಾನು ಹೇಳುತ್ತೇನೆ. ಅಷ್ಟಾದರೂ ಕೂಡ ಸರ್ಕಾರದವರು ದೀರ್ಘವಾಗಿ ಯೋಚಿಸಿ ಸರ್ಕಾರದ ಒಟ್ಟು ಉತ್ಪತ್ತಿಯಲ್ಲಿ ಹೆಚ್ಚು ಹಣವನ್ನು ಈ ಬಾಬಿಗೆ ಉಪಯೋಗಿಸಬೇಕೆಂದು ಹೇಳಿದ್ದಾರೆ. ಈ ವರ್ಷ ಷುರುಮಾಡಿದ ಸ್ಕೂಲುಗಳು ಎಷ್ಟು, ಇದ ಕ್ಕಾಗಿ ಖರ್ಚುಮಾಡಿದ ಹಣವನ್ನು ನಾವು ಲೆಖ್ಖಮಾಡಿ ದರೆ ಒಂದಕ್ಕೆರಡರಷ್ಟು ಕೆಲಸ ನಡೆದಿದೆಯೆಂದು ನಾನು ಧಾರಾಳವಾಗಿ ಹೇಳಬಹುದು. ಅಂಥಾದ್ದಕ್ಕೆ ಇದುವರೆಗೂ ಶಹಬಾಸ್ ಗಿರಿ ಕೊಡಲಿಲ್ಲ. ಆದರೆ ಕೆಲವು ತಿಂಗಳುಗಳ ಕೆಳಗೆ ಫೀಸ್ ಹೆಚ್ಚುಮಾಡಿದ್ದರ ಬಗ್ಗೆ ಜಿಜ್ಞಾಸೆಯನ್ನುಂಟುಮಾಡಿ ನಮ್ಮ ಸಹನೆಮೀರಿ ಮಾತನಾಡಿ ಪರಿಸ್ಥಿತಿಯನ್ನು ಸ್ವಲ್ಪ ಹದಗೆಡಿಸುವ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿದಿರಿ. ಅದು ಯಾರ ತಪ್ಪು ಎಂಬುದನ್ನು ಈ ಸಾಮಾನ್ಯ ಸಭೆ ಅರ್ಥಮಾಡಿ ಕೊಂಡಿದೆ. ಹೊರಗಡೆಯ ಜನರೂ ಸಹ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಇವತ್ತು ಒಂದು ವಿಷಯ ವನ್ನು ಪರಿಶೀಲನೆ ಮಾಡಬೇಕಾಗಿದೆ. 1200 ರೂ ಪಾಯಿಗಳ ಆದಾಯ ಇರತಕ್ಕ ಮನುಷ್ಯನಿಗೆ ತನ್ನ ಹುಡುಗ ಹೈಸ್ಕೂಲ್ ಮಟ್ಟವನ್ನು ಪೂರೈಸತಕ್ಕ ಸಮಯದವರೆವಿಗೆ ವಿನಾಯಿತಿ ಇದೆ. ಆ ರೀತಿಯಾಗಿರ ತಕ್ಕ ರೂಲ್ಸನ್ನು ಬದಲಾವಣೆಮಾಡಿ ಈಗ 2400 ರೂ ಪಾಯಿಗಳ ಆದಾಯ ಬರತಕ್ಕವರಿಗೆ ರಿಯಾಯಿತಿ ಕೊಡಬೇಕೆಂದಿದೆ. ಈ ರಿಯಾಯಿತಿ ಪಡೆಯುವವರು ಶೇ. 87 ರಷ್ಟು ಜನರು ಇದ್ದಾರೆಂದು ಹೇಳಬಹುದು. ಅವರೆಲ್ಲಾ ಸರ್ಕಾರೀ ಹೈಸ್ಕೂಲುಗಳಿಗೆ ಹೋಗತಕ್ಕ ಮಕ್ಕಳು ಎಂಬುದಾಗಿ ಭಾವಿಸಿದರೆ ... ...

ಶ್ರೀ ಎಸ್. ಆರ್. ಕಂಠಿ.—ಇದು ಎಲ್ಲರಿಗೂ ಅಪ್ಲೈ ಯಾಗುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇಷ್ಟು ಜನ ವಿದ್ಯಾರ್ಥಿಗಳಿಗೆ ವಿನಾಯಿತಿ, ರಿಯಾಯಿತಿ ಕೊಟ್ಟಿವು ಎಂದು ಹೇಳಿದರೆ ಶಹಬಾಸ್‌ಗಿರಿ ಇಲ್ಲ ನೀವು ಇಂಥಾದ್ದು ಒಂದನ್ನಾದರೂ ಕೆಲಸ ಮಾಡಲಿಲ್ಲವೆಂದು ಹೇಳುತ್ತೀರಿ. ಈಗ ಸ್ಕಾಲರ್‌ಷಿಪ್, ಫ್ರೀಸ್ಟೂಡೆಂಟ್ ಷಿಪ್ ಇಂತಹ ಅನೇಕ ಸೌಲಭ್ಯಗಳು ಇವೆ. ಅದರ ಜೊತೆಗೆ ಸರ್ಕಾರದವರು ಟ್ರಿಬ್ಬಲ್ ಬೆನಿಫಿಟ್ಸ್ ಎಂದು ಅಧ್ಯಾಪಕರಿಗೆ ಪೆನ್‌ಷನ್, ಗ್ರ್ಯಾಚುಯಿಟಿ, ಪ್ರಾವಿಡೆಂ ಟ್ ಫಂಡ್ ಎಂಬ ದಾಗಿ ಕೊಡಬೇಕೆಂದು ಯೋಚನೆ ಮಾಡಿದ್ದಾರೆ. ಇದೆಲ್ಲದಕ್ಕೂ ಶ್ರೀಮಾನ್ ಶಿವಪ್ಪನವರ ಸಮ್ಮತಿಯಿಲ್ಲವೆಂದು ನನಗೆ ಕಾಣುತ್ತದೆ. ಏರಿಸಿರತಕ್ಕ ಫೀ ಒಂದನ್ನು ಇಳಿಸಿಬಿಟ್ಟು ಬಾಕಿ ಏನು ಮಾಡದಿದ್ದರೂ ಪರವಾಇಲ್ಲವೆಂದು ನನಗೆ ಕಾಣುತ್ತದೆ. ಆ ರೀತಿ ಅವರು ಹೇಳುತ್ತಿದ್ದಾರೋ ಏನೋ ಗೊತ್ತಿಲ್ಲ. ಹೀಗೆ ಕಾಲೇಜಿನಲ್ಲಿ 3600 ರೂಪಾಯಿಗಳವರೆಗೆ ಆದಾಯ ವಿರತಕ್ಕ ಮಧ್ಯವರ್ಗದ ಜನಗಳಿಗೆ ಸ್ವಲ್ಪಮಟ್ಟಿಗೆ ರಿಯಾ ಯಿತಿ ಕೊಡುವುದು ಸೂಕ್ತವೆಂದು ತೀರ್ಮಾನ ಮಾಡಿ

ದ್ದಾರೆ. 3600 ರೂಪಾಯಿಗಳ ವರಮಾನ ಇವತ್ತು ಒಂದು ವರ್ಷಕ್ಕೆ ಎಂದು ಹೇಳಿದ್ದಾರೆ. ಫೀ ಹೆಚ್ಚಿಸುವುದನ್ನು ಹಂತ ಹಂತವಾಗಿ ಮಾಡಿ ಎಂದು ಕೆಲವರು ಹೇಳಿದ್ದಾರೆ. ಈ ವರ್ಷ ಮಾಡಿದ್ದೇವೆ ಮುಂದಿನ ವರ್ಷ ಇದನ್ನು ಪರಿಶೀಲನೆ ಮಾಡುವಾಗ ಯೋಚನೆ ಮಾಡೋಣ. 2400 ರೂಪಾಯಿಗಳ ಆದಾಯ ಬರತಕ್ಕವರಿಗೆ ಅರ್ಧದಷ್ಟು ಫ್ರೀ ಸ್ಟೂಡೆಂಟ್‌ಷಿಪ್ ಮತ್ತು ಹಾಫ್ ಫ್ರೀ ಸ್ಟೂಡೆಂಟ್‌ಷಿಪ್ ಮತ್ತು ಸ್ಕಾಲರ್‌ಷಿಪ್ ಕೊಡುತ್ತೇವೆಂದು ಈಗ ಸರ್ಕಾರದವರು ಹೇಳಿದ್ದಾರೆ. ಇವತ್ತಿನ ವರೆಗೂ ಮೈಸೂರು ವಿಶ್ವ ವಿದ್ಯಾ ನಿಲಯದಲ್ಲಿ ಇದು ಇದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸದಸ್ಯರು ಬಡ್ಜೆಟ್ ಭಾಷಣ ಮಾಡುವಾಗ ಏನು ಹೇಳಿದರು ಈ ಸಂದರ್ಭದಲ್ಲಿ ಎಂಬುದನ್ನು ತೆಗೆಸಿ ನೋಡಬೇಕು, ಸ್ವಾಮಿ. ಈಗ ಹೇಳುವುದು ಸರಿಯೇ ಅಥವಾ ಹಿಂದೆ ಹೇಳಿದ್ದು ಸರಿಯೇ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಅವತ್ತು ನಾನು ಏನು ಹೇಳಿದೆನೋ ನನಗೆ ಈಗ ಜ್ಞಾಪಕವಿಲ್ಲ. ಆಗ ಒಂದು ಸಮಯ ಆ ರೀತಿ ನಾನು ಹೇಳಿದ್ದರೂ ಅದು ಅವತ್ತಿನ ಸನ್ನಿವೇಶಕ್ಕೆ ಸರಿಹೊಂದಿರಬಹುದು; ಸರ್ಕಾರದವರು ಪರಿಶೀಲನೆ ಮಾಡಲಿ ಎಂಬ ಒಂದು ದೃಷ್ಟಿಯಿಂದ ಆ ರೀತಿ ಹೇಳಿದ್ದರೂ ಹೇಳಿರಬಹುದು. ಆಗ ನಾನು ಆರೀತಿ ಹೇಳಿದ್ದಕ್ಕೆ ಫಲ ದೊರೆತಿದೆ ಎಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಮೈಸೂರು ಯೂನಿವರ್ಸಿಟಿ ಕಾಲೇಜುಗಳಲ್ಲಿ ಫೀಜನ್ನು ಫಿಕ್ಸ್ ಮಾಡಿರುವ ವಿಷಯದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಫ್ರೀಯೂನಿವರ್ಸಿಟಿ ಆರ್ಟ್ಸ್ ಅಂಡ್ ಕಾಮರ್ಸ್ ಕಾಲೇಜಿನಲ್ಲಿ 90 ರೂಪಾಯಿ ಫೀಜನ್ನು ಗೊತ್ತುಮಾಡಿದ್ದಾರೆ. ಅದು ಯಾವಕಾಲದಲ್ಲಿ ಮಾಡಿದ್ದು ಎಂದರೆ ಧಾರಣೆವಾಸಿಗಳು ಅಗ್ಗವಾಗಿ ಫಿಕ್ಸ್ ಇದ್ದಾಗ, ವರಮಾನ ಬಹಳ ಕಡಮೆ ಇದ್ದಾಗ ಮಾಡಿದ್ದು. ಇವೊತ್ತು ಪ್ರತಿಯೊಬ್ಬ ಮನುಷ್ಯನ ವರಮಾನ ಜಾಸ್ತಿಯಾಗಿದೆ. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ 20 ವರ್ಷಗಳ ಹಿಂದೆ ಇದೇ ಫೀಜು ಇತ್ತು. ಆ ಕಾಲಕ್ಕೆ 100 ರೂಪಾಯಿ ವರಮಾನ ಬರುತ್ತಿದ್ದ ಸಂಸಾರಕ್ಕೆ ಇವೊತ್ತು 300 ರೂಪಾಯಿ ಬರುತ್ತದೆ ಎಂದು ಹೇಳಿದರೆ ಯಾರೂ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ಪ್ರತಿಯೊಬ್ಬ ಮನುಷ್ಯನ ವರಮಾನವೂ ಜಾಸ್ತಿಯಾಗಿದೆ. ಒಂದು ಕನಿಷ್ಠ ಕೂಲಿಯ ದರವನ್ನೇ ತೆಗೆದುಕೊಂಡರೂ ಕೂಡ ಜಾಸ್ತಿಯಾಗಿದೆ. ವರಮಾನದ ದೃಷ್ಟಿಯಿಂದ ನೋಡಿದರೆ ಒಂದಕ್ಕೆ ಮೂರರಷ್ಟು ಹೆಚ್ಚಾಗಿದೆ. ಆ ಮಟ್ಟಕ್ಕೆ ಬದಲಾಯಿಸುತ್ತಾ ಹೋಗುವುದು ಸರಿಯಲ್ಲ ಎಂದು ಹೇಳಿದರೆ ಅದು ತಪ್ಪಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆವೊತ್ತು ಮನಿ ಮಾರ್ಕೆಟ್, ರೂಪಾಯಿಯ ವ್ಯಾಲ್ಯೂ ಏನಿತ್ತು, ಇವೊತ್ತು ಏನಿದೆ, ಇನ್‌ಫ್ಲೇಷನ್ ಎಷ್ಟು ದೂರ ಹೋಗಿದೆ ಎಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ಹಿಂದೆ 100 ರೂಪಾಯಿ ವರಮಾನ ಬರತಕ್ಕವರು 3 ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸಬಹುದಾಗಿತ್ತು. ಆದರೆ ಇವೊತ್ತು ಅವರಿಗಿರುವ ವರಮಾನದಲ್ಲಿ ಒಬ್ಬ ಮಗನನ್ನು ವಿದ್ಯಾಭ್ಯಾಸ ಮಾಡಿಸುವುದಕ್ಕಾಗುವುದಿಲ್ಲ. ಇದನ್ನು ಸ್ವಲ್ಪ ಯೋಚನೆಮಾಡಿ.

Sri B. D. JATTI.—If there is inflation in the State, it is applicable to one and all. It cannot be an exception to 'A' or 'B'. So it must be raised..

Sri C. J. MUCKANNAPPA.—Jamkhandi Jattti was a Chief Minister- His own son cannot be a Chief Minister.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಅಧ್ಯಾಪಕರು, ಪ್ರೊಫೆಸರುಗಳು, ಲೆಕ್ಚರರುಗಳು ಇವರುಗಳಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೋಸ್ಕರ ಹಿಂದೆ ಎಷ್ಟು ಖರ್ಚಾಗುತ್ತಿತ್ತು, ಇವೊತ್ತು ಎಷ್ಟು ಖರ್ಚಾಗುತ್ತಿದೆ ಎನ್ನುವುದನ್ನು ಸ್ವಲ್ಪ ನಿಗಾ ಇಟ್ಟುಕೊಂಡು ಸ್ವಲ್ಪ ಮಟ್ಟಿಗೆ ಫೀಜನ್ನು ಹೆಚ್ಚಿಸಿದ್ದೇವೆಂದರೆ ಗಾಬರಿ ಯಾಗಬೇಕಾಗಿಲ್ಲ. ಒಂದು ವಿಚಾರವನ್ನು ಹೇಳುತ್ತೇನೆ ರಾಜ್ಯ ಪುನರ್ ವಿಂಗಡಣೆಯಾಗಿ ಹೊಸ ಮೈಸೂರು ರಾಜ್ಯ ಸ್ಥಾಪನೆಯಾದಮೇಲೆ ಉಂಟಾದಂಥ ಪರಿಸ್ಥಿತಿಯನ್ನು ಯೋಚನೆ ಮಾಡುವುದಾದರೆ ಹಳೆಯ ಮೈಸೂರಿನ ಭಾಗದಲ್ಲೇ ಒಂದು ತರಹ ಇದೆ, ಮಂಗಳೂರಿನಲ್ಲಿ ಒಂದು ತರಹ ಇದೆ. ಗುಲ್ಬಾರ್ಗದಲ್ಲಿ ಒಂದು ತರಹ ಇದೆ. ಅವುಗಳನ್ನೆಲ್ಲಾ ಸಮನ್ವಯ ಮಾಡಬೇಕು, ಎಲ್ಲಾ ಒಂದಾಗಬೇಕು ಎಂದು ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಕಾನೂನುಗಳು ಸಮನ್ವಯ ವಾಗಬೇಕೆಂದು ಹೇಳಿದರೇ ಹೊರತು ಕಾಲೇಜುಗಳ ಫೀಜು ಸಮನ್ವಯವಾಗಬೇಕೆಂದು ಯಾರೂ ಹೇಳಲಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ 1956ನೇ ಇಸವಿ ನವಂಬರ್ ಒಂದನೇ ತಾರೀಖು ಹೊಸ ರಾಜ್ಯ ಆದಮೇಲೆ ಈ ರಾಜ್ಯದಲ್ಲಿ ಏಕರೂಪವಾದ ಕನೂನುಗಳು ಕೂಡಲೇ ಆಗಬೇಕು, ಒಂದೇ ಆಡಳಿತ ವ್ಯವಸ್ಥೆ ಆಗಬೇಕೆಂದು ಹೇಳಿ ಇವೊತ್ತಿನ ವರೆಗೂ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅದನ್ನು ಸಾಧಿಸುವುದಕ್ಕೆ ಇನ್ನೂ ಆಗಿಲ್ಲ. ಅದನ್ನು ಮಾಡುವುದಕ್ಕೆ ಇನ್ನೂ ಕೆಲವು ಕಾಲ ಆಗುತ್ತದೆ. ಒಂದು ರಾಜ್ಯ ಹೊಸದಾಗಿ ನಿರ್ಮಾಣವಾದ ಸಂದರ್ಭದಲ್ಲಿ ಅನೇಕ ಕಾನೂನುಗಳನ್ನು ಸಮನ್ವಯ ಮಾಡತಕ್ಕ ಸಂದರ್ಭದಲ್ಲಿ ಕೆಲವರಿಗೆ ನೋವು ಆದರೂ ಅದನ್ನು ಒಪ್ಪಿಕೊಳ್ಳಬೇಕು. ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿ ಸೇಲ್ಸ್ ಟ್ಯಾಕ್ಸ್ ಜಾರಿಮಾಡಿದಾಗ ಕೊಡಗಿನಲ್ಲಿ ಸೇಲ್ಸ್ ಟ್ಯಾಕ್ಸ್ ಇರಲಿಲ್ಲ. ಎಲ್ಲಾ ಕಡೆಗೂ ಒಂದೇ ವಿಧವಾದ ಯೂನಿಫಾರಮ್ ಸೇಲ್ಸ್ ಟಾಕ್ಸ್ ಹಾಕಿದರು. ಆಗ ಕೂರ್ಗಿನವರು ನಾವು ಸೇಲ್ಸ್ ಟ್ಯಾಕ್ಸ್ ಕೊಡುವುದಕ್ಕೆ ತಯಾರಾಗಿಲ್ಲ ಎಂದು ಪ್ರೊಟೆಸ್ಟ್ ಮಾಡಿದರೇ?

ಶ್ರೀ ಬಿ. ಚನ್ನಬೈರೇಗೌಡ.—ನಿಮಗೆ ಯಾವ ಪೋರ್ಟ್ ಫೋಲಿಯೋವನ್ನು ಕೊಟ್ಟಿದ್ದಾರೆಂದು ನೀವು ಆ ವಿಷಯವನ್ನು ಹೇಳುತ್ತಿದ್ದೀರಿ?

Mr. SPEAKER.—When you are in error, please do not persist in it. Every member is entitled to deal with it.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇದನ್ನು ನಾನು ಹೇಳುವಾಗ ಈ ಸಭೆಯ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಫ್ರೀಯೂನಿವರ್ಸಿಟಿ ಆರ್ಟ್ಸ್ ಅಂಡ್ ಕಾಮರ್ಸ್

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ಕ್ಲಾಸುಗಳಿಗೆ ಮೈಸೂರಿನಲ್ಲಿ 90 ರೂಪಾಯಿ ಫೀಜ್ ಇದೆ. ಮಂಗಳೂರಿನಲ್ಲಿ ಮತ್ತು ಕೂರ್ಗಿನಲ್ಲಿ 144 ರೂಪಾಯಿ ಇದೆ. ಗುಲ್ಬರ್ಗಾದಲ್ಲಿ 140 ಇದೆ. ಮದ್ರಾಸಿನಲ್ಲಿ 144 ರೂಪಾಯಿ ಇದೆ. ಕರ್ಣಾಟಕ ಯೂನಿವರ್ಸಿಟಿಯಲ್ಲಿ 180 ರೂಪಾಯಿ ಇದೆ. ಇದನ್ನೆಲ್ಲಾ ಹೇಳುವಾಗ ಮೈಸೂರು ಯೂನಿವರ್ಸಿಟಿಯಲ್ಲಿ ಈಗ ಹಾಕಿರತಕ್ಕಂಥ ಫೀಜು ಏನಿದೆ ಅದರಿಂದ ಎಲ್ಲ ಕಡೆಗಳಲ್ಲಿಯೂ ಏಕರೂಪತೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರ. ಸುಮ್ಮನೆ ಯಾವುದೋ ಒಂದು ಫೀಜನ್ನು ಹಾಕಿಲ್ಲ. ಮೈಸೂರು ಯೂನಿವರ್ಸಿಟಿಯಲ್ಲಿ 90 ರೂಪಾಯಿಗಳಿಂದ ಏಕದಮ್ 180 ರೂಪಾಯಿಗಳಿಗೆ ಹೆಚ್ಚಿಸಿಲ್ಲ. ಮದ್ರಾಸ್ ಪ್ರಾಂತದಲ್ಲಿ ಮತ್ತು ಕೂರ್ಗಿನಲ್ಲಿ ಇದ್ದಂಥಾ ಒಂದು ದರವನ್ನು ಮೈಸೂರಿನಲ್ಲಿಯೂ ಮಾಡಿದರೆ, ಎಂದರೆ 144 ರೂಪಾಯಿಗಳನ್ನು ಫಿಕ್ಸ್ ಮಾಡಿದರೆ, ಇದರಿಂದ ಮೊದಲಿಗೂ ಈಗ ಮಾಡಿರುವುದಕ್ಕೂ ಸುಮಾರು 50 ರೂಪಾಯಿಗಳು ಹೆಚ್ಚಾಗಬಹುದು. 10 ತಿಂಗಳಿಗೆ 50 ರೂಪಾಯಿ ಒಂದು ತಿಂಗಳಿಗೆ 5 ರೂಪಾಯಿ ಹೆಚ್ಚಾಯಿತು. ಇದರಿಂದ ಯಾವುದೂ ಹೆಚ್ಚಾದಂತೆ ಕಾಣಲಿಲ್ಲ. ಆದ್ದರಿಂದ ಫೀಜು ಹೊರೆ ಮೈಸೂರು ಮಕ್ಕಳಿಗೆ ಜಾಸ್ತಿಯಾಗಿದೆ ಎಂದು ಹೇಳತಕ್ಕದ್ದು ಸರಿಯಲ್ಲ. ಈ ಸಂಬಂಧದಲ್ಲಿ ವಿದ್ಯಾರ್ಥಿಗಳ ತಂದೆ ತಾಯಿಗಳನ್ನು ಕರೆಸಿ ಒಂದು ಪೇರೆಂಟಲ್ ಮೀಟಿಂಗ್ ಮಾಡಿ ವಿದ್ಯಾಮಂತ್ರಿಗಳು ಅವರೊಡನೆ ಈ ಫೀಜಿನ ಏರಿಕೆಯ ಸಂಬಂಧದಲ್ಲಿ ಸಮಾಲೋಚನೆಮಾಡಿ ಈ ಒಂದು ಆರ್ಡರನ್ನು ತಂದಿದ್ದಾರೆ. ನಾನೂ ಸಹ ಆ ಮೀಟಿಂಗಿಗೆ ಹೋಗಿದ್ದೆ. ಆದ್ದರಿಂದ ಇದನ್ನು ಮಾಡುವಾಗ ಯೋಚನೆ ಮಾಡತಕ್ಕ ಒಂದು ಕರ್ತವ್ಯ ಇದೆ; ಅವಶ್ಯಕತೆ ಇದೆ ಎನ್ನುವ ದೃಷ್ಟಿಯಿಂದ ಅವರೊಡನೆ ಸಮಾಲೋಚನೆಮಾಡಿ ಈಗ ಅರ್ಧ ಫೀಜನ್ನು ರಿಯಾಯ್ತಿ ಮಾಡೋಣ ಎಂದು ಮಾಡಿದ್ದಾರೆ. ಅಷ್ಟೇ ಅಲ್ಲ. ಅದರ ಜೊತೆಗೆ ಅನೇಕ ಸೌಲಭ್ಯಗಳನ್ನು ಕೂಡ ಸೇರಿಸಿ ಕೊಟ್ಟಿದ್ದಾರೆ. ಮುಂದೆ ಕಾಲೇಜುಗಳ ಫೀಜನ್ನು ಏರಿಸುವ ಸಂದರ್ಭದಲ್ಲಿ ಬಹುಶಃ ಮಾನ್ಯ ವಿದ್ಯಾ ಸಚಿವರು ಈ ಸಭೆಯ ಅಭಿಪ್ರಾಯವನ್ನು ತಿಳಿದು ಅದನ್ನು ಏರಿಸುತ್ತಾರೆ. ಮತ್ತೆ ಇದನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ಅವಕಾಶವಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಹಾಗೆ ಕೆಲವು ಹೊಸ ಹುದ್ದೆಗಳನ್ನು ಮಾಡಿ ಕೆಲವು ಹುದ್ದೆಗಳನ್ನು ರೆಡ್ಯೂಜ್ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕಾನೂನಿನ ಪರಿಮಿತಿಯೊಳಗೆ ಇಲ್ಲದೆ ಇದ್ದುದನ್ನು ಮಾಡಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ. ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸದ ಮಟ್ಟ ಕಡಮೆಯಾಗುತ್ತಿದೆಯೆಂದು ಬಹಳ ಹಿಂದಿನಿಂದಲೂ ಹೇಳುತ್ತಿದ್ದಾರೆ. ಯೂನಿವರ್ಸಿಟಿಯ ವಿದ್ಯಾಭ್ಯಾಸದ ಮಟ್ಟ ಬಹಳ ಮಟ್ಟಿಗೆ ಕಡಮೆಯಾಗುತ್ತಿದೆ ಎಂದು ಅನೇಕ ಮಾನ್ಯ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿ ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸದ ಮಟ್ಟ ಕಡಮೆ ಯಾಗಿರಬೇಕಾದರೆ ಅದಕ್ಕೆ ಕಾರಣವೇನು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಯೂನಿವರ್ಸಿಟಿಯಲ್ಲಿ ಮಕ್ಕಳಿಗೆ ಪಾಠವನ್ನು ಹೇಳತಕ್ಕ ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಮಾರ್ಪಾಡಾಗುವುದು ಅಗತ್ಯವಿದೆ ಎಂದು ಒಪ್ಪಿಕೊಂಡಿದ್ದಾರೆ. ಅದನ್ನು ಹೇಗೆ ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಟ್ಯೂಟರ್ಸ್ ಮತ್ತು ಡೆಮಾನ್‌ಸ್ಟ್ರೇಟರ್ಸ್ ಎನ್ನುವ ಹುದ್ದೆಗಳು ಹಿಂದೆ ನಾವು ಕಾಲೇಜಿನಲ್ಲಿ ಓದುತ್ತಿದ್ದಾಗಲೂ ಇದ್ದುವು. ಈ ಮಧ್ಯೆ ಇರಲಿಲ್ಲ. ಇವೊತ್ತು ಒಂದು ಲೆಕ್ಚರ್ ಕ್ಲಾಸಿನಲ್ಲಿ ಹುಡುಗನಿಗೆ ಅರ್ಥಮಾಡಿಕೊಳ್ಳತಕ್ಕ ಯೋಗ್ಯತೆ ಬಂದಿದೆಯೋ ಅಥವಾ ಇಲ್ಲವೋ, ಲೆಕ್ಚರರ್ ಹೇಳಿದ್ದನ್ನು ಗ್ರಹಿಸತಕ್ಕ ಶಕ್ತಿ ಬಂದಿದೆಯೋ ಇಲ್ಲವೋ, ಅವರು ಹೇಳಿದ್ದನ್ನು ಬರೆದುಕೊಂಡು ಹೋಗಿ ವ್ಯವಸ್ಥಿತ ಅಭ್ಯಾಸ ಮಾಡತಕ್ಕ ಶಕ್ತಿ ಅವನಿಗೆ ಇದೆಯೋ ಇಲ್ಲವೋ ಎಂಬುದನ್ನು ತಿಳಿಯಬೇಕು.

ಈ ನ್ಯೂನತೆಗಳು ಇರಬಹುದು. ಅದಕ್ಕೆ ಕಾರಣವೇನೆಂದರೆ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಸಂಪರ್ಕವಿಲ್ಲದೆ ಇರುವುದು ಈ ವಿದ್ಯಾಭ್ಯಾಸದ ಕ್ರಮದಲ್ಲಿ ಇರುವ ದೊಡ್ಡ ದೋಷ. ಇದನ್ನು ನಿವಾರಣೆ ಮಾಡಬೇಕಾದ ದಾರಿಯನ್ನು ಈ ಸಭೆ ಯೋಚನೆ ಮಾಡಬೇಕಾಗುತ್ತದೆ. ಡೆಮಾನ್‌ಸ್ಟ್ರೇಟರ್ಸ್, ಟ್ಯೂಟರ್ಸ್ ಬೇರೆ ಬೇರೆ ಇರುತ್ತಾರೆ. ಲೆಕ್ಚರರ್ಸ್ ಆಗಿ ಪ್ರಮೋಟ್ ಆಗಬೇಕಾಗಿರುವವರು ಅನೇಕ ಜನರಿದ್ದಾರೆ. ಈ ಸಮಸ್ಯೆ ಬಗೆ ಹರಿಸುವುದರಲ್ಲಿ ಸರಿಯಾದ ಮಾರ್ಗದಲ್ಲಿ ಹೋಗುತ್ತ ಇದ್ದೇವೆಯೇ ಇಲ್ಲವೇ ಎಂಬುದು ತಿಳಿಯದ ವಿಚಾರ. ಹೀಗಿರುವಾಗ ತಂದೆತಾಯಿಗಳು ತಮ ಮಕ್ಕಳಿಗೆ ಸರಿಯಾದ ತಿಳುವಳಿಕೆ ಕೊಟ್ಟರೆ ತಾನೆ ಸರಿ ಹೋಗಬೇಕಾದರೆ. ಒಂದು ಪ್ರಗತಿ ಮಾರ್ಗದಲ್ಲಿ ಹೋಗಬೇಕಾಗಿರುವಾಗ ಕಾನೂನು ರಿತ್ಯಾ ನ್ಯಾಯವಾಗಿದೆಯೇ, ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಆ ರೀತಿ ಮಾಡದೇ ಸರ್ಕಾರಕ್ಕೆ ದೋಷ ಕೊಡುವುದು ಸರಿಯಾಗುವುದಿಲ್ಲ. ಆದ್ದರಿಂದ ಈ ವಿದ್ಯಾಭ್ಯಾಸದ ಸಮಸ್ಯೆಯಲ್ಲಿ ಬಂದಿರತಕ್ಕ ಅನೇಕ ಅಂಶಗಳನ್ನು ಸ್ವಲ್ಪ ಯೋಚನೆ ಮಾಡಿದರೆ ಬಹುಶಃ ಮಂಜು ಕರಗಿದ ಹಾಗೆ ಏನೂ ಉಳಿಯದೇ ಎಲ್ಲಾ ಕರಗಿಹೋಗುತ್ತದೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The Houe will now rise and meet tomorrow at 8-30 A.M.

The House adjourned at Five Minutes past Six of the Clock to meet again at Thirty Minutes past Eight of the Clock on Thursday, the 27th September, 1962.